# ಯುಗರಶ್ಮಿ

* ಖುರ್‌ಆನ್ ವೈರಸಾಧಿಸಲು ಉಪದೇಶಿಸುವುದಿಲ್ಲ
* ವ್ರತಾನುಷ್ಠಾನ
* 'ಸನ್ಮಾರ್ಗ'ದ ವೃಥಾಲಾಪ
* ಶಿರಛೇದನ ಮತ್ತು ಕರಛೇದನ
* ಈಸಾನಬಿ ಸಹ ಜೀವಂತರಲ್ಲ
* ಇಸ್ಲಾಂ ಮತ ತತ್ತ್ವಜ್ಞಾನ

ತ್ರೈಮಾಸಿಕ
ಸಪ್ಟೆಂಬರ್ 1979
ತಬೂಕ್ 1358
ಬೆಲೆ: ರೂ. 1-00

ಯಾರು ಒಳಿತು ಮಾಡುತ್ತಾನೋ, ಅವನಿಗೆ ಅದಕ್ಕಿಂತ ಉತ್ತಮ ಪ್ರತಿಫಲ ಲಭಿಸುವುದು. ಯಾರು ಕೇಡು ಮಾಡುತ್ತಾನೋ, ಅವನಿಗೆ ತುಲ್ಯ ಪ್ರತಿಫಲ ಸಿಗುವುದು.

—ಪವಿತ್ರ ಖುರ್‌ಆನ್ (28:85)

# ಯುಗರಶ್ಮಿ ತ್ರೈಮಾಸಿಕ

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575001.

ಸಂಪುಟ: 5 ಜುಲಾಯಿ-ಸಪ್ಟೆಂಬರ್ 1979/ವಫಾ-ತಬೂಕ್ 1358 ಸಂಚಿಕೆ: 2

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


ವಿಷಯ ಸೂಚಿಕೆ: ಪುಟ


* ಪಾಪ ವಿಮುಕ್ತಿ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಖುರ್‌ಆನ್ ವೈರಸಾಧಿಸಲು ಉಪದೇಶಿಸುವುದಿಲ್ಲ ... 3
* ವ್ರತಾನುಷ್ಠಾನ ... 7
* 'ಸನ್ಮಾರ್ಗ'ದ ವೃಥಾಲಾಪ ... 11
* ಶಿರಛೇದನ ಮತ್ತು ಕರಛೇದನ ... 16
* ಈಸಾನಬಿ(ಅ.) ಸಹ ಜೀವಂತರಲ್ಲ ... 18
* ಸಂಪಾದಕರಿಗೆ ಪತ್ರ ... 19
* ಅಹ್ಮದಿಯಾ ವಾರ್ತೆಗಳು ... 20
* ಪುಸ್ತಕ ವಿಭಾಗ—ಇಸ್ಲಾಂ ಮತ ತತ್ತ್ವಜ್ಞಾನ ...



## Ahmadiyya Urdu Literature

1. Ahmadiyyat Ka Paigham
2. Imam Mahdi Ka Zuhoor
3. Sadakat Hazrat Masih Mauwood
4. Silsila Nubuwwat Allah Ka Abdi Ahd Hai
5. Khatamunnabiyeen
6. Zuroorath-e-Mazhab
7. Al-Hujjathul Baligha
8. Kya Hazrat Masih Nasiree Zinda Hein?
9. Hamari Ta'leem
10. Wafat Hazrat Masih Par Ulamaye Misr Ka Fatawe

**Will be sent free.**

Apply with 25 paise stamp for each book to:

**The Editor, Yugarashmi Kannada Quarterly,**

23/1008, Ansari Road, Bunder,

Mangalore-575001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

| ಸಂಪುಟ: 5 | ಜುಲಾಯಿ–ಸಪ್ಟೆಂಬರ್ 1979 / ವಫಾ–ತಬೂಕ್ 1358 | ಸಂಚಿಕೆ: 2 |
|---|---|---|

## ಪಾಪ ವಿಮುಕ್ತಿ

"ಪಾಪದಿಂದ ಸಂರಕ್ಷಣೆಹೊಂದುವ ಶಕ್ತಿ ಲಭಿಸಬೇಕಿದ್ದರೆ ಪೂರ್ಣವಾಗಿ ದೇವರನ್ನು ನಂಬಿಕೊಂಡಿರಬೇಕೆಂಬ ಸಂಗತಿ ನೆನಪಿರಲಿ. ಮನುಷ್ಯನ ಬಾಳ್ವೆಯ ಮಹತ್ತಾದ ಉದ್ದೇಶ ಪಾಪದಿಂದ ವಿಮೋಚನೆ ಸಹ ಆಗಿದೆ. ನೋಡಿರಿ, ಒಂದು ಶಿಶು ನೋಡಲು ಸುಂದರವಾಗಿರುವ ಒಂದು ಹಾವನ್ನು ಹಿಡಿಯಲು ಆಶಿಸುತ್ತದೆ. ಅದನ್ನು ಹಿಡಿದೇ ಬಿಡುತ್ತದೆ. ಆದರೆ ಹಾವು ಕಚ್ಚುವುದೆಂದೂ ಕಚ್ಚಿದರೆ ವಿಷವೇರಿ ತೀರಿಹೋಗುವುದೆಂದೂ ತಿಳಿದ ಪ್ರೌಢನು ಹಾವಿನ ಸಮಿಪಕ್ಕೆ ಹೋಗಲು ಹೆದರುವನು. ಹಾವು ಉಂಟೆಂದು ಸಂಶಯಪಡುವ ಮನೆಗೆ ಹೋಗಲು ಸಹ ಅವನು ಭಯಪಡುವನು. ವಿಷದ್ರಾವಕದ ಕುರಿತು ಸಹ ಇದೇ ಸ್ಥಿತಿಯಾಗಿದೆ. ಅದನ್ನು ಸೇವಿಸಿದರೆ ಅಪಾಯವೆಂದು ತಿಳಿದ ವ್ಯಕ್ತಿ ಎಂದಿಗೂ ಅದನ್ನು ಸೇವಿಸಲಿಕ್ಕಿಲ್ಲ. ಹಾಗೆಯೇ ಪಾಪವನ್ನು ಮಾರಕವಾದ ವಿಷವೆಂದು ಭಾವಿಸದವನು ಸುರಕ್ಷಿತನಾಗಿರಲಾರನು. ಸರಿಯಾದ ಜ್ಞಾನ ಲಭಿಸದಿರುವ ತನಕ ಈ ಬಗ್ಗೆಯ ಅರಿವು ಪೂರ್ಣವಾಗಿರಲಿಕ್ಕಿಲ್ಲ.

ದೇವರ ಮೇಲೆ ನಂಬಿಕೆ ಇದ್ದೂ ಪಾಪ ಮಾಡಿದರೆ ಶಿಕ್ಷೆ ಲಭಿಸಬಹುದೆಂದು ಅರಿವು ಇದ್ದೂ ಒಬ್ಬನು ಪಾಪದಲ್ಲಿ ಮುಳುಗಿಹೋಗುವುದು ಯಾವ ಕಾರಣದಿಂದ? ಅದು ಪಾಪವನ್ನು ಬಿಟ್ಟುಬಿಡುವ ಮನಸ್ಥಿತಿ ಕೈಗೊಳ್ಳಲು ಸಾಕಷ್ಟು ಜ್ಞಾನ ಆತನಿಗೆ ಲಭಿಸದಿರುವುದರಿಂದಾಗಿದೆ" (ಮಲ್‌ಫೂಸಾತ್, ಸಂ: 8, ಪುಟ 253).

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ನೈತಿಕ ಮೌಲ್ಯಗಳು

1. 'ಇತರರು ಒಳಿತು ಮಾಡಿದರೆ ನಾವು ಸಹ ಒಳಿತು ಮಾಡುವೆವು; ಅವರು ಕೆಡುಕು ಮಾಡುವುದಾದರೆ ನಾವು ಸಹ ಹಾಗೆಯೇ ಮಾಡುವೆವು' ಎಂದು ಹೇಳುವವರ ಹಾಗೆ ಆಗದಿರಿ. ನೀವು ನಿಮ್ಮದೇ ರೀತಿಯನ್ನು ಅನುಸರಿಸಿರಿ: ಇತರರು ಒಳಿತು ಮಾಡುವಾಗ ನೀವು ಸಹ ಒಳಿತು ಮಾಡಿರಿ. ಅವರು ಕೆಡುಕು ಮಾಡುವಾಗ ನೀವು ಕೆಡುಕಿನಿಂದ ದೂರವಿದ್ದುಕೊಳ್ಳಿರಿ.

2. ದೀರ್ಘಾಯುಸ್ಸು ಅನುಗ್ರಹಿಸಲ್ಪಟ್ಟವರೂ ಸತ್‌ಸ್ವಭಾವಿಗಳೂ ಉತ್ತಮರಾಗಿದ್ದಾರೆ.

3. ನಾಲಗೆಯನ್ನೂ ವಿಕಾರೋದ್ವೇಗಗಳನ್ನೂ ನಿಯಂತ್ರಿಸಿರಿ; ನಿಮಗೆ ಸ್ವರ್ಗದಲ್ಲಿ ಪ್ರವೇಶಿಸಬಹುದು.

4. ಕುಟುಂಬಬಂಧವನ್ನು ವಿಚ್ಛೇಧಿಸಿದವರೆಡೆಯಲ್ಲಿ ಆ ಬಂಧವನ್ನು ಪುನಃ ಸ್ಥಾಪಿಸಿರಿ. ನಿಮ್ಮೊಡನೆ ಅನ್ಯಾಯವಾಗಿ ವರ್ತಿಸಿದವರೊಡನೆ ಉದಾರತೆಯನ್ನು ತೋರಿಸಿರಿ. ನಿಮಗೆ ವಿರುದ್ಧವಾಗಿದ್ದರೂ ಸತ್ಯವನ್ನೇ ನುಡಿಯಿರಿ.

5. ಹಾಜರಿಲ್ಲದ ಒಬ್ಬ ಸಹೋದರನ ವಿರುದ್ಧವಾದ ಒಂದು ಆರೋಪವನ್ನು ಖಂಡಿಸುವವನನ್ನು ಅಲ್ಲಾಹು ನರಕದಿಂದ ರಕ್ಷಿಸುವನು.

6. ನಿಮ್ಮ ಕುರಿತು ಇನ್ನೊಬ್ಬನು ಹೇಳುವುದನ್ನು ಇಚ್ಛಿಸದ ಒಂದು ಸಂಗತಿಯನ್ನು ನೀವು ಇನ್ನೊಬ್ಬನ ಕುರಿತು ಹೇಳಬಾರದು; ಅದು ಪರದೂಷಣೆಯಾಗಿದೆ.

7. ಕೆಟ್ಟಮಾತು ಏನೆಂದು ನಾನು ಹೇಳಲೇ ? ಅದೇ ಪರನಿಂದೆ. ಅದು ಜನರೆಡೆಯಲ್ಲಿ ವೈರತ್ವವನ್ನು ಬಿತ್ತುತ್ತದೆ.

8. ದುಷ್ಟನಾದವನನ್ನು ಹೊಗಳುವಾಗ ಅಲ್ಲಾಹುವಿಗೆ ಕ್ರೋಧವುಂಟಾಗುತ್ತದೆ — ಅವನ ಸಿಂಹಾಸನ ಅಲುಗಾಡಿದಂತೆ.

9. ಅನ್ಯಾಯವಾಗಿ ಬಯ್ದಾಡಿಕೊಳ್ಳುವವರ ಪೈಕಿ ಅದನ್ನು ಆರಂಭಿಸಿದವನು ಆಕ್ಷೇಪಾರ್ಹನು—ನಿಂದೆಗೊಳಗಾದವನು ಅತಿಕ್ರಮಣ ಮಾಡಿರದಿದ್ದರೆ.

10. ಒಬ್ಬನ ಪಿತೃತ್ವವನ್ನು ಆತನ ಪಿತನಲ್ಲದವನ ಮೇಲೆ ಹೊರಿಸುವುದು, ಕಾಣದ ಒಂದು ಸಂಗತಿಯ ಬಗ್ಗೆ ತಾನು ದೃಕ್‌ಸಾಕ್ಷಿಯೆಂದು ಹೇಳುವುದು ಮತ್ತು ನಾನು ನುಡಿಯದ ಸಂಗತಿಯನ್ನು ನಾನು ನುಡಿದದ್ದೆಂದು ಹೇಳುವುದು ಘೋರ ಅಪರಾಧವಾಗಿದೆ.

**(ಸರ್ ಮುಹಮ್ಮದ್ ಝಫರುಲ್ಲಾ ಖಾನರ Wisdom of the Holy Prophet Muhammad ಎಂಬ ಪುಸ್ತಕದಿಂದ ಆಯ್ದುದು)**

# ಖುರ್‌ಆನ್ ವೈರ ಸಾಧಿಸಲು ಉಪದೇಶಿಸುವುದಿಲ್ಲ

**ನಿಮ್ಮ ಜೀವಿತವನ್ನು ಇಸ್ಲಾಮ್ ಧರ್ಮದ ಉಪದೇಶಗಳನ್ನನುಸರಿಸಿ ರೂಪಿಸಿರಿ. ಯಾರನ್ನೂ ವೈರಭಾವದಿಂದ ನೋಡಬೇಡಿರಿ. ಪ್ರತಿಯೊಬ್ಬರ ಹಿತಕಾಂಕ್ಷಿಗಳಾಗಿರಿ. ಪ್ರತಿಯೊಬ್ಬರ ದುಃಖಗಳನ್ನು ಹೋಗಲಾಡಿಸುವವರಾಗಿರಿ.**

(ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್, ಅವರು ದಿನಾಂಕ 11—5—79 ರಂದು ನೀಡಿದ ಶುಕ್ರವಾರದ ಖುತ್‌ಬಾ)

ನಮ್ಮ ದೇವರು ಸರ್ವಲೋಕಗಳ ಪೋಷಕನಾಗಿದ್ದಾನೆ (ರಬ್ಬಿಲ್ ಆಲಮೀನ್). ಆತನು ಸೃಷ್ಟಿಸಿದವುಗಳನ್ನು ಆತನೇ ಪೋಷಿಸುತ್ತಾನೆ. ಆತನು ಅವುಗಳ ಶಕ್ತಿ ಸಾಮರ್ಥ್ಯಗಳನ್ನು ಕ್ರಮೇಣ ವರ್ಧಿಸಿ ಅವುಗಳು ಗಳಿಸಬಹುದಾದ ಅತ್ಯುನ್ನತ ಮಟ್ಟಕ್ಕೆ ಒಯ್ಯುತ್ತಾನೆ.

ನಮ್ಮ ದೇವರ 'ರಹ್ಮಾನ್' (ಅಪರಿಮಿತ ದಯಾಳು) ಎಂಬ ಗುಣವಿಶೇಷವು ಸರ್ವ ಸೃಷ್ಟಿಯನ್ನು ವ್ಯಾಪಿಸಿದೆ. "ರಹ್ಮತೀ ವಸಿಅತ್ ಕುಲ್ಲ ಶೈಯಿನ್" (ನನ್ನ ಅನುಗ್ರಹ ಸರ್ವವಸ್ತುಗಳಿಗೂ ವ್ಯಾಪಿಸಿದೆ) ಎಂಬ ವಚನ ಇದನ್ನು ಸೂಚಿಸುತ್ತದೆ. ಪ್ರತಿಯೊಂದು ಸೃಷ್ಟಿಯಲ್ಲೂ ದೇವರ ಅನುಗ್ರಹದ ಸಾಕ್ಷಾತ್ಕಾರವಾಗುತ್ತದೆ. ದೈವಾನುಗ್ರಹ ಅವುಗಳಿಗೆ ಆಸರೆಯಾಗಿದೆ. ದೇವರು ಯಾವ ಗುಣವನ್ನು ಆಯಾ ವಸ್ತುಗಳಲ್ಲಿ ಉಂಟು ಮಾಡಲು ಉದ್ದೇಶಿಸುತ್ತಾನೋ ಆ ಗುಣಗಳನ್ನು ಆ ವಸ್ತುಗಳು ಹೊಂದುತ್ತವೆ.

ನಬಿಶ್ರೇಷ್ಠ ಮುಹಮ್ಮದ್ ಪೈಗಂಬರರು (ದೇವರ ಇಷ್ಟಾಶೀರ್ವಾದ ಅವರ ಮೇಲೆ ಸುರಿಯಲಿ) ದೇವರ ಗುಣಗಳ ಅತ್ಯುತ್ಕೃಷ್ಟ ಪ್ರದರ್ಶನ ಮಾಧ್ಯಮವಾಗಿದ್ದರು. "ಸರ್ವಲೋಕಗಳ ಪೋಷಕ'' ಎಂಬ ದೈವಿಕ ಗುಣ ಸಹ ನಬಿ ಶ್ರೇಷ್ಠರಲ್ಲಿ ಪ್ರತಿಬಿಂಬಿಸಿದೆ. ಅವರು ಲೋಕಾನುಗ್ರಹಿ (ರಹ್ಮತುನ್ ಲಿಲ್ ಆಲಮೀನ್) ಸಹ ಆಗಿದ್ದರು. ಅವರ ಅನುಗ್ರಹವು ಲೋಕ ವ್ಯಾಪಕವಾಗುವಷ್ಟು ವಿಶಾಲವಾಗಿದೆ. ಆದರ ಒಂದು ಅಂಶ ಮನುಷ್ಯರನ್ನೂ ಮನುಷ್ಯ ವರ್ಗಕ್ಕೆ ಸೇರದ ಜೀವಿಗಳನ್ನೂ ಸಂಬಂಧಿಸಿದೆ. ನಮಗೆ ಅತ್ಯಂತ ಪ್ರಿಯರಾದವರು ಲೋಕಾನುಗ್ರಹಿಯಾದ ಪೈಗಂಬರರಾಗಿದ್ದಾರೆ. ಅವರ ಅನುಗ್ರಹದ ಮತ್ತೊಂದು ಅಂಶ ಕೇವಲ ಮನುಷ್ಯ ವರ್ಗಕ್ಕೆ ಸೀಮಿತವಾಗಿದೆ. ಮನುಷ್ಯ ವರ್ಗದ ಶಕ್ತಿ ಸಾಮರ್ಥ್ಯಗಳು ಕ್ರಮೇಣ ಅಭಿವೃದ್ಧಿಯನ್ನು ಪಡೆಯುತ್ತಾ ಉನ್ನತ ಮಟ್ಟವನ್ನು ತಲುಪಿದ್ದ ಕಾಲ ಘಟ್ಟದಲ್ಲಿ ಪೈಗಂಬರರ ಆಗಮನವಾಗಿ ಪರಿಪೂರ್ಣವಾದ ಒಂದು ಧರ್ಮ ಶಾಸ್ತ್ರವನ್ನು ತಂದರು. ಪೈಗಂಬರರ ಪೂರ್ವಿಕರು ಆ ಅನುಗ್ರಹದಿಂದಲೇ ಒಂದಂಶವನ್ನು ಪಡೆದರು. ಅವರ ಉಪದೇಶಗಳ ಒಂದು ಭಾಗ ಪೂರ್ವಿಕ ಪ್ರವಾದಿಗಳಿಗೆ ಕೊಡಲಾಯಿತು. "ಊತೂ ನಸೀಬನ್ ಮಿನಲ್ ಕಿತಾಬ್" (ಅವರಿಗೆ ಗ್ರಂಥದ ಒಂದು ಭಾಗವನ್ನು ನೀಡಲಾಯಿತು) ಎಂಬ ಖುರ್‌ಆನ್ ವಚನ ಇದನ್ನೇ ಸೂಚಿಸುತ್ತದೆ. ಪೈಗಂಬರರ ಆಗಮನದೊಂದಿಗೆ ಧರ್ಮಶಾಸ್ತ್ರದ ಸಂಬೋಧನ ವಲಯ ವಿಸ್ತೃತಗೊಂಡಿತು. ಪೂರ್ವಿಕ ಪ್ರವಾದಿಗಳು ತಂದ ಉಪದೇಶಕ ಗ್ರಂಥಗಳು ಕೆಲವು ಕಾಲಘಟ್ಟಗಳನ್ನು ಉದ್ದೇಶಿಸಿದವುಗಳಾಗಿದ್ದವು. ಅವುಗಳು ಕೆಲವು ಸ್ಥಳಗಳನ್ನು ಮಾತ್ರ ಉದ್ದೇಶಿಸಿದವುಗಳೂ ಕೆಲವು ಜನಾಂಗಗಳಿಗೆ ಮಾತ್ರ ಸೀಮಿತವಾದವುಗಳೂ ಆಗಿದ್ದುವು. ಅವುಗಳು ಸದಾಕಾಲ ನೆಲೆನಿಲ್ಲುವಂತಹುಗಳಾಗಿರಲಿಲ್ಲ. ಅವುಗಳು ಸರ್ವಲೋಕಕ್ಕಾಗಿರಲಿಲ್ಲ. ಅವುಗಳು ಸರ್ವ ಜನಾಂಗಗಳಿಗಾಗಿರಲಿಲ್ಲ. ಆದರೆ ಪರಿಪೂರ್ಣವಾದ ಧರ್ಮಶಾಸ್ತ್ರ ಮುಹಮ್ಮದ್ ಪೈಗಂಬರ್ ಮೂಲಕ ಮನುಷ್ಯ ವರ್ಗಕ್ಕೆ ನೀಡಲ್ಪಟ್ಟಾಗ ಅದು ಪರಾಕಾಷ್ಠೆಯನ್ನು ಪಡೆಯಿತು. ಅದರಲ್ಲಿ "ಅಲ್‌ಯೌಮ ಅಕ್‌ಮಲ್ತು ಲಕುಮ್ ದೀನಕುಮ್" (ಈ ದಿನ ನಿಮಗೆ ನಿಮ್ಮ ಧರ್ಮವನ್ನು ಪರಿಪೂರ್ಣಗೊಳಿಸಿರುವೆನು") ಎಂದು ದೇವರು ಪ್ರಕಟಿಸಿದನು.

ಈ ಧರ್ಮಶಾಸ್ತ್ರ ಕಾಲಮಿತಿಯನ್ನೋ ಸ್ಥಳ ಮಿತಿಯನ್ನೋ ಹೊಂದಿಲ್ಲ. ಅದು ಯಾವುದೇ ಜನಾಂಗಕ್ಕೆ ಸೀಮಿತವಾಗಿಲ್ಲ. ಪ್ರತಿಯೊಂದು ಸ್ಥಳಕ್ಕಾಗಿ, ಪ್ರತಿಯೊಂದು ದೇಶಕ್ಕಾಗಿ ಇದು ಅವತೀರ್ಣಗೊಳಿಸಲ್ಪಟ್ಟಿದ್ದು ಎಲ್ಲಾ ಜನಾಂಗಗಳಿಗೆ, ಎಲ್ಲಾ ಕಾಲಗಳಿಗೆ ಇದು ಅನ್ವಯಿಸುತ್ತಾ ಕೊನೆಗಾಲದ ತನಕ ನೆಲೆ ನಿಲ್ಲುವುದು. ಮಾನವ ಜನಾಂಗ ಪೈಗಂಬರರ ಅನುಗ್ರಹದ ಪರಿಣಾಮವನ್ನು ಆತ್ಮ ಸಂಬಂಧವಾಗಿಯೂ ಲೌಕಿಕವಾಗಿಯೂ ಪೈಗಂಬರರ ಅನುಗ್ರಹಕ್ಕೆ ಪಾತ್ರರಾದವರ ಮೂಲಕ ನೋಡಲಿಕ್ಕಿತ್ತು. ಮುಹಮ್ಮದ್ ಪೈಗಂಬರ ಅನುಯಾಯಿಗಳ ಪೈಕಿ ಪ್ರತ್ಯೇಕ ಅನುಗ್ರಹ ಪಡೆದ ಪಕ್ಷ ಅಥವಾ ಪಂಗಡ ಪೈಗಂಬರರ ಅನುಗ್ರಹಗಳನ್ನು ಮುಂದುವರಿಸಲಿಕ್ಕಿತ್ತು. ಮುಹಮ್ಮದ್ ಪೈಗಂಬರರ ಆಗಮನದ ಪರಿಣಾಮವಾಗಿ "ಮಾನವ ವರ್ಗಕ್ಕಾಗಿ ಸೃಷ್ಟಿಸಲ್ಪಟ್ಟ" (ಉಖ್ರಿಜತ್ ಲಿನ್ನಾಸ್) ಅವರ ಒಳಿತಿಗಾಗಿ ಶ್ರಮಿಸುವ, ತರಬೇತಿ ಹೊಂದಿದ ಒಂದು ಜನ ಸಮೂಹ ರೂಪುಗೊಂಡಿತು. ಮಾನವ ವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಜನಸಮೂಹ ತಮ್ಮ ಶಕ್ತಿ ಸಾಮರ್ಥ್ಯಗಳಲ್ಲಿ ಉನ್ನತಿಯನ್ನು ಗಳಿಸಿರಬೇಕಾದುದೂ ಅವರಿಗೆ ಒಂದು ಪರಿಪೂರ್ಣ ಧರ್ಮಶಾಸ್ತ್ರ ಲಭಿಸಿರಬೇಕಾದುದೂ ಆವಶ್ಯಕವಾಗಿತ್ತು. ಇವರಿಗೆ ಪರಿಪೂರ್ಣ ಧರ್ಮ ಶಾಸ್ತ್ರವು ಪವಿತ್ರ ಖುರ್‌ಆನಿನ ರೂಪದಲ್ಲಿ ದೊರಕಿತು. ತಮ್ಮ ಸ್ಥಾನಮಾನಗಳನ್ನು ಗುರುತಿಸಿ ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಅನುಸರಿಸಿ ಪೈಗಂಬರರ ಪರಿಪೂರ್ಣ ಆಜ್ಞಾಪಾಲಕರಾಗಿ ದೇವರ ಪ್ರೀತಿಯನ್ನು ಇವರು ಗಳಿಸಿದರು. "ನನ್ನನ್ನು ಅನುಸರಿಸಿದರೆ ದೇವರು ನಿಮ್ಮನ್ನು ಪ್ರೀತಿಸುವನು" "(ಫತ್ತಬಿವೂನಿ ಯುಹ್‌ಬಿಬ್‌ಕುಮುಲ್ಲಾಹ್) ಎಂಬ ವಚನ ಇದನ್ನೇ ಸೂಚಿಸುತ್ತದೆ. ಹೀಗಾದರೆ ದೇವರ ಪ್ರೀತಿಯ ನಿದರ್ಶನಗಳನ್ನು ನೀವು ಸಹ ಲೋಕಕ್ಕೆ ತೋರಿಸಲು ಸಮರ್ಥರಾಗುವಿರಿ. ಪೈಗಂಬರರನ್ನು ಅನುಸರಿಸುವುದರ ಮಾದರಿಯನ್ನೂ ನೀವು ಲೋಕಕ್ಕೆ ತೋರಿಸುವಿರಿ.

ಮಾನವ ವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಮುಸ್ಲಿಮ್ ಜನಾಂಗಕ್ಕೆ ಮನುಷ್ಯರೆಲ್ಲರಿಗೆ ಒಳಿತನ್ನುಂಟು ಮಾಡುವ ಜವಾಬ್ದಾರಿಯಿದೆ. ಪೈಗಂಬರರ ಅನುಗ್ರಹದ ಪರಿಣಾಮವಾಗಿ ದೇವರ ಪ್ರೀತಿಯ ನಿದರ್ಶನಗಳನ್ನು ಕಂಡ ಅನುಯಾಯಿಗಳ ಗುಂಪಿಗೆ ಈ ಜವಾಬ್ದಾರಿ ಇನ್ನಷ್ಟು ಹೆಚ್ಚಿಗೆ ಇದೆ. ಪರಿಪೂರ್ಣವಾದ ಅನುಸರಣೆಯ ಫಲವಾಗಿ ಪೈಗಂಬರರು ದೈವಿಕ ಗುಣಗಳ ಮಾದರಿಯಾದಂತೆ ಇವರು ಪೈಗಂಬರರ ಮೇಲಿನ ಸ್ನೇಹದಿಂದ ಪರಿಪೂರ್ಣ ಅನುಯಾಯಿಗಳಾಗಿ ಪೈಗಂಬರರ ಪ್ರತಿಬಿಂಬಗಳಾದರು. ತಂತಮ್ಮ ಶಕ್ತಿ ಸಾಮರ್ಥ್ಯಗಳನ್ನನುಸರಿಸಿ ತಂತಮ್ಮ ವಲಯಗಳಲ್ಲಿ (ವಲಯ ಚಿಕ್ಕದೂ ದೊಡ್ಡದೂ ಇರುತ್ತದೆ) ದೈವಿಕ ಗುಣಗಳ ಪ್ರದರ್ಶಕರಾದರು. ಮುಹಮ್ಮದ್ ಪೈಗಂಬರರ ಕಾಲದಿಂದ ಲೋಕಾವಸಾನ ಕಾಲದ ವರೆಗೆ ಮುಸ್ಲಿಮ್ ಜನಾಂಗದಲ್ಲಿ ಈ ಉದ್ದೇಶವನ್ನು ಪೂರ್ತಿಗೊಳಿಸುವ ಜನರು ಜನ್ಮತಾಳುವರೆಂದು ನಮಗೆ ತಿಳಿದು ಬರುತ್ತದೆ. "ನೀವು ಉತ್ತಮ ಜನಾಂಗವಾಗಿದ್ದೀರಿ. ಮಾನವ ವರ್ಗದ ಒಳಿತಿಗಾಗಿ ನಿಮ್ಮನ್ನು ಸೃಷ್ಟಿಸಲಾಗಿದೆ" (ಕುನ್‌ತುಮ್ ಖೈರು ಉಮ್ಮತಿನ್ ಉಖ್ರಿಜತ್ ಲಿನ್ನಾಸ್) ಎಂಬ ಪವಿತ್ರ ಖುರ್‌ಆನಿನ ವಚನ ಇದನ್ನೇ ಸೂಚಿಸುತ್ತದೆ. ಉತ್ತಮ ಜನಾಂಗವಾಗಲು ಪವಿತ್ರ ಖುರ್‌ಆನಿನ ಪರಿಪೂರ್ಣ ಅನುಸರಣೆ ಮತ್ತು ಅದರ ಪರಿಪೂರ್ಣ ಅನುಗ್ರಹ ಪಡೆಯುವುದು, ಪೈಗಂಬರರನ್ನು ಪರಿಪೂರ್ಣವಾಗಿ ಅನುಸರಿಸುವುದು ಮತ್ತು ದೇವರ ಪ್ರೀತಿಯನ್ನು ಗಳಿಸುವುದು ಅತ್ಯಾವಶ್ಯಕವಾಗಿದೆ.

ಪೈಗಂಬರರ ಅನುಯಾಯಿಗಳಲ್ಲಿ ಲೋಕಾವಸಾನದ ತನಕ ಇಂತಹ ಜನರು ಜನ್ಮತಾಳಿ ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳ ವಾರೀಸುದಾರರಾಗುವುದಕ್ಕೆ ಇರುವ ಶರ್ತ ಪೈಗಂಬರರ ಪರಿಪೂರ್ಣ ಅನುಸರಣೆಯಾಗಿದೆ. ಪೈಗಂಬರರ ಜೀವಿತಮಾರ್ಗದರ್ಶನ ಪರಿಪೂರ್ಣವಾದುದೆಂದೂ ಅತ್ಯುತ್ಕೃಷ್ಟವಾದುದೆಂದೂ ಪವಿತ್ರ ಖುರ್‌ಆನ್ ವಿವರಿಸಿದೆ. ಪ್ರತಿ ಶತಮಾನದಲ್ಲಿ, ಪ್ರತಿ ವಂಶದಲ್ಲಿ ಇಂತಹ ಜನರು ಜನಿಸಿದರು. ಇಂತಹ ಜನರು ಜನಿಸಬೇಕಾಗಿಯೂ ಇದ್ದಿತು. ಮುಹಮ್ಮದ್ ಪೈಗಂಬರರ ಮೇಲೆ ಹೃದಯದಲ್ಲಿ ಪ್ರೀತಿಯುದಿಸಿ, ಇದರ ಪರಿಣಾಮವಾಗಿ ಅತ್ಯಂತ ಶ್ರಮವಹಿಸಿ ಪ್ರಯತ್ನಿಸಿ ಪೈಗಂಬರರನ್ನು ಅನುಸರಿಸಿ ದೇವರ ಪ್ರೀತಿಗಳಿಸಿ ತಮ್ಮ ವಲಯದಲ್ಲಿ ಪೈಗಂಬರರಲ್ಲಿ ಲೀನರಾಗಿ ಅದರ ಪರಿಣಾಮವಾಗಿ ಲೋಕಕ್ಕೆ ಪೈಗಂಬರರ ಮಾದರಿಯನ್ನು ತೋರಿಸುವವರಾಗಿ ಲೋಕದ ಜನರಿಗೆ ದೈವಿಕ ಮಾರ್ಗವನ್ನು ಗಳಿಸುವ ಭಾಗ್ಯ ತನ್ಮೂಲಕ ದೊರಕಿಸಿ ಕೊಡುವಂತಾಯಿತು.

ನೀವು ಪವಿತ್ರ ಖುರ್‌ಆನ್ ಪೂರ್ಣವಾಗಿ ಓದಿರಿ. ಪೈಗಂಬರ ಅನುಯಾಯಿಗಳನ್ನು "ಉತ್ತಮ ಜನಾಂಗ"ವೆಂದು ಕರೆದಿದ್ದು ಅವರನ್ನು ಮನುಷ್ಯರ ಲೌಕಿಕ ಮತ್ತು

ಆಧ್ಯಾತ್ಮಿಕ ಒಳಿತಿಗಾಗಿ ಸೃಷ್ಟಿಸಲಾಯಿತೆಂದು ಅದರಲ್ಲಿ ಸ್ಪಷ್ಟ ಪಡಿಸಲಾಗಿದೆ. ನೀವು ಪವಿತ್ರ ಖುರ್‌ಆನ್ ಆಮೂಲಾಗ್ರವಾಗಿ ಪರಿಸಿರಿ. ಪವಿತ್ರ ಖುರ್‌ಆನಿನ ಪ್ರತಿಯೊಂದು ಆಜ್ಞೆ ಮಾನವರ ಒಳಿತಿಗಾಗಿ ಇದೆ. ಯಾವುದೇ ಆಜ್ಞೆ ಮುಸ್ಲಿಮ್ ಮತ್ತು ಅಮುಸ್ಲಿಮರ ಮಧ್ಯೆ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ದೇವರ "ಸರ್ವಲೋಕಗಳ ಪೋಷಕ" ಎಂಬ ಗುಣ ಮನುಷ್ಯ ಮತ್ತು ಮನುಷ್ಯವರ್ಗಕ್ಕೆ ಸೇರದ ಜೀವಿಗಳಲ್ಲಿ ಯಾವುದೇ ವ್ಯತ್ಯಾಸವನ್ನುಂಟು ಮಾಡದಂತೆಯೇ ಮನುಷ್ಯರ ಪೈಕಿ ಮುಸ್ಲಿಮ್ ಮತ್ತು ಅಮುಸ್ಲಿಮ್, ಏಕದೈವಾರಾಧಕ ಮತ್ತು ಬಹು ದೈವಾರಾಧಕರ ಮಧ್ಯೆ ಯಾವುದೇ ತಾರತಮ್ಯವನ್ನುಂಟು ಮಾಡುವುದಿಲ್ಲ. ದೇವರ ಅನುಗ್ರಹ ಎಲ್ಲರ ಮೇಲೆಯೂ ವ್ಯಾಪಿಸಿದೆ. ಇನ್ನು ಮುಂದೆಯೂ ಅದೇ ರೀತಿ ಇರುವುದು. ಜನರ ಒಳಿತಿಗಾಗಿ ಬೇಕಾದ ಸಾಮಗ್ರಿಗಳು ಉಂಟಾಗಲಿಯೆಂಬುದೇ ಪೈಗಂಬರರ ಹೃತ್ಪೂರ್ವಕವಾದ ಆಶೆಯಾಗಿತ್ತೆಂದು ಅವರ ಜೀವನವಿಡೀ ಸಾಕ್ಷ್ಯವಹಿಸುತ್ತದೆ. ಜನರಿಗೆ ತೊಂದರೆ ಕೊಡುವ ಸಾಮುಗ್ರಿಗಳು ಉಂಟಾಗಲಿ ಎಂಬ ಯೋಚನೆ ಒಮ್ಮೆಯೂ ಅವರ ಮನಸ್ಸಿನಲ್ಲಿ ಸುಳಿದಿರಲಿಲ್ಲ.

ಮಾನವ ಇತಿಹಾಸ ಗ್ರಂಥದ ಪುಟಗಳನ್ನು ತಿರುವಿ ನೋಡಿರಿ. ಪ್ರತಿ ಹಾಳೆಯ ಪ್ರತಿಯೊಂದು ಶಬ್ದವೂ "ಮುಹಮ್ಮದ್ ಪೈಗಂಬರರಿಗೆ ಯಾವುದೇ ಮನುಷ್ಯನ ಮೇಲೆ ವೈರವಿರಲಿಲ್ಲ"ವೆಂದು ಸಾಕ್ಷ್ಯವಹಿಸುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಸಹ ಇದನ್ನು ಪುಷ್ಟೀಕರಿಸುತ್ತದೆ. "ಅವರು ವಿಶ್ವಾಸಿಗಳಾಗಲಿಲ್ಲವೆಂಬ ವ್ಯಥೆಯಿಂದ ನಿನ್ನ ಜೀವವನ್ನು ಹಾನಿಗೊಳಿಸಬೇಡ". (ಲಅಲ್ಲಕ ಬಾಖಿವುನ್ ನಫ್ಸಕ ಅಲ್ಲಾ ಯಕೂನೂ ಮೂಮಿನೀನ್)

ಒಂದು ಪಂಗಡ ನಂಬಲಿಲ್ಲ. ಮುಹಮ್ಮದ್ ಪೈಗಂಬರರ ಸತ್ಯತೆಯನ್ನು ಅಲ್ಲಗಳೆಯುತ್ತಿದೆ. ಅವರ ಉಪದೇಶಗಳನ್ನು ಸ್ವೀಕರಿಸುವುದಿಲ್ಲ. ಸರ್ವಲೋಕಗಳ ಸೃಷ್ಟಿಕರ್ತನಾದ ದೇವರ ಕುರಿತು ಜ್ಞಾನವನ್ನು ಮುಹಮ್ಮದ್ ಪೈಗಂಬರರ ಮೂಲಕ ಗಳಿಸ ಬಹುದಾದರೂ ಆ ಕಡೆಗೆ ಗಮನ ಹರಿಸುವುದಿಲ್ಲ. ಇಂತಹ ಪಂಗಡಕ್ಕೆ ಸೇರಿದವರು "ಯಾಕೆ ನಂಬುವುದಿಲ್ಲ" ಎಂಬ ವ್ಯಥೆ ಪೈಗಂಬರರನ್ನು ಬಾಧಿಸುತ್ತದೆ. ಈ ವ್ಯಥೆಯಿಂದ ತನ್ನ ಜೀವವನ್ನು ಹಾನಿಗೊಳಿಸಬೇಡವೆಂದು ದೈವಿಕ ನಿರ್ದೇಶ ದೊರೆಯುತ್ತದೆ. ಚರಿತ್ರೆಯ ಹಾಳೆಗಳನ್ನು ಪರಿಶೀಲಿಸಿರಿ. ಯಾವುದೇ ವ್ಯಕ್ತಿಯ ವಿರುದ್ಧ ಸಿಟ್ಟು ಅಥವಾ ದ್ವೇಷ ಪೈಗಂಬರರು ವ್ಯಕ್ತಗೊಳಿಸಿದದನ್ನು ನೀವು ಕಾಣಲಾರಿರಿ.

ಈ ಕೆಳಗಿನ ಸಂಭವದಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ: ಪೈಗಂಬರರು ಮಕ್ಕಾದಲ್ಲಿದ್ದ ಕಾಲದಲ್ಲಿ ಶುಅಬ್ ಅಬೀ ತಾಲಿಬ್ (ಅಬೂತಾಲಿಬರ ಕಣಿವೆ) ಎಂಬ ಸ್ಥಳದಲ್ಲಿ ಮಕ್ಕಾದ ಅವಿಶ್ವಾಸಿಗಳು ಸುಮಾರು ಎರಡೂವರೆ ವರ್ಷಗಳಷ್ಟು ಕಾಲ (ಕನಿಷ್ಠಪಕ್ಷ ಎರಡೂವರೆ ವರ್ಷ ಕಾಲವೆಂದು ಚರಿತ್ರೆ ಸೂಚಿಸುತ್ತದೆ) ಆ ಕಾಲದ ಮುಸ್ಲಿಮ್ ಜನಾಂಗವನ್ನು (ಆ ಕಾಲದಲ್ಲಿ ಭೂಲೋಕವಿಡೀ ಇಷ್ಟೇ ಜನ ಪೈಗಂಬರ್ ಅನುಯಾಯಿಗಳಿದ್ದರು) ಅಲ್ಲಿ ಬಂಧನದಲ್ಲಿರಿಸಿದರು. ಅವರ ಬಾಗಿಲುಗಳು ಆ ಕಣಿವೆಗೆ ಹೋಗಲಿಕ್ಕಿದ್ದ ಕಣಿವೆ ದಾರಿಗಳು ಮಾತ್ರವಾಗಿದ್ದುವು. ಅಲ್ಲಿ ಪಹರೆ ಇರಿಸಲಾಯಿತು. ಅಲ್ಲಿ ಅವರನ್ನು ಹಸಿವಿರುವಂತೆ ಮಾಡಿ ಕೊಲ್ಲಲಿಕ್ಕಾಗಿ ಎರಡೂವರೆ ವರ್ಷಗಳಷ್ಟು ಕಾಲ ಪೂರ್ಣ ಪ್ರಯತ್ನ ಮಾಡಲಾಯಿತು. ಅವರು ಹಸಿವೆಯಿಂದ ತೀರಿ ಹೋಗದಂತೆ ದೇವರು ಏರ್ಪಾಡು ಮಾಡಿದನು. ಆದರೆ ಪೈಗಂಬರರ ಅನುಯಾಯಿಗಳಾದ ಈ ಮಹತ್ತಾದ ಜನಾಂಗದ ಮಹತ್ವವನ್ನು ವ್ಯಕ್ತಗೊಳಿಸಲಿಕ್ಕಾಗಿಯೇ ಅವರಿಗೆ ಹೊಟ್ಟೆ ತುಂಬಾ ಆಹಾರ ದೊರೆಯುವಂತೆ ಮಾಡಲಿಲ್ಲ. ಹಸಿವೆಯ ಅತ್ಯುಗ್ರವಾದ ಕಷ್ಟಗಳನ್ನು ಅವರು ಅನುಭವಿಸಬೇಕಾಯಿತು. ದೇವರು ಅವರನ್ನು ಮೃತ್ಯುವಶರಾಗಲು ಬಿಡಲಿಲ್ಲ. ಆದರೆ ಹಸಿವೆಯ ಅತ್ಯಧಿಕ ಯಾತನೆಯನ್ನು ಅನುಭವಿಸುವ ಪರೀಕ್ಷೆಯನ್ನು ಅವರಿಗೆ ಏರ್ಪಡಿಸಿದನು. ಅವರ ಅವಸ್ಥೆ ಎಷ್ಟು ಕಠಿಣವಾಗಿತ್ತೆಂದರೆ ಒಬ್ಬ ಹಿರಿಯ ಪೈಗಂಬರ್ ಶಿಷ್ಯರು ಈ ರೀತಿ ವರದಿ ಮಾಡಿರುವರು: "ನಮ್ಮ ಸ್ಥಿತಿ ಎಷ್ಟು ಹದಗೆಟ್ಟಿತ್ತೆಂದರೆ ಒಮ್ಮೆ ರಾತ್ರೆಯ ಅಂಧಕಾರದಲ್ಲಿ ನನ್ನ ಪಾದರಕ್ಷೆ ಯಾವುದೇ ವಸ್ತುವನ್ನು ಮೆಟ್ಟಿದಾಗ ಅದು ಮೆತ್ತಗಿನ ವಸ್ತುವೆಂದು ನಾನು ಗ್ರಹಿಸಿದೆನು. ನಾನು ಬಗ್ಗಿದೆನು. ನಾನು ಆ ವಸ್ತುವನ್ನು ಎತ್ತಿ ತಿಂದುಹಾಕಿದೆನು. ಆ ವಸ್ತು ಏನಾಗಿತ್ತೆಂದು ಇಂದಿನ ತನಕ ನನಗೆ ಗೊತ್ತಿಲ್ಲ".

ಪೈಗಂಬರರನ್ನೂ ಶಿಷ್ಯರನ್ನೂ ಅವರ ವಿರೋಧಿಗಳು ಇಷ್ಟು ಕಠಿಣವಾಗಿ ಪೀಡಿಸಿದರು. ಅವರು ಹಸಿವೆಯನ್ನೂ ದೌರ್ಜನ್ಯವನ್ನೂ ಸಹಿಸಬೇಕಾಯಿತು. ದೇವರು ತನ್ನ ಪ್ರೀತಿಗೆ ಪಾತ್ರನಾದ ಮುಹಮ್ಮದ್ ಪೈಗಂಬರರ ಮಹತ್ವವನ್ನು ಪ್ರಕಟಿಸಲಿಕ್ಕಾಗಿ ಉಂಟುಮಾಡಿದ ಪರಿವರ್ತನೆಗಳ ಫಲವಾಗಿ ಹಿಜಿರಾದ ನಂತರ ಪೈಗಂಬರರು ಮದಿನದಲ್ಲಿದ್ದಾಗ ಮಕ್ಕಾ

ದಲ್ಲಿ ಕ್ಷಾಮ ತಲೆದೋರಿತು. ಮುಸಲ್ಮಾನರನ್ನು ಉಪವಾಸ ಕೆಡವಿ ಕೊಲ್ಲಲೆತ್ನಿಸಿದ ತಮ್ಮನ್ನು ದೈವಿಕ ಶಿಕ್ಷೆ ಆವರಿಸುವುದಾಗಿ ಕಂಡಾಗ, ತಾವು ಹಸಿವೆಯಿಂದ ಸಾಯುವ ಸಂಭವವಿದೆಯೆಂದು ಅವರಿಗೆ ತಿಳಿದು ಬಂದಾಗ ಮುಹಮ್ಮದ್ ಪೈಗಂಬರರಿಗೆ ಸಂದೇಶ ಕಳುಹಿಸಿದರು: "ನೀವು ನಿಮ್ಮ ಸಹೋದರರನ್ನು ಹಸಿವೆಯಿಂದ ಸಾಯಲು ಬಿಡುವಿರಾ ?" ಎಂಬುದೇ ಅವರ ಪ್ರಶ್ನೆಯಾಗಿತ್ತು. ಎರಡೂವರೆ ವರ್ಷ ಕಾಲ ಹಸಿವೆಯ ಕಷ್ಟವನುಭವಿಸಿದ ಆ ಮಹಾನ್ ವ್ಯಕ್ತಿ ಒಂದು ನಿಮಿಷ ಸಹ ತಡ ಮಾಡದೆ ಸಂದೇಶ ದೊರಕುತ್ತಲೇ ಆಜ್ಞಾಪಿಸಿದರು: "ಅವರಿಗೆ ಸಾಮುಗ್ರಿಗಳನ್ನು ತಲುಪಿಸುವ ಏರ್ಪಾಡು ಕೂಡಲೇ ಮಾಡಿರಿ" ಎಂದು. ಅವರಿಗೆ ಸಾಮುಗ್ರಿ ತಲುಪಲು ಸ್ವಲ್ಪ ಸಮಯ ತಗಲಿರಬಹುದು. ಆದರೆ ಅದರ ಏರ್ಪಾಡು ಆರಂಭಿಸಲು ಸ್ವಲ್ಪವೂ ತಡ ಮಾಡಲಿಲ್ಲ. ''ಅವರನ್ನು ಹಸಿದಿರಲು ನಾವು ಬಿಡಲಾರೆವು" ಎಂಬುದೇ ಅವರ ಅಪೇಕ್ಷೆಯಾಗಿತ್ತು.

ಪವಿತ್ರ ಖುರ್‌ಆನ್ ಮುಸಲ್ಮಾನರಿಗೆ ಯಾರೊಡನೆಯೂ ವೈರ ಸಾಧಿಸುವ ಒಂದೇ ಒಂದು ಉಪದೇಶ ನೀಡುವುದಿಲ್ಲ. ಉಪದ್ರವಿಸಬೇಕು, ದುಃಖ ಕೊಡಬೇಕು, ಭಾವನಾತ್ಮಕ ವೇದನೆಯನ್ನುಂಟು ಮಾಡಬೇಕು, ಕಷ್ಟದಿಂದ ಪಾರು ಮಾಡಲು ಪ್ರಯತ್ನಿಸಬಾರದು ಎಂಬ ಉಪದೇಶಗಳನ್ನು ಪವಿತ್ರ ಖುರ್‌ಆನ್ ನೀಡುವುದಿಲ್ಲ.

ಪವಿತ್ರ ಖುರ್‌ಆನ್ ಆರಂಭದಿಂದ ಕೊನೆಯ ತನಕ ಎಷ್ಟು ಪ್ರಿಯಕರವಾದ ಉಪದೇಶಗಳನ್ನೊಳಗೊಂಡಿದೆಯೆಂದರೆ ಇದೇ ಕಾರಣದಿಂದ ಇದನ್ನನುಸರಿಸುವವರನ್ನು "ನೀವು ಉತ್ತಮ ಜನಾಂಗವಾಗಿದ್ದೀರಿ; ಜನರ ಒಳಿತಿಗಾಗಿ ಸೃಷ್ಟಿಸಲ್ಪಟ್ಟರುವಿರಿ'' ಎಂದು ಸಂಬೋಧಿಸಲಾಗಿದೆ. ನಾನು ನಮ್ಮ ಚಿಕ್ಕ ಮಕ್ಕಳಿಗೆ, ಯುವಕರಿಗೆ ಮತ್ತು ಎಲ್ಲಾ ಸಹೋದರ ಸಹೋದರಿಯರಿಗೆ ಈ ಮಾತನ್ನು ಹೇಳಲು ಇಚ್ಛಿಸುತ್ತೇನೆ: ಇದು ಇಸ್ಲಾಮ್ ಧರ್ಮದ ಉಪದೇಶವಾಗಿದೆ. ನಿಮ್ಮ ಜೀವನವನ್ನು ಇದಕ್ಕನುಗುಣವಾಗಿ ರೂಪಿಸಿರಿ. ಭೂಲೋಕವಿಡೀ ನಿಮ್ಮನ್ನು ಅವರ ಶತ್ರುಗಳೆಂದು ಭಾವಿಸಿದರೂ ಲೋಕದಲ್ಲಿ ಒಬ್ಬನೇ ಒಬ್ಬ ವ್ಯಕ್ತಿಯನ್ನಾದರೂ ನಿಮ್ಮ ಶತ್ರು ಎಂದು ನೀವು ಭಾವಿಸಬೇಡಿರಿ. ನೀವು ಯಾರದೂ ಶತ್ರುಗಳಲ್ಲ. ನೀವು ಎಲ್ಲರ ಹಿತಕಾಂಕ್ಷಿಗಳಾಗಿದ್ದೀರಿ. ನೀವು ಅವರ ದುಃಖಗಳನ್ನು ದೂರ ಮಾಡುವವರಾಗಿದ್ದೀರಿ. ನೀವು ಧನ ಮತ್ತು ಸಮಯದ ತ್ಯಾಗಮಾಡಿ ಸೇವೆಗೆ ಸನ್ನದ್ಧರಾಗಿರಿ. ನಿಮ್ಮ ಬಳಿ ಏನೂ ಇಲ್ಲದಿದ್ದರೆ, ನಿಮ್ಮಲ್ಲಿ ಹಣವೂ ಐಶ್ವರ್ಯವೂ ಇಲ್ಲದಿದ್ದರೆ ಎಲ್ಲರಿಗಿಂತಲೂ ದೊಡ್ಡವನಾದ ಇಹಪರಲೋಕಗಳ ಒಡೆಯನಾದ ದೇವರ ಮುಂದುಗಡೆ ಅವರ ದುಃಖ ಪರಿಹಾರಕ್ಕಾಗಿ ಪ್ರಾರ್ಥಿಸಿರಿ. ದೇವರಿಂದ ದೂರ ಸರಿದವರು ದೇವರ ಸಾಮೀಪ್ಯಗಳಿಸಲಿ. ಅಂಧಕಾರದಲ್ಲಿ ನಿವಾಸಿಸುವವರು ದೇವರ ಪ್ರಕಾಶದ ಪರಿಧಿಯೊಳಗೆ ಪ್ರವೇಶಿಸುವಂತಾಗಲಿ. ಆತ್ಮಸಂಬಧವಾಗಿ ಮೃತಪ್ರಾಯರಾದವರು ಮುಹಮ್ಮದ್ ಪೈಗಂಬರರ ಮೂಲಕ ಜೀವವನ್ನು ಪಡೆಯಲಿ. ಪೈಗಂಬರರ ನಡವಳಿಕೆಗಳನ್ನನುಸರಿಸಿ ನೀವು ಪ್ರಾರ್ಥಿಸಿರಿ: "ಆತ್ಮ ಸಂಬಂಧವಾಗಿ ಮೃತಪ್ರಾಯರಾದವರು ಪುನರುಜ್ಜೀವನ ಪಡೆಯಲಿ ಎಂದು.

ಅಹ್ಮದಿಯಾ ಸಂಘಟನೆಯ ಸ್ಥಾಪಕರು (ಹಝರತ್ ಮಸೀಹ್ ಮೌಊದ್-ವಾಗ್ದತ್ತ ಮಸೀಹ್) ಹೇಳಿರುವರು: ಅರಬ್ ದೇಶದವರ ಸ್ಥಿತಿ ಮೃತ ಜನಾಂಗದಂತೆ ಇತ್ತು. ಅವರು ಜೀವದಾನ ಪಡೆದರು. ಎಷ್ಟು ವೈಭವದ ಜೀವನವನ್ನು ಅವರು ಪಡೆದರು! ಅವರು ತೋರಿಸಿದ ಜೀವನದ ಚಿಹ್ನೆಗಳನ್ನು ಲೋಕದ ಯಾವುದೇ ಜನಾಂಗ ವ್ಯಕ್ತಗೊಳಿಸಲಿಲ್ಲ. ಇದೆಲ್ಲಾ ಅಂಧಕಾರಮಯವಾದ ರಾತ್ರೆಗಳಲ್ಲಿ ಆ ಮಹಾನ್ ಪೈಗಂಬರರು ದೇವರ ಸನ್ನಿಧಿಯಲ್ಲಿ ಮಾಡಿದ ನಮ್ರ ಪ್ರಾರ್ಥನೆಗಳ ಫಲವಾಗಿದೆ.

ಆದುದರಿಂದ ನೀವು, ''ನಾವು ಬಡವರಾಗಿದ್ದೇವೆ, ಹಣ ಖರ್ಚು ಮಾಡಿ ಮನುಷ್ಯರ ದುಃಖಗಳನ್ನು ಯಾವ ರೀತಿ ಪರಿಹರಿಸಬಲ್ಲೆವು ? ನಾವು ಅಲ್ಪ ಸಂಖ್ಯಾತರಾಗಿದ್ದೇವೆ, ನಾವು ಸೇವೆ ಮಾಡಿ ಜನರ ಕಷ್ಟಗಳನ್ನು ಯಾವ ರೀತಿ ದೂರೀಕರಿಸಬಲ್ಲೆವು?'', ಎಂದು ಗ್ರಹಿಸಬೇಡಿರಿ. ದೇವರ ಬಾಗಿಲು ನಿಮಗಾಗಿ ತೆರೆದಿರುವಂತಹ ಬಾಗಿಲಾಗಿದೆ. ಆ ಬಾಗಿಲು ತೆರೆದಿರುವುದರ ಚಿಹ್ನೆಗಳನ್ನು ನಿಮ್ಮ ಜೀವಿತ ಕಾಲದಲ್ಲಿಯೇ ನೋಡುತ್ತಿದ್ದೀರಿ. ನಿಮಗೆ ಅದು ತಿಳಿಯುತ್ತದೆ ಮತ್ತು ಅನುಭವವಾಗುತ್ತದೆ. ಆ ಬಾಗಿಲ ಬಳಿ ಹಾಜರಾಗಿರಿ. ಆ ಏಕಮಾತ್ರ ದೇವರ ಮುಂದೆ ತಲೆಬಾಗಿರಿ. ದೇವರೊಡನೆ ಈ ರೀತಿ ಪ್ರಾರ್ಥಿಸಿರಿ: ಒಡೆಯಾ ನೀನು ಸರ್ವಲೋಕಗಳ ಪೋಷಕನಾಗಿರುವೆ. ನಿನ್ನ ಅನುಗ್ರಹ ಸರ್ವವಸ್ತುಗಳನ್ನೂ ಆವರಿಸಿದೆಯೆಂದು ನೀನು ಪ್ರಕಟಿಸಿರುವೆ. "ಲೋಕಾನುಗ್ರಹಿ" ಎಂದು ನೀನು ಘೋಷಿಸಿದ, ನಿನ್ನ ಪ್ರೀತಿಗೆ ಪಾತ್ರರಾದವರನ್ನು ನೀನು ಕಳುಹಿಸಿರುವೆ, ನಮ್ಮನ್ನು ಅವರ ಅನುಯಾಯಿಗಳನ್ನಾಗಿ ಮಾಡಿರುವೆ.

# ವ್ರತಾನುಷ್ಠಾನ

—ಎನ್. ಹಾಮಿದ್.

ವರ್ಷದಲ್ಲಿ ಒಂದು ತಿಂಗಳಕಾಲ ಮುಸ್ಲಿಮರು ಉಪವಾಸವನ್ನನುಷ್ಠಿಸಬೇಕೆಂಬುದು ಇಸ್ಲಾಂ ಧರ್ಮದ ಆಜ್ಞೆಯಾಗಿದೆ. ಈ ಧರ್ಮಾಚರಣೆ ಇಸ್ಲಾಮಿ ಪಂಚಾಂಗದ ಒಂಭತ್ತನೆಯ ಮಾಸವಾದ ರಂಝಾನಿನಲ್ಲಿ ಆರಂಭವಾಗುತ್ತದೆ. ರಾತ್ರೆಯ ಉತ್ತರಾರ್ಧದಲ್ಲಿ, ಉಷೆಗೆ ಮುಂಚಿತವಾಗಿ, ಆಹಾರವನ್ನೇನಾದರೂ ಸೇವಿಸಿ ಉಪವಾಸದ ಇಂಗಿತದಿಂದ ಭಕ್ತಿನಿರ್ಭರವಾದ ಜೀವಿತವನ್ನು ನಡೆಸುವುದು ವ್ರತಾನುಷ್ಠಾನಿಯ ಕರ್ತವ್ಯವಾಗಿದೆ. ಪ್ರಭಾತದಿಂದ ಅಸ್ತಮಾನದ ವರೆಗಿನ ಹಗಲು ಸಮಯದಲ್ಲಿ ಎಲ್ಲಾ ವಿಧ ಆಹಾರಪಾನೀಯಗಳನ್ನೂ ಪತಿ–ಪತ್ನಿ ವಿಶಿಷ್ಟ ಬಂಧವನ್ನೂ ವರ್ಜಿಸಬೇಕಾದುದು ಆವಶ್ಯಕವಾಗಿದೆ. ಈ ನಿಷ್ಠೆಗೆ ಯಾವ ರೀತಿಯಲ್ಲೂ ಭಂಗವುಂಟು ಮಾಡಬಾರದು.

ವ್ರತಾನುಷ್ಠಾನದ ಕುರಿತು ದೇವವಚನವಾದ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಎಲೇ ವಿಶ್ವಾಸಿಗಳೇ, ನಿಮ್ಮ ಪೂರ್ವಿಕರಿಗೆ ವಿಧಿಸಿದ ಹಾಗೆಯೇ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ: ನೀವು (ತನ್ಮೂಲಕ) 'ತಕ್ವಾ' (ಭಕ್ತಿ) ಉಳ್ಳವರಾಗಿರಲಿಕ್ಕಾಗಿ (2:184). ಇಲ್ಲಿ ವ್ರತಾನುಷ್ಠಾನವನ್ನು ಪೂರ್ವಿಕ ಮತಸ್ಥರಿಗೆ ವಿಧಿಸಲಾಗಿತ್ತೆಂದು ಪ್ರಸ್ತಾಪಿಸಲಾದಂತೆ ಪೌರಾಣಿಕ ಧರ್ಮಗಳಲ್ಲೆಲ್ಲಾ ವಿವಿಧ ರೀತಿಯಲ್ಲಿ ಅನುಯಾಯಿಗಳಿಗೆ ಉಪವಾಸವನ್ನು ಧರ್ಮಾನುಷ್ಠಾನವಾಗಿ ನಿರ್ಧರಿಸಲಾಗಿತ್ತೆಂದು ನಾವು ಕಾಣುತ್ತಿದ್ದೇವೆ. ಶ್ರೀಬುದ್ಧ ಮೊದಲಾದ ಪ್ರಾಚೀನ ಮತಾಚಾರ್ಯರು ಸಹ ವ್ರತವನ್ನನುಷ್ಠಿಸಿದ್ದರೆಂದು ಚರಿತ್ರೆ ಹೇಳುತ್ತದೆ. ಲಳಿತವಿಸ್ತರ, ಬುದ್ಧಚರಿತೆ ಮೊದಲಾದ ಬೌದ್ಧಗ್ರಂಥಗಳಲ್ಲಿ ಇದಕ್ಕೆ ರುಜುವಾತಿದೆ. ಹಿಂದೂ ಧರ್ಮದ ಪ್ರಕಾರ ಸಹ ಉಪವಾಸವನ್ನು ಆತ್ಮೋನ್ನತಿ ಸಿದ್ಧಿಯ ಮಾರ್ಗವೆಂದು ಗಣಿಸಲಾಗಿದೆ.

ಯಹೂದಮತ ಸ್ಥಾಪಕರಾದ ಮೂಸಾನಬಿ (ಪ್ರವಾದಿ ಮೋಶೆ) ತನಗೆ ದೇವರಿಂದ ಹತ್ತು ಆಜ್ಞೆಗಳು ಲಭಿಸುವ ಮೊದಲು ಉಪವಾಸ ಅನುಷ್ಠಿಸಿದ್ದರೆಂದು ಯಹೂದ ಧರ್ಮಗ್ರಂಥ ಹೇಳುತ್ತದೆ: "ಮೋಶೆ ಆ ಬೆಟ್ಟದಲ್ಲಿ ಯೆಹೋವನ ಸನ್ನಿಧಿಯಲ್ಲಿ ಹಗಲಿರುಳು ನಲ್ವತ್ತು ದಿನ ಇದ್ದನು. ಅವನು ಏನೂ ಊಟಮಾಡಲಿಲ್ಲ. ಏನೂ ಕುಡಿಯಲಿಲ್ಲ. ಆತನು ನಿಬಂಧನದ ವಾಕ್ಯಗಳನ್ನು ಅಂದರೆ ಹತ್ತು ಆಜ್ಞೆಗಳನ್ನು ಆ ಕಲ್ಲಿನ ಹಲಗೆಗಳ ಮೇಲೆ ಬರೆದನು" (ವಿಮೋಚನಕಾಂಡ 34:28) ಪ್ರವಾದಿ ಮೋಶೆ ತಾನೇ ಹೀಗೆ ನುಡಿದುದಾಗಿಯೂ ಕಾಣಬಹುದು: "ಯೆಹೋವನು ನಿಮ್ಮ ಸಂಗಡ ಮಾಡಿದ ನಿಬಂಧನೆಯನ್ನು ಬರೆದ ಆ ಕಲ್ಲಿನ ಹಲಗೆಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಬೆಟ್ಟವನ್ನು ಹತ್ತಿದ್ದಾಗ ನಾನು ಅನ್ನಪಾನಗಳನ್ನು ಬಿಟ್ಟು ಹಗಲಿರುಳು ನಲ್ವತ್ತುದಿನ ಆ ಬೆಟ್ಟದಲ್ಲಿದ್ದೆನು". (ಧರ್ಮೋಪದೇಶ ಕಾಂಡ 9:9).

ಇದೇ ಪ್ರಕಾರ ದಿವ್ಯದೌತ್ಯದಿಂದ ಅನುಗ್ರಹೀತನಾಗುವುದಕ್ಕೆ ಮುಂಚಿತವಾಗಿ ಈಸಾನಬಿ (ಪ್ರವಾದಿ ಯೇಸು) ಸಹ ನಲ್ವತ್ತುದಿನ ಉಪವಾಸ ಆಚರಿಸಿದ್ದರೆಂದು

---

(6ನೇ ಪುಟದಿಂದ)

ನಮ್ಮನ್ನು "ಉತ್ತಮ ಜನಾಂಗ; ಜನರ ಒಳಿತಿಗಾಗಿ ಸೃಷ್ಟಿಸಲ್ಪಟ್ಟವರು'' ಎಂದು ನೀನು ಹೇಳಿರುವೆ. ನಮ್ಮ ಮೇಲೆ ನೀನು ಈ ಗುರುತು ಚೀಟಿಯನ್ನು ಅಂಟಿಸಿರುವೆ. ನಾವು ಬಲಹೀನರೂ, ಬಡವರೂ, ಲೋಕದ ಜನರಿಂದ ದೂರೀಕರಿಸಲ್ಪಟ್ಟವರೂ ಆಗಿದ್ದೇವೆ. ನಮ್ಮನ್ನು ನಿನ್ನ ಬಾಗಿಲಿನಿಂದ ದೂರೀಕರಿಸಬೇಡ. ನಮ್ಮ ಪ್ರಾರ್ಥನೆಗಳನ್ನು ಆಲಿಸು. ಹಿತಕಾಂಕ್ಷಿಯ ಪರಿಚಯಗಳಿಸುವಂತೆ ಲೋಕಕ್ಕೆ ಸಾಧ್ಯವಾಗುವಂತಾಗಲಿ. ಅವರೆಲ್ಲರೂ ಲೋಕಾನುಗ್ರಹಿಯ ಪತಾಕೆಯ ಕೆಳಗೆ ಒಟ್ಟುಗೂಡಿ ಈ ಪ್ರಪಂಚದ ದುಃಖಗಳಿಂದ ಮೋಕ್ಷಗಳಿಸಲಿ. ಈ ಪ್ರಪಂಚದ ಸ್ವರ್ಗಗಳು ಅವರಿಗೆ ಸಿಗಲಿ ಮತ್ತು ಮರಣಾನಂತರದ ಸ್ವರ್ಗಗಳೂ ಅವರಿಗೆ ಲಭ್ಯವಾಗಲಿ. ಇವುಗಳು ನಮಗೆಲ್ಲರಿಗೂ ನಿನ್ನ ಕೃಪೆಯಿಂದ ಸಿಗುವಂತಾಗಲಿ-ಆಮೀನ್ (ಈ ಪ್ರಾರ್ಥನೆ ಸ್ವೀಕರಿಸು).

(ಕನ್ನಡಕ್ಕೆ: ಎಂ. ಯು. ರಶೀದ್)

ಸುವಾರ್ತೆ'ಯಲ್ಲಿ ಪ್ರಸ್ತಾಪಿಸಲಾಗಿದೆ. "ಆತನು ನಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾಯಿತು. (ಮತ್ತಾಯ 4:2). ಉಪವಾಸದ ಮಹತ್ವದ ಕುರಿತು ಅವರು ಶಿಷ್ಯರೊಂದಿಗೆ ಈ ರೀತಿ ಉಪದೇಶಿಸಿದ್ದರು: "ಸಾಸಿವೆ ಕಾಳಷ್ಟು ನಂಬಿಕೆ ನಿಮಗೆ ಇರುವುದಾದರೆ ನೀವು ಈ ಬೆಟ್ಟಕ್ಕೆ—ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವುದು; ಮತ್ತು ನಿಮ್ಮ ಕೈಯಿಂದಾಗದಂಥದ್ದು ಒಂದೂ ಇರುವುದಿಲ್ಲ. ಆದರೆ ಪ್ರಾರ್ಥನೆ ಮತ್ತು ಉಪವಾಸದ ವಿನಹ ಇದು ನೀಗಲಾರದು" (ಮತ್ತಾಯ 17:21). ಮಾತ್ರವಲ್ಲ, ಅವರ ಶಿಷ್ಯಂದಿರು ಉಪವಾಸವಿರುತ್ತಿದ್ದರೆಂದು ಅಪೊಸ್ತಲರ ಕೃತ್ಯಗಳು 27:9–10ರಿಂದ ಸ್ಪಷ್ಟವಾಗುತ್ತದೆ.

ಹೀಗೆ ದೈವಿಕವಾದ ಪೌರಾಣಿಕ ಧರ್ಮಗಳಲ್ಲಿ, ವ್ಯತ್ಯಸ್ತ ರೀತಿಯಿಂದ ಕೂಡಿದ್ದರೂ, ಅನುಯಾಯಿಗಳಿಗೆ ಉಪವಾಸವನ್ನು ಒಂದು ಧರ್ಮಾಚರಣೆಯಾಗಿ ವಿಧಿಸಲಾಗಿತ್ತೆಂದು ವ್ಯಕ್ತವಾಗುತ್ತದೆ. ಮಾತ್ರವಲ್ಲ, ಧರ್ಮಬೋಧಕರಾದ ಎಲ್ಲಾ ಪ್ರವಾದಿಗಳೂ ಪೌರಾಣಿಕ ಮಹರ್ಷಿಗಳೂ ದೇವಪ್ರೇಮಿಗಳಾದ ಪುಣ್ಯಾತ್ಮರೂ ತಮ್ಮ ಆತ್ಮಸಿದ್ಧಿಗಳಿಗೆ ಮೊದಲೂ ನಂತರವೂ ವ್ರತವನ್ನಾಚರಿಸಿದ್ದರೆಂದು ಅವರ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಮೇಲೆ ಉದ್ಧರಿಸಲಾದ ಖುರ್‌ಆನ್ ವಚನದಲ್ಲಿ ಪೂರ್ವಿಕ ಮತಸ್ಥರಿಗೆ ವಿಧಿಸಲ್ಪಟ್ಟಂತೆ ಉಪವಾಸವನ್ನು ಮುಸ್ಲಿಮರಿಗೂ ವಿಧಿಸಲಾಗಿದೆಯೆಂದು ಹೇಳಿದುದರಿಂದ ಆ ಪೂರ್ವಿಜರಿಗಿದ್ದ ಅದೇ ಕ್ರಮದಲ್ಲೇ ಈ ವ್ರತವೂ ಕೂಡ ಎಂದು ತಿಳಿದುಕೊಳ್ಳಬಾರದು. ಏಕೆಂದರೆ ಇಸ್ಲಾಂ ನಿರ್ದೇಶಿಸಿದ ವ್ರತಾನುಷ್ಠಾನ ಹಿಂದಿನ ಮತಸ್ಥರಿಂದ ಬಹಳ ವ್ಯತ್ಯಾಸ ಹೊಂದಿಕೊಂಡಿದೆ. ಇತರ ಮತಗಳಲ್ಲಿ ಇಲ್ಲದ ಹಲವು ನಿಯಮಗಳನ್ನೂ ನಿಯಂತ್ರಣಗಳನ್ನೂ ನಿರ್ಣಯಿಸಿ ಇಸ್ಲಾಂ ಈ ಅನುಷ್ಠಾನವನ್ನು ವ್ಯವಸ್ಥಿತವಾದ ಒಂದು ಧರ್ಮಾಚರಣೆಯಾಗಿ ನಿರ್ದೇಶಿಸಿದೆ. ಹಾಗೆ ಅದು ಆಧ್ಯಾತ್ಮಿಕ ಪ್ರಭಾವದಿಂದ ಕೂಡಿದ ಒಂದು ಕರ್ಮಾನುಷ್ಠಾನವಾಗಿದೆ.

ಮೇಲಿನ ಖುರ್‌ಆನ್ ವಚನದಲ್ಲಿ ಈ ಕರ್ಮಾನುಷ್ಠಾನದ ಪ್ರಯೋಜನದ ಕುರಿತು, 'ಲಅಲ್ಲಕುಂ ತತ್ತಕೂನ್'—ನೀವು 'ತಕ್ವಾ' (ಭಕ್ತಿ) ಉಳ್ಳವರಾಗಿರಲಿಕ್ಕೆ— ಎಂದು ಹೇಳಲಾಗಿದೆ. 'ತತ್ತಕೂನ್' ಎಂಬ ಶಬ್ದ 'ತಕ್ವಾ' ಅಥವಾ 'ಇತ್ತಿಕಾ' ಎಂಬ ಪದದಿಂದ ಉತ್ಪನ್ನವಾಗಿದೆ. 'ತಕ್ವಾ' ಎಂಬುದರ ಅರ್ಥ ದುಃಖ ನಿವಾರಣೆ, ಪಾಪ ವಿಮುಕ್ತಿ ಆತ್ಮೋನ್ನತಿ ಇತ್ಯಾದಿಯಾಗಿದೆ. ಇಲ್ಲಿ ಈ ಪದಪ್ರಯೋಗ ಮೂರು ಅರ್ಥಗಳನ್ನು ಸಹ ಕ್ರೋಢೀಕರಿಸಿಕೊಂಡಿದೆ. ನಾನಿಲ್ಲಿ ಅದಕ್ಕೆ 'ಭಕ್ತಿ' ಎಂಬ ಅರ್ಥ ಕೊಟ್ಟಿದ್ದರೂ ಈ ಪದ ಅದರ ಸಾಕ್ಷಾತ್ ವ್ಯಾಪಕಾರ್ಥವನ್ನು ಆಶ್ಲೇಷಿಸುವುದಿಲ್ಲ. ಆದರೂ 'ಭಕ್ತಿ' ಶಬ್ದ ಅಧ್ಯಾತ್ಮ ಹಾಗೂ ವಿಶ್ವಾಸ ಶ್ರದ್ಧಾದಿಗಳನ್ನು ಸೂಚಿಸುವ ಕಾರಣ 'ತಕ್ವಾ' ಎಂಬ ಶಬ್ದದ ಹೆಚ್ಚುಕಮ್ಮಿ ಸಾಮ್ಯ ಅರ್ಥವನ್ನು ಕೊಡುತ್ತದೆ. ಆದರೆ 'ತಕ್ವಾ' ಎಂಬ ಶಬ್ದದ ವ್ಯಾಪಕಾರ್ಥವನ್ನು ವ್ಯಾಖ್ಯಾನ ಮುಖಾಂತರವೇ ಹೇಳಲು ಸಾಧ್ಯ. ಒಟ್ಟಾರೆ, ವಚನದ ಈ ಪದದ ಪ್ರಕಾರ, ವ್ರತಾನುಷ್ಠಾನದ ಉದ್ದೇಶ ವಿಶ್ವಾಸಿಗಳು ಲೌಕಿಕ ಸುಖಾನುಭೋಗಗಳನ್ನು ತ್ಯಜಿಸಿ ಇಚ್ಛಾನಿರೋಧವನ್ನು ಅಭ್ಯಸಿಸಿ ದೋಷಪ್ರವಣತೆಗಳನ್ನು ಪರಾಭವಗೊಳಿಸಿ ಮನೋನಿಯಂತ್ರಣ ಶಕ್ತಿಯನ್ನು ಸಂಪಾದಿಸಿ ಆತ್ಮೋನ್ನತಿಯನ್ನು ಸಿದ್ಧಿಸಬೇಕೆಂದಾಗಿದೆ.

ಉಪವಾಸದಿಂದ ಮನುಷ್ಯನು ಅನುಭವಿಸಬೇಕಾದ ಶಾರೀರಿಕ ಕ್ಲೇಶ ವಾಸ್ತವದಲ್ಲಿ ಆತನ ವೈಯಕ್ತಿಕ ಮತ್ತು ಸಾಮೂಹಿಕ ಕ್ಷೇಮಾಭಿವೃದ್ಧಿಗೆ ಪ್ರಯೋಜನಕಾರಿಯಾಗಿದೆ. ಆತನು ಇತರ ಜೀವಿಗಳಿಂದ ಭಿನ್ನವಾಗಿ ಅತ್ಯುನ್ನತವಾದ ಒಂದು ಜೀವನವನ್ನು ಗುರಿಯಾಗಿರಿಸಿಕೊಂಡು ಮುನ್ನಡೆಯಬೇಕಾದ ಉತ್ಕೃಷ್ಟಜೀವಿಯಾದುದರಿಂದ ಆತನ ಮಾನಸಿಕ ಶಕ್ತಿಗಳು ವೈಯಕ್ತಿಕ ಹಾಗೂ ಸಾಮಾಜಿಕರಂಗಗಳಲ್ಲಿ ಅತ್ಯಧಿಕ ವೃದ್ಧಿಯನ್ನೂ ವಿಕಾಸವನ್ನೂ ಪಡೆಯಬೇಕಾಗಿದೆ. ಈ ಲಕ್ಷ್ಯವನ್ನು ಸಾಧಿಸಲಿಕ್ಕೆ ವ್ರತಾನುಷ್ಠಾನ ಹೆಚ್ಚು ಸಹಾಯಕಾರಿಯಾದ ಒಂದು ಮಾರ್ಗವೆಂದು ಹೇಳಬಹುದು. ಉಪವಾಸದಿಂದ ಆತನಿಗೆ ತನ್ನ ಇಚ್ಛೆಗಳನ್ನು ನಿರೋಧಿಸಲಿಕ್ಕೂ ಮನೋವಿಕಾರಗಳನ್ನು ನಿಯಂತ್ರಿಸಲಿಕ್ಕೂ ಸಾಧ್ಯವಾಗುತ್ತದೆ. ಕ್ಷಣಿಕ ಸುಖಗಳಿಗೆ ಗುರಿಯಾಗಿ ವಿವೇಕ ಶೂನ್ಯವಾದ ಕಾರ್ಯಗಳಲ್ಲಿ ನಿರತನಾಗುವುದು ಅಥವಾ ಅನುಚಿತವಾಗಿ ವರ್ತಿಸುವುದು ಆತನಿಗೆ ಯುಕ್ತವಲ್ಲ. ಒಟ್ಟಾರೆ, ಇಚ್ಛೆಗಳನ್ನೂ ಮನೋದ್ವೇಗಗಳನ್ನೂ ನಿಯಂತ್ರಿಸಿ ಅವನ್ನು ಸರಿಯಾದ ರೀತಿಯಲ್ಲಿ ಕೊಂಡೊಯ್ಯುವವನಿಗೆ ತನ್ನ ಶಕ್ತಿಯನ್ನು ವಿಕಾಸಗೊಳಿಸಲಿಕ್ಕೂ ಕ್ರಮಶಃ ವೃದ್ಧಿಗೊಳಿಸಲಿಕ್ಕೂ ಸಾಧ್ಯವಿದೆ. ಈ ಇಚ್ಛಾನಿರೋಧ ದೇವರೊಡನಿರುವ ನಿಷ್ಕಳಂಕ ಭಕ್ತಿಯಿಂದ

ಲೂ ಅತೀವ ಪ್ರೇಮದಿಂದಲೂ ಪ್ರೇರಿತವಾಗಿರುವುದರಿಂದ ಆತನ ಅಂತರ್ಬೋಧವೂ ಆತ್ಮಶಕ್ತಿಯೂ ಆತನಿಗೆ ಮಾತ್ರ ವಲ್ಲ ಸಮಸೃಷ್ಟಿಗಳಿಗೂ ಗುಣಕರವಾದ ರೀತಿಯಲ್ಲಿ ಪರಿಣ ಮಿಸುತ್ತದೆ. ಹಾಗೆ, ಸಹಜೀವಿಗಳ ಸುಖದುಃಖಾದಿಗಳಲ್ಲಿ ಭಾಗಿಯಾಗಿ ಅವರ ಕ್ಷೇಮಾಭಿವೃದ್ಧಿಗಳಿಗಾಗಿ ಪ್ರವರ್ತಿಸಲು ಆತನು ಪ್ರೇರಿತನಾಗುತ್ತಾನೆ. ಅದರ ಫಲವಾಗಿ, ಬಂದೊದ ಗುವ ಹೊಣೆಗಾರಿಕೆಗಳನ್ನೆಲ್ಲಾ ಸ್ವಯಂ ವಹಿಸಲು ಆತನು ದೃಢಮನಸ್ಕನೂ ಸ್ಥಿರಚಿತ್ತನೂ ಆಗುತ್ತಾನೆ. ಇವೆಲ್ಲಾ ಉಪವಾಸಕಾಲದ ಇಚ್ಛಾನಿರೋಧ ಅಭ್ಯಾಸದ ಫಲವಾಗಿ ಆತನಿಗೆ ಸಿದ್ಧಿಸುವಂತಹದ್ದು.

ಸಮುದಾಯದ ಕ್ಷೇಮಾಭಿವೃದ್ಧಿಗೆ ವ್ರತವು ಸಹಾ ಯಕಾರಿಯಾಗಿದೆ. ಹೇಗೆಂದರೆ, ಉಪವಾಸ ಮುಖೇನ ಅನುಭವವಾಗುವ ಹಸಿವಿನ ಫಲವಾಗಿ, ದಾರಿದ್ರ್ಯದುಃಖ ದಿಂದ ನರಳುವ ತನ್ನ ಸಹೋದರರ ಕಷ್ಟಾನುಭವಗಳು ವ್ರತಾನುಷ್ಠಾನಿಗೆ ತಿಳಿದು ಅವರೊಂದಿಗೆ ಸಹಾನುಭೂತಿ ತೋರಿಸಲು ಅದು ಪ್ರೇರಕವಾಗುತ್ತದೆ. ಹಸಿವೆ ಏನೆಂದು ತಿಳಿಯದ ಒಬ್ಬ ಧನಾಢ್ಯನಿಗೆ ಹಸಿವೆಯಿಂದ ದಿನಕಳೆ ಯುವ ಬಡವರ ದುರವಸ್ಥೆಯನ್ನು ತಿಳಿಯಲು ಸಾಧ್ಯವಿಲ್ಲ. ಆದರೆ ಆತನು ಇಸ್ಲಾಮಿಕ ಶಾಸನಗಳಲ್ಲಿ ಆತ್ಮಾರ್ಥವಿಶ್ವಾಸ ವುಳ್ಳವನಾಗಿ ಉಪವಾಸವನ್ನಾಚರಿಸುವನಾದರೆ ಆತನಿಗೆ ಹಸಿವಿನ ಬಾಧೆ ಅನುಭವವಾಗಿ, ಬಡವರ ಕಷ್ಟಾನುಭವಗಳ ಕುರಿತು ತಿಳಿಯುವನು. ಅದರ ಫಲವಾಗಿ ಆತನ ಮನಸ್ಸಿ ನಲ್ಲಿ ಅವರ ಮೇಲೆ ದಯೆಯುಂಟಾಗಿ ಅವರಿಗೆ ಸಹಾಯ ಮಾಡಲು ಉದ್ಯುಕ್ತನಾಗುತ್ತಾನೆ. ಇಸ್ಲಾಂ, ಅದರ ಅನು ಯಾಯಿಗಳು ಆಲಸಿಗರೂ ಸುಖಲೋಲುಪರೂ ಮೈಗಳ್ಳ ರೂ ಆಗಿರಲಿಕ್ಕೆ ಒಪ್ಪುವುದಿಲ್ಲ. ತದ್ವಿರುದ್ಧವಾಗಿ, ಅವರು ಸಂದರ್ಭ ಬಂದಾಗ ಎಲ್ಲಾ ವಿಧ ಕಷ್ಟ ಕ್ಲೇಶಗಳನ್ನು ಎದುರಿ ಸಲು ಶಕ್ತರೂ ಸನ್ನದ್ಧರೂ ಆಗಿರಬೇಕೆಂದು ಅದು ಬೋಧಿ ಸುತ್ತದೆ. ಇಸ್ಲಾಂ ನಿರ್ದೇಶಿಸಿದ ಪ್ರಧಾನ ಮೌಲಿಕಾನು ಷ್ಠಾನಗಳಲ್ಲಿ ಒಂದಾದ ವ್ರತಾನುಷ್ಠಾನವನ್ನು ಅದರ ಉದ್ದೇ ಶ ಲಕ್ಷ್ಯಗಳನ್ನು ಅರಿತು ಆತ್ಮಾರ್ಥವಾಗಿ ನಿರ್ವಹಿಸುವವರು ಎಂದಿಗೂ ಆಲಸಿಗರೂ ಸುಖಲೋಲುಪಿಗರೂ ಆಗಲಾ ರರು.

ಉಪವಾಸದಿಂದ ಲಭಿಸುವ ಮತ್ತೊಂದು ಪ್ರಯೋ ಜನವೇನೆಂದರೆ ವ್ರತಸ್ಥನು ಪಾಪದಿಂದ ವಿಮುಕ್ತಿಯನ್ನು ಪಡೆಯುತ್ತಾನೆ. ಶಾರೀರಿಕವಾದ ಭೋಗಾಸಕ್ತಿಯಿಂದ ಪಾಪ ಉತ್ಪನ್ನವಾಗುವುದಷ್ಟೆ. ದುಷ್ಚಟಗಳಿಗೆ ಬಲಿಯಾದ ಮನುಷ್ಯನಿಗೆ ಅವುಗಳಿಂದ ಬಿಡುಗಡೆ ಹೊಂದಲು ಪ್ರಯಾಸ ಕರವಾಗಿ ಕಂಡು ಬರುತ್ತದೆ. ಆದರೆ ಒಬ್ಬನು ತನ್ನ ಚಟ ವನ್ನು ಅಗತ್ಯವನ್ನನುಸರಿಸಿ ಬಿಟ್ಟುಬಿಡಲು ಶಕ್ತನೆಂದಾದರೆ ಆತನು ಎಂದಿಗೂ ಅದರ ದಾಸನಾಗಲಿಕ್ಕಿಲ್ಲ. ಕೆಲವೊಮ್ಮೆ ತನ್ನನ್ನು ಪಾಪದೆಡೆಗೆ ಪ್ರೇರೇಪಿಸುವ ಭೌತಿಕ ಸುಖಾನು ಭೋಗಗಳನ್ನು ದೇವರ ಪ್ರೀತಿಗಾಗಿ ಒಂದು ತಿಂಗಳ ಕಾಲ ಹಗಲು ಹೊತ್ತಿನಲ್ಲಿ ವರ್ಜಿಸಿ, ಹಾಗೆ ಆತ್ಮ ಸಂಯಮನ ವನ್ನು ಕೈಗೊಳ್ಳುವ ಯಾವನಿಗೂ ಪಾಪ ಪ್ರೇರಣೆಗಳನ್ನು ನಿಯಂತ್ರಿಸಲಿಕ್ಕೂ ಜಯಿಸಲಿಕ್ಕೂ ಸುಲಭ ಸಾಧ್ಯ.

ಇನ್ನೊಂದು ಪ್ರಯೋಜನ, ಸರಿಯಾದ ಕ್ರಮದಲ್ಲಿ ವ್ರತವನ್ನಾಚರಿಸುವವನಿಗೆ ಆತ್ಮೋನ್ನತಿ ಲಭಿಸುವುದು. ಉಪವಾಸಗಾರನು ಭಕ್ಷ್ಯ ಪೇಯಾದಿಗಳನ್ನು ವ್ರತಕಾಲದಲ್ಲಿ ಒಂದು ಕ್ಲಪ್ತ ಸಮಯದವರೆಗೆ ಪರಿತ್ಯಜಿಸುವಂತೆಯೇ, ಲೌಕಿಕ ಬಂಧಗಳಿಂದ ಒಂದು ಮಿತಿಯಲ್ಲಿ ದೂರವಿದ್ದು ಕೊಂಡು ತನ್ನ ದಿನನಿತ್ಯದ ಅಭ್ಯಾಸ ಮತ್ತು ರೂಢಿಯನ್ನು ಬದಲಾಯಿಸುತ್ತಾನೆ ಅಥವಾ ಬಿಟ್ಟುಬಿಡುತ್ತಾನೆ. ಈ ಇಚ್ಛಾನಿರೋಧ ಅಭ್ಯಾಸ ಮೂಲಕ ಅವನ ಮನಸ್ಸು ಸ್ವಾಭಾವಿಕವಾಗಿಯೇ ಅಧ್ಯಾತ್ಮ ವಿಚಾರಗಳ ಕಡೆಗೆ ತಿರುಗು ತ್ತದೆ.

ಹೀಗೆ ಶಾರೀರಿಕ ಮತ್ತು ಭೌತಿಕ ಬಂಧಗಳಿಂದೆಲ್ಲಾ ಒಂದು ಮಿತಿಯಲ್ಲಿ ದೂರವಿರುವುದು ಆತ್ಮೋನ್ನತಿಗೆ ಅತ್ಯಾವಶ್ಯಕವೆಂದೂ ಈ ಆಚರಣೆಯ ಮೂಲಕ ಮನು ಷ್ಯನ ಮನಸ್ಸಿನಲ್ಲಿ ಪಾವನವಾದ ಪ್ರತಿಕ್ರಿಯೆಯನ್ನುಂಟು ಮಾಡಲು ಸಾಧ್ಯವಿದೆಯೆಂದೂ ಎಲ್ಲಾ ಧರ್ಮಗಳ ಮಹಾ ಪುರುಷರು ಸ್ವಾನುಭವಗಳ ಆಧಾರದಿಂದ ಸಾಕ್ಷ್ಯವಹಿಸಿ ದ್ದಾರೆ. ಆದರೆ ಈ ರೀತಿಯ ಸಂಗಪರಿತ್ಯಾಗ ಮಿತಿಮೀರು ವುದಾದರೆ ಅದು ಸಾಧಕನ ಶರೀರವನ್ನು ಶಕ್ತಿಗುಂದಿಸಿ, ಅವನು ತನ್ನ ಸಾಮಾಜಿಕ ಹಾಗೂ ಧಾರ್ಮಿಕ ಕರ್ತವ್ಯಗ ಳನ್ನು ನಿರ್ವಹಿಸದಂತೆ ಅಸಮರ್ಥನನ್ನಾಗಿ ಮಾಡುತ್ತದೆ. ಹಾಗೆಯೇ ವಿಷಯಾಸಕ್ತಿಯನ್ನು ತಡೆಯಲು, ಮನೋ ಬಲದ ಅಭಾವದಿಂದ, ಅಸಮರ್ಥನಾಗುತ್ತಾನೆ. ಆದ್ದರಿಂದ ಇಸ್ಲಾಂ ಈ ವಿಷಯದಲ್ಲಿ ಒಂದು ಮಧ್ಯಮಾರ್ಗವನ್ನೂ ಕೈಗೊಂಡಿದೆ. ದೈಹಿಕ ಸುಖಾನುಭವಗಳಿಂದ ಒಂದು ಮಿತಿ ಯಲ್ಲಿ ಹಿಂದೆ ಸರಿದು ನಿಲ್ಲುವರೆ ಅದು ಉಪದೇಶಿಸುವುದಾ ದರೂ ಆದೇ ಸಮಯ, ಒಬ್ಬ ತನ್ನ ದಿನಚರ್ಯೆಗಳನ್ನೂ

ಕರ್ತವ್ಯ ಧರ್ಮಗಳನ್ನೂ ನಿರ್ವಹಿಸಲಿಕ್ಕೆ ಅಪ್ರಾಪ್ತನಾಗುವ ರೀತಿಯಲ್ಲಿ ಮಿತಿಮೀರಿ ತನ್ನ ಶರೀರಕ್ಕೆ ಕ್ಲೇಶ ಪೀಡನೆ ನೀಡುವುದನ್ನು ತಡೆಯುತ್ತದೆ. ಆ ಕಾರಣದಿಂದಲೇ ಮುಹಮ್ಮದ್ ಪೈಗಂಬರರು(ಸ) ಎಡೆಬಿಡದೆ ದೀರ್ಘಕಾಲ ಉಪವಾಸವನ್ನಾಚರಿಸುವುದನ್ನು ಪ್ರೋತ್ಸಾಹಿಸಲಿಲ್ಲ; ಮಾತ್ರವಲ್ಲ ನಿರೋಧಿಸಿದ್ದಾರೆ. ಹಾಗೆ ಸದಾ ವ್ರತವನ್ನನುಷ್ಠಿಸಲು ಉದ್ಯುಕ್ತನಾದ ಓರ್ವ ಶಿಷ್ಯನೊಡನೆ ಪೈಗಂಬರರು ಹೀಗೆ ನುಡಿದರು: "ಎಲೇ ಮನುಷ್ಯ, ನಿನ್ನ ಆತ್ಮಕ್ಕೆ ನಿನ್ನ ಮೇಲೆ ಕೆಲವು ಹಕ್ಕುಗಳಿವೆ; ನಿನ್ನ ಕುಟುಂಬಕ್ಕೆ ನಿನ್ನ ಮೇಲೆ ಕೆಲವು ಹಕ್ಕುಗಳಿವೆ; ನಿನ್ನ ಅತಿಥಿಗಳಿಗೂ ನಿನ್ನ ಮೇಲೆ ಕೆಲವು ಹಕ್ಕುಗಳಿವೆ" (ತಿರ್ಮದಿ). ಮತ್ತೊಂದು ಸಂದರ್ಭದಲ್ಲಿ ಪೈಗಂಬರರು ಹೀಗೆ ಹೇಳಿರುವರು: "ಖಂಡಿತವಾಗಿಯೂ ನಾನು ನಿಮ್ಮ ಪೈಕಿ ಅತ್ಯಧಿಕ ದೈವವಿಚಾರ ತಿಳಿದವನೂ ಭಕ್ತಿಯುಳ್ಳವನೂ ಆಗಿದ್ದೇನೆ. ಆದರೂ ನಾನು ಕೆಲವೊಮ್ಮೆ ಉಪವಾಸವನ್ನಾಚರಿಸುತ್ತೇನೆ; ಕೆಲವೊಮ್ಮೆ ಆಚರಿಸುವುದಿಲ್ಲ. ಹಾಗೆಯೇ ನೀವು ಸಹ ಮಾಡಿರಿ" (ಬುಖಾರಿ). ಸಂಕ್ಷಿಪ್ತವಾಗಿ, ಇಸ್ಲಾಂ ನಿರ್ಧರಿಸಿರುವ ಗಡಿಗಳೊಳಗೆ ಇದ್ದುಕೊಂಡು ಕರ್ಮಾನುಷ್ಠಾನಗಳನ್ನು ಕೈಗೊಳ್ಳಬೇಕಲ್ಲದೆ ಸೀಮೋಲ್ಲಂಘಿಸಿ ತಪೋಮಾರ್ಗವನ್ನು ಸ್ವಯಂ ಆವಿಷ್ಕರಿಸಿ ತನ್ಮೂಲಕ ಶರೀರವನ್ನೂ ಆತ್ಮವನ್ನೂ ಪೀಡಿಸಬಾರದೆಂದೂ, ಆ ಕಾರಣದಿಂದ ಆತನು ದೇವರ ಪ್ರೀತಿಯ ಬದಲು ಕೋಪಕ್ಕೆ ಪಾತ್ರನಾಗುವನೆಂದೂ ಪ್ರಸ್ತುತ ಪೈಗಂಬರರ ನುಡಿಗಳಿಂದ ಗ್ರಹಿಸಬಹುದಾಗಿದೆ.

ಯಥಾರ್ಥದಲ್ಲಿ ಇಸ್ಲಾಂ ಈ ಉಪವಾಸವನ್ನು ನಿರ್ದೇಶಿಸಿ ಸತ್ಯವಿಶ್ವಾಸಿಗಳಿಗೆ ಪವಿತ್ರವಾದ ಆತ್ಮ ಸಂಯಮನ ಮತ್ತು ತ್ಯಾಗದ ತರಬೇತಿಯನ್ನು ನೀಡುತ್ತದೆ.

ಹೀಗೆ ಉಪವಾಸಗಾರನು ಬಾಹ್ಯ ನಿರ್ಬಂಧವಾಗಲಿ ಸ್ವಾರ್ಥಜನ್ಯ ಪ್ರೇರಣೆಯಾಗಲಿ ಇಲ್ಲದೆ ಕೇವಲ ದೈವಾಜ್ಞೆಗೆ ಶಿರಬಾಗಿ ತನ್ನ ಇಂದ್ರಿಯೇಚ್ಛೆಗಳನ್ನು ನಿರೋಧಿಸಿ ಮನೋದ್ವೇಗಗಳನ್ನು ನಿಯಂತ್ರಿಸಿ ತನ್ನ ವ್ರತವನ್ನು ಪೂರ್ಣರೀತಿಯಲ್ಲಿ ಪಾಲಿಸುವಾಗ ದಿವ್ಯವಾದ ಒಂದು ಪರಿಶುದ್ಧತೆಯ ಕಡೆಗೆ ಕೊಂಡೊಯ್ಯಲ್ಪಡುತ್ತಾನೆ. ಆಗ ಆತನು ಎಲ್ಲಕ್ಕಿಂತಲೂ ತನ್ನ ಸುಖ ಸೌಕರ್ಯಗಳಿಗಿಂತಲೂ ದೈವಾಜ್ಞೆಯನ್ನು ಮಿಗಿಲಾಗಿ ಭಾವಿಸಿ, ಈ ಪವಿತ್ರ ಭಾವನೆ ಆತನಲ್ಲಿ ಶಕ್ತಿಗೊಳ್ಳುತ್ತಾ ಬರುತ್ತದೆ. ತನ್ಮೂಲಕ ಇತರ ಸಂದರ್ಭಗಳಲ್ಲಿ ಇಷ್ಟಾನುಸಾರ ಅನುಭವಿಸಬಹುದಾದ ಸುಖಸೌಕರ್ಯಗಳಲ್ಲಿ ತನಗೆ ಇಚ್ಛೆ ಇದ್ದರೂ ತಾನು ವ್ರತಗಾರನಾಗಿರುವುದರಿಂದ ಸರ್ವಸಾಕ್ಷಿಯಾದ ದೇವರ ಸಮ್ಮುಖದಲ್ಲಿ ದೈವಾಜ್ಞೆಯನ್ನು ಉಲ್ಲಂಘಿಸುವರೆ ಆತ್ಮ ಸಂಕೋಚಪಟ್ಟು ತನ್ನ ಆಶೆಯನ್ನು ತಡೆದು ನಿಲ್ಲಿಸುವಾಗ ಆತನ ಆತ್ಮಕ್ಕೆ ದಿವ್ಯವಾದ ಒಂದು ಪವಿತ್ರತೆ ಅನುಭವವಾಗುತ್ತದೆ. ಆ ಪವಿತ್ರತೆ ಆತನ ಪ್ರಜ್ಞೇಂದ್ರಿಯಗಳಲ್ಲೂ ಕರ್ಮೇಂದ್ರಿಯಗಳಲ್ಲೂ ಪ್ರಕಾಶಿಸುತ್ತದೆ. ಹೀಗೆ ದೇವರ ಸಂತುಷ್ಟಿಯನ್ನು ಗಳಿಸುವರೆ ವರ್ಷದಲ್ಲಿ ಒಂದು ತಿಂಗಳ ಕಾಲ ಹಗಲು ಹೊತ್ತಿನಲ್ಲಿ ವ್ರತವನ್ನಾಚರಿಸಿ ಇಚ್ಛಾನಿರೋಧ ಮತ್ತು ಸಂಯಮನವನ್ನು ಅಭ್ಯಸಿಸುವುದರಿಂದ ಆತನಲ್ಲಿ ಈ ಸ್ವಭಾವ ಒಂದು ಸ್ಥಿರಗುಣವಾಗಿ ಮಾರ್ಪಟ್ಟು ದೇವರಾಜ್ಞೆಗೆ ವಿರುದ್ಧವಾಗಿ ಏನನ್ನೂ ಅನುಭವಿಸದಂತೆಯೂ ಪ್ರವರ್ತಿಸದಂತೆಯೂ ಇಚ್ಛಿಸದಂತೆಯೂ ಆತ್ಮಶಕ್ತಿ ಸಂಜಾತವಾಗುತ್ತದೆ. ಈ ಅನುಭೂತಿಯಿಂದ ಅವನ ಸ್ವಭಾವದಲ್ಲಿ ಒಂದು ಬಗೆಯ ಶಾಂತತೆ ತೋರಿಬಂದು, ಅವನು ತನ್ನಿಂದ ಅಶುದ್ಧವಾದ ವರ್ತನೆಗಳಾಗಲಿ ಸ್ವಭಾವಗಳಾಗಲಿ ಪ್ರಕಟವಾಗದಂತೆ ಜಾಗರೂಕನಾಗುತ್ತಾನೆ. ತನ್ಮೂಲಕ ಸಮಾಧಾನ ಮತ್ತು ಸ್ಥಿರತೆ ಅವನಲ್ಲಿ ನೆಲೆಗೊಳ್ಳುವುದು.

**Midland Paints & Hardwares**

9/517, Robinson Road, CALICUT-673001

Kerala State.

Phone: Office 74514

Sole Stockists for: BRITISH PAINT JENSON NICHLSON

KILLICK NIXON (SNOWCEM) SHALIMAR PAINTS

# * 'ಸನ್ಮಾರ್ಗ'ದ ವೃಥಾಲಾಪ *

—ಎಂ. ಪಿ. ಇಬ್ರಾಹಿಂ, ಮಂಜೇಶ್ವರ.

ಜಮಾತೆ ಇಸ್ಲಾಮಿ (ಮೌದೂದಿ) ಆಶ್ರಯದಲ್ಲಿ ಹೊರಡುತ್ತಿರುವ 'ಸನ್ಮಾರ್ಗ' ಎಂಬ ಪತ್ರಿಕೆಯ 10–8–79ರ ಸಂಚಿಕೆಯಲ್ಲಿ "ಮಿರ್ಝಾರ ಬ್ರಿಟಿಷ್ ಪ್ರೇಮ" ಎಂಬ ಒಂದು ಲೇಖನವು ಪ್ರಕಟವಾಗಿದೆ. ಕೆ. ಸಿ. ಸಲೀಂ ಎಂಬವರ ಆ ಲೇಖನದಲ್ಲಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)ರವರು* ಬ್ರಿಟಿಷರ ಮೇಲೆ ಮೂಢವಾದ ಪ್ರೇಮವನ್ನು ಹೊಂದಿದ್ದರೆಂದು ನಿರೂಪಿಸಲು ಮಿರ್ಝಾ ಸಾಹೇಬರ ಕೃತಿಗಳಿಂದ ಕೆಲವು ವಾಕ್ಯಗಳನ್ನು ಉದ್ಧರಿಸುತ್ತಾ ತನ್ನ ಕಾಲಘಟ್ಟದ ಮಹಾ ಅಪರಾಧವಾಗಿದ್ದ ಬ್ರಿಟಿಷ್ ಸರಕಾರದ ಸ್ತುತಿ ಕೀರ್ತನೆಗಳಿಂದ ಅವರ ಕೃತಿಗಳು ತುಂಬಿವೆ ಎಂದು ಆರೋಪಿಸಿದ್ದಾರೆ.

ಪ್ರಪಂಚದಲ್ಲಿ ಅವತೀರ್ಣರಾದ ಸರ್ವ ಪ್ರವಾದಿಗಳನ್ನೂ ಆಯಾ ಕಾಲದ ಸತ್ಯನಿಷೇಧಿಗಳು ಒಂದಲ್ಲ ಒಂದು ಬಗೆಯಲ್ಲಿ ಆಕ್ಷೇಪಿಸಿರುವುದನ್ನು ಪವಿತ್ರ ಖುರ್‌ಆನ್ ವಿವರಿಸಿದೆ. ಸತ್ಯನಿಷೇಧಿಗಳ ಆಕ್ಷೇಪಕ್ಕೂ ಅಪಹಾಸ್ಯಕ್ಕೂ ಗುರಿಯಾಗದ ಒಬ್ಬನೇ ಪ್ರವಾದಿಯೂ ಇಲ್ಲವೆಂದು ಪವಿತ್ರ ಖುರ್‌ಆನ್ ನಮಗೆ ತಿಳಿಸಿಕೊಡುತ್ತದೆ (ಸೂರಃ ಯಾಸೀನ್: ವಚನ 31). ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಸಹ ಅಲ್ಲಾಹುವಿನಿಂದ ನಿಯೋಗಿಸಲ್ಪಟ್ಟ ಒಬ್ಬ ಸತ್ಯಪ್ರವಾದಿಯಾಗಿರುವುದರಿಂದ ಅವರನ್ನೂ ಶತ್ರುಗಳು ಆಕ್ಷೇಪಿಸುತ್ತಿದ್ದಾರೆ. ಒಬ್ಬ ಸತ್ಯ ಪ್ರವಾದಿಯನ್ನು ನಿರರ್ಥಕವಾಗಿ ಆಕ್ಷೇಪಿಸಿ ತೃಪ್ತಿಪಟ್ಟುಕೊಳ್ಳುವಂತಹ ದೌರ್ಭಾಗ್ಯವು ಇಂದು ಮೌದೂದಿ ಸಂಘದವರಿಗೂ ಅವರ ಪತ್ರಿಕೆಗೂ ಬಂದೊದಗಿದೆ.

ಮೌದೂದಿಗಳ ಪೂರ್ವಿಕರಾದ ಮತಪಂಡಿತರು ಸಹ ಅಂದು ಬ್ರಿಟಿಷ್ ಸರಕಾರದ ಸ್ತುತಿ ಕೀರ್ತನೆಗಳಲ್ಲಿ ತೊಡಗಿದ್ದರೆಂಬ ಸತ್ಯವನ್ನು ಇಂದು ಸನ್ಮಾರ್ಗದವರು ಮರೆತುಬಿಟ್ಟದ್ದು ಆಶ್ಚರ್ಯಕರ. ಹಝ್ರತ್ ಅಹ್ಮದ್(ಅ) ಬ್ರಿಟಿಷ್ ಸರಕಾರವನ್ನು ಹೊಗಳಿದ್ದರೆಂದು ಈಗ ಆಕ್ಷೇಪಿಸಲ್ಪಡುತ್ತಿದೆಯಾದರೂ ಅವರ ಜೀವಿತಕಾಲದಲ್ಲಿ ಶತ್ರುಗಳ ಆಕ್ಷೇಪವು ತದ್ವಿರುದ್ಧವಾಗಿತ್ತು. ಹಝ್ರತ್ ಅಹ್ಮದ್‌ರವರು ಬ್ರಿಟಿಷ್ ಸರಕಾರವನ್ನು ಉರುಳಿಸಲು ಶ್ರಮಿಸುತ್ತಿರುವ ಒಬ್ಬ ಮಹದಿವಾದಿಯಾಗಿದ್ದಾರೆಂದು ಅಂದು ಈ ಎದುರಾಳಿಗಳು ಆಕ್ಷೇಪಿಸಿದರು. ಅವರ ಕುರಿತು ಬ್ರಿಟಿಷ್ ಅಧಿಕಾರಿಗಳು ತಪ್ಪು ತಿಳುವಳಿಕೆ ಹೊಂದುವಂತೆ ಈ ಮೌದೂದಿಗಳ ಪೂರ್ವಜರು ಶಕ್ತಿಮೀರಿ ಶ್ರಮಿಸಿದರು. ಮೌಲವಿ ಮುಹಮ್ಮದ್ ಹುಸೇನ್ ಸಾಹೇಬ್ ಬಟಾಲವಿ ಎಂಬವರು ಅಂದು ಬ್ರಿಟಿಷ್ ಅಧಿಕಾರಿಗಳೊಂದಿಗೆ ನಿಕಟ ಸ್ನೇಹ ಹೊಂದಿದ ಒಬ್ಬರಾಗಿದ್ದರು. ಬ್ರಿಟಿಷರ ಸ್ನೇಹವನ್ನು ಗಳಿಸಿಕೊಳ್ಳಲು ಸಮರ್ಥರಾದ ಈ ಮೌಲವಿ ಸಾಹೇಬರಿಗೆ 1887ರ ಮಾರ್ಚ್‌ನಲ್ಲಿ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಅಧಿಕಾರದಿಂದ ನಿವೃತ್ತರಾಗುವಾಗ ಒಂದು ವಿಶೇಷ ಪ್ರಮಾಣ ಪತ್ರಿಕೆಯನ್ನು ನೀಡಿದ್ದರು. ಅದರಲ್ಲಿ ಅವರ ಕುರಿತು "ಅಬೂ ಸಯೀದ್ ಮುಹಮ್ಮದ್ ಹುಸೇನ್ 'ಅಹ್ಲೆ ಹದೀಸ್' ಪಕ್ಷದ ಒಬ್ಬ ಪ್ರಮುಖ ಪಂಡಿತರೂ ಆ ವಿಭಾಗದ ಯೋಗ್ಯ ಪ್ರತಿನಿಧಿಯೂ ಆಗಿದ್ದಾರೆ .. ಅವರು ಚಕ್ರವರ್ತಿ ಮಹಾರಾಣಿಯ ನಿಷ್ಠಾವಂತ ಪ್ರಜೆಗಳಲ್ಲಿ ಒಬ್ಬರಾಗಿದ್ದಾರೆ" ಎಂದು ಶಿಫಾರಸು ಮಾಡಲಾಗಿದೆ. (ಇಶಾಅತು ಸ್ಸುನ್ನ ಸಂ-9; ಪುಟ 292). ಬ್ರಿಟಿಷ್ ಸರಕಾರಕ್ಕೆ ಸಲ್ಲಿಸಿದ ಉತ್ತಮ ಸೇವೆಗಾಗಿ ಅವರಿಗೆ ಸ್ವಲ್ಪ ಜಮೀನು ಸಹ ಜಾಗೀರಾಗಿ ಲಭಿಸಿದೆ (ಇಶಾಅತು ಸ್ಸುನ್ನ ಸಂ–19; ಪುಟ 277). ಮೌದೂದಿಗಳ ಪೂರ್ವಿಕ ನೇತಾರನಾದ ಈ ಮೌಲವಿ ಸಾಹೇಬರು ಬ್ರಿಟಿಷ್ ಅಧಿಕಾರಿಗಳನ್ನು ಸಂತೋಷಪಡಿಸಲು ಕ್ರೈಸ್ತ ಮಿಶನರಿಗಳೊಡನೆ ಸೇರಿಕೊಂಡು ಹಝ್ರತ್ ಅಹ್ಮದರಿಗೆದುರಾಗಿ ಬ್ರಿಟಿಷ್ ಸರಕಾರದಲ್ಲಿ ದುಃಸ್ವಾಧೀನ ಬೆಳೆಸಿಕೊಂಡಿದ್ದರು. "ಸಿವಿಲ್ ಅಂಡ್ ಮಿಲಿಟರಿ ಗಜೆಟ್" ಎಂಬ ಸರಕಾರಿ

---

*ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರನ್ನು ಉದ್ದೇಶಿಸಿ ಬರೆದುದು ಎಂದು ಓದುಗರು ಊಹಿಸಿ ತಿಳಿದುಕೊಳ್ಳಬೇಕೇ ವಿನಾ ಲೇಖನದ ಆದ್ಯಂತ ಮಿರ್ಝಾ ಸಾಹೇಬರು ಎಂದಲ್ಲದೆ ಅದು ಯಾರ ಕುರಿತೆಂದು ಲೇಖಕರು ಸ್ಪಷ್ಟಪಡಿಸಿಲ್ಲ.

"ಭಾರತದ ಮುಸ್ಲಿಮರು ಬ್ರಿಟಿಷ್ ಸರಕಾರದ ವಿರುದ್ಧವಾಗಿ ವರ್ತಿಸುವುದು ಹರಾಮಾಗಿದೆ"

—'ಅಹ್ಲೆಹದೀಸ್' ನೇತಾರ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ.

(ಇಶಾಅತುಸ್ಸುನ್ನ: ಸಂ–6, ಪುಟ 187)

ಪತ್ರಿಕೆಯಲ್ಲಿ ತನ್ನ ಸ್ವಾಧೀನವನ್ನು ಬಳಸಿ, ಹಝ್ರತ್ ಅಹ್ಮದರಿಗೆದುರಾಗಿ ರಾಷ್ಟ್ರದ್ರೋಹವನ್ನು ಆರೋಪಿಸುವ ಲೇಖನಗಳನ್ನು ಬರೆಯಿಸಿಕೊಂಡು "ಈ ವ್ಯಕ್ತಿಯು ಬ್ರಿಟಿಷ್ ಸರಕಾರಕ್ಕೆ ಆಪತ್ಕರವಾದ ಒಬ್ಬ ಮಹದಿವಾದಿ" ಯೆಂದು ಅಧಿಕೃತರು ತಪ್ಪು ತಿಳಿಯುವಂತೆ ಶ್ರಮಿಸಿದರು. (ಇಶಾಅತುಸ್ಸುನ್ನ ಸಂ–16; ಪುಟ 168). ಈ ಅಪ ಪ್ರಚಾರದ ಫಲವಾಗಿ ಹಝ್ರತ್ ಅಹ್ಮದರನ್ನು ಬ್ರಿಟಿಷ್ ಸರಕಾರವು ಸಂಶಯದಿಂದ ನೋಡತೊಡಗಿತು. ಅವರ ಕಾರ್ಯಕಲಾಪಗಳ ಮೇಲೆ ಗೂಢಚರ್ಯೆ ಇಲಾಖೆಯು ನಿಗಾ ಇಡತೊಡಗಿತು.

ಇಂತಹ ಭಯಂಕರವಾದ ಅಪಪ್ರಚಾರವು ನಡೆಯು ತ್ತಲಿರುವಾಗ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರಿಗೆ ತಾನು ಬ್ರಿಟಿಷ್ ಸರಕಾರದ ಶತ್ರುವಾಗಿರುವೆನೆಂಬ ಆರೋಪವನ್ನು ಅಲ್ಲಗಳೆಯಬೇಕಾ ಯಿತು. ಆ ಪುಣ್ಯಾತ್ಮರು ಯುಗಪುರುಷರಾದ ಕಾರಣ ಅವರು ಬ್ರಿಟಿಷ್ ಸರಕಾರದ ಕುರಿತು ಬರೆದ ಲೇಖನಗಳೂ ವಿಜ್ಞಾಪನೆಗಳೂ ಕಾಲಾಂತರದಲ್ಲೂ ಅಳಿಯದೆ ಉಳಿ ಯಿತು; ಇತರರು ಅಂದು ಬ್ರಿಟಿಷ್ ಸರಕಾರವನ್ನು ಹೊಗ ಳಿದುದೂ ಹಝ್ರತ್ ಅಹ್ಮದರನ್ನು ಆಕ್ಷೇಪಿಸಿದ್ದೂ ಏನೇನೂ ಗಮನಿಸಲ್ಪಡದೆ ಅಳಿದುಹೋಯಿತು. ಇದೇ ಹಝ್ರತ್ ಮಿರ್ಝಾ ಸಾಹೇಬರ ಬ್ರಿಟಿಷ್ ಪ್ರೇಮದ ಒಳಗುಟ್ಟು.

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ರವರು ಜೀವಿಸಿದ್ದುದು ಹತ್ತೊಂಭತ್ತನೆಯ ಶತ ಮಾನದ ಉತ್ತರಾರ್ಧದಲ್ಲೆಂಬುದನ್ನು ಮರೆಯಬಾರದು. 1857ರ ಅಥವಾ 1900ನೇ ಇಸವಿಯ ರಾಜಕೀಯ ಪರಿಸ್ಥಿತಿಯನ್ನು ಆಧಾರವಾಗಿರಿಸಿಕೊಂಡು ಒಬ್ಬರು ಹೇಳಿ ದುದನ್ನೋ ಮಾಡಿದುದನ್ನೋ ಅವಲಂಬಿಸಿ 1935ರಲ್ಲಿ ಯಾ 1979ರಲ್ಲಿ ಆಕ್ಷೇಪಿಸುವುದು ನ್ಯಾಯವಾಗುವುದೇ?

**ಸುಸ್ಥಾಪಿತವಾದ ಆಡಳಿತವನ್ನು ಅನುಸರಿಸ ಬೇಕೆಂದೂ ಶಾಂತಿಪಾಲನೆಗಾಗಿ ಸರಕಾರವನ್ನು ಬೆಂಬಲಿಸಬೇಕೆಂದೂ ಪವಿತ್ರ ಖುರ್‌ಆನ್ ಆಜ್ಞಾ ಪಿಸಿದ ಪ್ರಕಾರ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)ರವರು ಬ್ರಿಟಿಷ್ ಸರಕಾರದ ಒಬ್ಬ ನಿಷ್ಠಾವಂತ ಪ್ರಜೆಯಾಗಿ ಜೀವಿಸಿದರು ಎಂಬುದು ಸತ್ಯ.** ಇಮಾಂ ಮಹದಿ ಬಂದರೆ ಖಡ್ಗ ಹಿರಿದು ಯುದ್ಧ ಮಾಡುವರೆಂದೂ ಸರಕಾರಗಳಿಂದ ಅಧಿಕಾರವನ್ನು ಕಿತ್ತು ಕೊಳ್ಳುವರೆಂದೂ ಮೌದೂದಿಗಳೂ ಅವರ ಪೂರ್ವಜರೂ ವಿಶ್ವಾಸಹೊಂದಿ ಆ ರೀತಿ ಪ್ರಚಾರ ಮಾಡಿದ್ದರೆ ಆ ತಪ್ಪಿಗೆ ಹಝ್ರತ್ ಅಹ್ಮದರು ಹೊಣೆಯಾಗಬೇಕೇ?

ಭಾರತದ ಮೌಲಾನಾಗಳ ಮುಖಂಡರೂ ಪ್ರತಿನಿಧಿ ಯೂ ಆಗಿದ್ದುಕೊಂಡು ವಾಗ್ದತ್ತ ಮಸೀಹಾರನ್ನು ವಿರೋಧಿಸಿದ ಮೌಲವಿ ಮುಹಮ್ಮದ್ ಹುಸೇನ್ ಸಾಹೇ ಬರ ಬ್ರಿಟಿಷ್ ಪ್ರೇಮದ ಕುರಿತು ಮೇಲೆ ವಿವರಿಸಿದೆ. ಆ ಕಾಲದ ಸುಪ್ರಸಿದ್ಧ ಮತಪಂಡಿತರಾಗಿದ್ದ ಅಲ್ಲಾಮ ಸಿದ್ಧೀಖ್ ಹಸನ್ ಖಾನ್, ನದೀರ್ ಹುಸೇನ್ ಸಾಹೇಬ್ ದೆಹ್‌ಲವಿ, ಅಶ್ರಫಲಿ ಸಾಹೇಬ್ ಥಾನವಿ ಮೊದಲಾದವರ ಕುರಿತು 'ಸನ್ಮಾರ್ಗ'ವು ಏನು ಹೇಳುತ್ತಿದೆ? ಇವರೆಲ್ಲಾ ಬ್ರಿಟಿಷ್ ಸರಕಾರಕ್ಕೆ ಸೇವೆ ಸಲ್ಲಿಸುವುದರಲ್ಲಿ ಅಭಿಮಾನ ಗೊಂಡವರಲ್ಲವೇ? ಭಾರತೀಯ ಮುಸ್ಲಿಮರ ಮುಖಂಡರಿಗೆ ಮುಖಂಡರಾದ ಸರ್ ಸಯ್ಯದ್ ಅಹ್ಮದ್ ಖಾನರ ಕುರಿತು ಇವರು ಏನು ಹೇಳುತ್ತಾರೆ? ಹಝ್ರತ್ ಅಹ್ಮದರನ್ನು ಬ್ರಿಟಿಷ್ ಪ್ರೇಮಿಯೆಂದು ಕರೆಯುವವರು ಸರ್ ಸಯ್ಯದ ರನ್ನೂ ಬ್ರಿಟಿಷ್ ಪೂಜಕನೆಂದು ಕರೆಯುವರೇ? ಅಲಿಘರ್ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಉದ್ದೇಶಗಳಲ್ಲೊಂದು "To make the muslims of India

worthy and useful subjects of the British Crown" (ಭಾರತೀಯ ಮುಸ್ಲಿಮರನ್ನು ಬ್ರಿಟಿಷ್ ಆಧಿಪತ್ಯದ ಉತ್ತಮ ಪ್ರಜೆಗಳನ್ನಾಗಿ ಮಾಡುವುದು) ಎಂಬುದಾಗಿತ್ತು. (Discovery of India —Nehru, P. 347). ಹಾಗಿದ್ದರೂ ಅಲಿಘರ್ ವಿದ್ಯಾಲಯದ ಸ್ಥಾಪಕರಾದ ಸರ್ ಸಯ್ಯದ್ ಅಹ್ಮದ್ ಖಾನ್ ಸ್ವಾತಂತ್ರ್ಯವಾದಿಗಳಾದ ಮುಸ್ಲಿಮರ ನೇತಾರರಂತೆ! ಹಝ್ರತ್ ಅಹ್ಮದರನ್ನು ಬ್ರಿಟಿಷ್ ಪ್ರೇಮಿಯೆಂದು ಹೇಳುವ ಇವರಿಗೆ ನೀತಿ ಪ್ರಜ್ಞೆ ಇದೆಯೇ? ಬ್ರಿಟಿಷ್ ಸರಕಾರವನ್ನು ಹಝ್ರತ್ ಅಹ್ಮದರೂ ಅಹ್ಮದೀಯರೂ ಹೊಗಳಿದ್ದಾರೆ ನಿಜ. ಬ್ರಿಟಿಷ್ ಸರಕಾರಕ್ಕೆ ಏನಾದರೂ ಉತ್ತಮ ಗುಣಗಳಿದ್ದರೆ ಆ ಗುಣವನ್ನು ಕೀರ್ತಿಸುವುದು ತಪ್ಪಾಗಲಾರದು. ಅದು ತಪ್ಪಾಗುವುದೆಂದಾದರೆ, ಭಾರತದ ರಾಷ್ಟ್ರನಾಯಕರಲ್ಲಿ ಅನೇಕರನ್ನು ನಾವು ಆಕ್ಷೇಪಿಸಬೇಕಾಗುತ್ತದೆ. ಬ್ರಿಟಿಷ್ ಸರಕಾರವು ಜನರಿಗೆ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿತ್ತು ಎಂಬುದನ್ನು ಆಧಾರವಾಗಿರಿಸಿಕೊಂಡೇ ಹಝ್ರತ್ ಅಹ್ಮದರು ಅವರನ್ನು ಹೊಗಳಿದ್ದೂ ಕೀರ್ತಿಸಿದ್ದೂ. ಆ ಸ್ತುತಿ ಕೀರ್ತನೆಗಳಲ್ಲಿ ಅಹ್ಮದೀಯರಿಗೆ ಇಂದೂ ಅಭಿಮಾನವಿದೆಯೆಂಬುದನ್ನೂ ಅದಕ್ಕಾಗಿ ಅವರು ಯಾರೊಡನೆಯೂ ಕ್ಷಮೆ ಯಾಚಿಸುವುದಿಲ್ಲವೆಂಬುದನ್ನೂ 'ಸನ್ಮಾರ್ಗ'ದ ಸಂಪಾದಕರೂ ಮೌದೂದಿಗಳೂ ತಿಳಿದಿರಲಿ.

ಹಝ್ರತ್ ಈಸಾ (ಅ) ರೋಂ ಸಾಮ್ರಾಜ್ಯಕ್ಕೆದುರಾಗಿ ಒಂದು ವಾಕ್ಯವನ್ನಾದರೂ ಉಚ್ಚರಿಸಿ ಕೇಳಬೇಕೆಂದು ಯೆಹೂದ್ಯ ಪುರೋಹಿತರು ನಡೆಸಿದ ಸಕಲ ಪ್ರಯತ್ನಗಳು "ಕೈಸರನದನ್ನು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ" (ಮತ್ತಾಯ 22:21) ಎಂದು ಯೇಸು ಕ್ರಿಸ್ತರು ನಿರ್ಣಾಯಕವಾಗಿ ನುಡಿದು ವಿಫಲಗೊಳಿಸಿದರು. ಹಝ್ರತ್ ಈಸಾ(ಅ)ರನ್ನು ರೋಂ ಸಾಮ್ರಾಜ್ಯದ ಹೊಗಳುಭಟ್ಟನೆಂದು ಈ ಮೌದೂದಿಗಳು ಹೇಳುವರೇ?

ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಕಾಲದಲ್ಲಿ ಈ ಮೌದೂದಿಗಳೂ ಇವರ ಅಬುಲ್‌ಆಲಾ ಮೌದೂದಿ ಸಾಹೇಬರೂ ಎಲ್ಲಿದ್ದರು? ಬ್ರಿಟಿಷ್ ಕಾನೂನುಗಳನ್ನು ಅನುಸರಿಸಿಕೊಂಡು ಯಾವುದೇ 'ಜಿಹಾದ್'ನಲ್ಲೂ ಭಾಗವಹಿಸದೆ ನಿಷ್ಠಾವಂತ ಪ್ರಜೆಯಾಗಿ ಇವರು ಬಾಳಿದರು. ಆ ರೀತಿ ನಡೆದುದು "ಅದು ಸರಿಯೆಂದು ಪ್ರವಾದಿಗಳ ಚರ್ಯೆಗಳಿಂದ ತಿಳಿದು ಬಂದುದರಿಂದ" ಎಂದು ಮೌದೂದಿ ಪತ್ರಿಕೆ "ಕೌಸರ್" ಘೋಷಿಸಿತು (ಕೌಸರ್ 5-6-52). ಈಗ ಅಹ್ಮದೀಯರು ಬ್ರಿಟಿಷ್ ಪ್ರೇಮಿಗಳೆಂದು ಇವರು ಹೇಳುತ್ತಾರೆ!

'ಸನ್ಮಾರ್ಗ'ದ ಲೇಖನದಲ್ಲಿ ಹಝ್ರತ್ ಅಹ್ಮದರ ಕುರಿತು ಅವರು 'ಜಿಹಾದ'ನ್ನು ನಿಷೇಧಿಸಿದರೆಂದು ಆಕ್ಷೇಪಿಸಲಾಗಿದೆ. ಮುಸ್ಲಿಮೇತರ ಆಡಳಿತವನ್ನು ಖಡ್ಗ ಬಲದಿಂದ ಸದೆಬಡಿದು ಅಧಿಕಾರವನ್ನು ಕಿತ್ತುಕೊಳ್ಳಬೇಕೆಂಬ ಮೌದೂದಿ ಸಿದ್ಧಾಂತದಲ್ಲಿ ಅಹ್ಮದೀಯರಿಗೆ ವಿಶ್ವಾಸವಿಲ್ಲ. ಅದು ಇಸ್ಲಾಮಿನ ತತ್ವವೂ ಅಲ್ಲ. ಸ್ಥಾಪಿತವಾದ ಸರಕಾರವನ್ನು ಅನುಸರಿಸಬೇಕೆಂದೂ ಶಾಂತಿಭಂಗವಾಗುವ ರೀತಿಯ ಯಾವುದೇ ಕಾರ್ಯಕ್ಕೂ ಆಸ್ಪದ ನೀಡದೆ ಸರಕಾರದ ನಿಷ್ಠಾವಂತ ಪ್ರಜೆಗಳಾಗಿ ಬಾಳಬೇಕೆಂಬ ಪವಿತ್ರ ಖುರ್‌ಆನಿನ ಪ್ರಬೋಧನೆಯೇ ಅಹ್ಮದೀಯರಿಗೆ ಮಾರ್ಗದರ್ಶನ. ಮುಸ್ಲಿಮರಲ್ಲದವರನ್ನು ಖಡ್ಗ ಬಲದಿಂದ ಸಂಹರಿಸುವ ವಿಧಾನವನ್ನು ಮೌದೂದಿಗಳು 'ಜಿಹಾದ್' ಎಂದು ಕರೆಯುತ್ತಿದ್ದರೆ, ಅಂತಹ ಜಿಹಾದನ್ನು ಖಂಡಿತವಾಗಿಯೂ ಹಝ್ರತ್ ಅಹ್ಮದರು ಕಾಲಹರಣಗೊಳಿಸಿದ್ದಾರೆ. ಯಾಕೆಂದರೆ, ಅದು ಇಸ್ಲಾಂ ಧರ್ಮದ ತತ್ವಗಳಿಗೆ ತೀರ ವಿಪರೀತ. ಪವಿತ್ರ ಇಸ್ಲಾಂ ಧರ್ಮವು ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. "ವಿಶ್ವಾಸ ಕಾರ್ಯದಲ್ಲಿ ಬಲಾತ್ಕಾರವಿಲ್ಲ" (2:257) ಎಂದು ಖುರ್‌ಆನ್ ಘೋಷಿಸುತ್ತದೆ. ಮತ ಸ್ವಾತಂತ್ರ್ಯವನ್ನು ನೀಡುವ ಯಾವ ಸರಕಾರದ ವಿರುದ್ಧವೂ ಜಿಹಾದ್ ಕೂಡದೆಂದು ಪವಿತ್ರ ಖುರ್‌ಆನಿನ ಪ್ರಬೋಧನೆಯ ಆಧಾರದಲ್ಲಿ ಹಝ್ರತ್ ಅಹ್ಮದ್‌ರವರು ಘೋಷಿಸಿದ್ದಾರೆ. ನಾವು ಬ್ರಿಟಿಷ್ ಸರಕಾರದೆದುರು ಜಿಹಾದ್ ಮಾಡದಿರಲು ಕಾರಣವೂ ಇದೇ ಆಗಿದೆ.

ಆದರೆ, ಮೌದೂದಿಗಳ ತತ್ವವೇ ಒಂದು ಬೇರೆ. ಫ್ಯಾಸಿಸ್ಟ್ ಮಾದರಿಯ ಶುದ್ಧ ರಾಜಕೀಯ ಪಕ್ಷವಾದ ಈ ಮೌದೂದಿ ಪಾರ್ಟಿಯವರ ವಿಶ್ವಾಸವು, ಎಲ್ಲ ಮುಸ್ಲಿಮೇತರ ಸರಕಾರಗಳನ್ನೂ ಶಕ್ತಿಯುಪಯೋಗಿಸಿ ಸದೆಬಡಿಯಬೇಕೆಂದೂ ಅದರ ಬದಲಿಗೆ ಇಸ್ಲಾಮಿಕ ಆಡಳಿತವನ್ನು ಸ್ಥಾಪಿಸಬೇಕೆಂದೂ ಆಗಿದೆ. ಅದಕ್ಕಾಗಿ ಖಡ್ಗ ಹಿಡಿದು ಯುದ್ಧ ಮಾಡುವುದನ್ನೇ ಇವರು ಜಿಹಾದ್ ಎಂದು ಹೇಳುತ್ತಾರೆ. ಇವರು ಈ ರೀತಿಯ ಆಕ್ರಮಣ

ಅವಹೇಳಿಸುವಂಥದ್ದೂ ರಾಷ್ಟ್ರದ್ರೋಹಿಗಳೆಂದು ಚಿತ್ರೀಕರಿಸುವಂಥದ್ದೂ ಆಗಿದೆ. ಇದರಿಂದ ಭಾರತ ಸರಕಾರವು ಇಲ್ಲಿನ ಮುಸ್ಲಿಮರನ್ನು ಸಂಶಯ ದೃಷ್ಟಿಯಿಂದ ನೋಡಲು ಕಾರಣವಾಗುವುದಿಲ್ಲವೇ ? ಮೌದೂದಿಗಳ ಈ ಅತ್ಯಂತ ಅಪತ್ಕಾರಿ ತತ್ವಗಳ ಕಾರಣದಿಂದಲೇ ಪ್ರಪಂಚದ ಎಲ್ಲ ಸರಕಾರಗಳೂ ಇವರನ್ನು ಅತ್ಯಂತ ಭೀತಿಯಿಂದ ವೀಕ್ಷಿಸುತ್ತಿರುವುದು.

ಹಝ್ರತ್ ಅಹ್ಮದ್(ಅ)ರವರು ಬ್ರಿಟಿಷರನ್ನು ಹೊಗಳಿದ್ದೂ ಕೀರ್ತಿಸಿದ್ದೂ ಮಾತ್ರವಲ್ಲ, ಬ್ರಿಟಿಷ್ ಸಾಮ್ರಾಜ್ಯದ ಅಧಃಪತನದ ಕುರಿತು ಸಹ ಆ ಮಹಾತ್ಮರು ಭವಿಷ್ಯನುಡಿದಿರುವರು. ಆ ಸತ್ಯ ಸಂಗತಿಯನ್ನು ಈಗ ಇವರು ಮುಚ್ಚಿಡುವುದು ಯಾಕೆ ? ಆ ಪ್ರವಾದಗಳ ಕುರಿತಾದ 'ಇಲ್‌ಹಾಂ'ಗಳಿಗೆ ಪ್ರಸಿದ್ಧಿ ನೀಡಿದ್ದೂ ಅವುಗಳನ್ನು ಉನ್ನತ ಬ್ರಿಟಿಷ್ ಅಧಿಕಾರಿಗಳ ವರೆಗೂ ತಲಪಿಸಿ ಕೋಲಾಹಲವೆಬ್ಬಿಸಿದ್ದೂ ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿಯೇ ಆಗಿದ್ದರು. He prophesied the beginning within eight years of the end of the British Empire. (ಎಂಟು ವರ್ಷಗಳೊಳಗೆ ಬ್ರಿಟಿಷ್ ಸಾಮ್ರಾಜ್ಯದ ಅಂತ್ಯವು ಆರಂಭವಾಗುತ್ತದೆ ಎಂದು ಅವರು ಭವಿಷ್ಯ ನುಡಿದಿದ್ದಾರೆ) ಎಂದೂ He predicts the downfall of British Empire (ಬ್ರಿಟಿಷ್ ಸಾಮ್ರಾಜ್ಯದ ಅವನತಿಯು ಕುರಿತು ಇವರು ಭವಿಷ್ಯನುಡಿಯುತ್ತಾರೆ) ಎಂದೂ ಈ ಜನರು ಆಕ್ಷೇಪಿಸಿದ್ದರು. (His Holiness P. 61, 239). ಬ್ರಿಟಿಷ್ ಸಿಂಹಾಸನದ ಗರ್ಜನೆಯು ಪ್ರಪಂಚವನ್ನೇ ನಡುಗಿಸುತ್ತಿದ್ದ ಆ ಹಳೆಯಕಾಲದಲ್ಲಿ ಈ ರೀತಿಯ ಪ್ರಚಾರಕಾರ್ಯಗಳಿಗೆ ಬೆಲೆಯಿದ್ದಿತಾದರೂ ಇಂದಿನ ಪೇಟೆಯಲ್ಲಿ ಅದಕ್ಕೆ ಧಾರಣೆಯಿಲ್ಲದುದರಿಂದ 'ಸನ್ಮಾರ್ಗ'ವು ಅದನ್ನು ಕೈಬಿಟ್ಟಿರಬಹುದು.

ಇಸ್ಲಾಂ ಧರ್ಮದ ಸತ್ಯತೆಗೆ ಒಂದು ದೃಷ್ಟಾಂತವನ್ನು ಕಾಣಲು ಇಚ್ಛೆಯಿದೆಯೆಂದಾದರೆ, ಒಂದು ವರ್ಷದೊಳಗೆ ಅದನ್ನು ತೋರಿಸಿಕೊಡುವಲ್ಲಿ ತಾನು ಪರಾಜಿತನಾದರೆ, ಬ್ರಿಟಿಷ್ ಸಿಂಹಾಸನದ ಮುಂದೆ ತನ್ನನ್ನು ನೇಣುಗಂಬಕ್ಕೇರಿಸುವುದು ತನಗೆ ಸಮ್ಮತವಾಗಿರುವುದೆಂದು ವಿಕ್ಟೋರಿಯಾ ಮಹಾರಾಣಿಗೆ ಸಮರ್ಪಿಸಿದ ಉಡುಗೊರೆ ಗ್ರಂಥದಲ್ಲಿ (ತುಹ್‌ಫೆ ಖೈಸರಿಯ್ಯಾ) ಪ್ರಸ್ತಾವಿಸುತ್ತಾ, ಕ್ರೈಸ್ತಧರ್ಮ ವಿಶ್ವಾಸವನ್ನು ಸಂರಕ್ಷಿಸುವ ಬಾಧ್ಯತೆಯನ್ನು ಹೊತ್ತ ಬ್ರಿಟಿಷ್ ಸಾಮ್ರಾಜ್ಯದ ಪ್ರತಾಪವನ್ನು ನಿಸ್ಸಾರವೆಂದು ಅವಗಣಿಸಿದ ಹಝ್ರತ್ ಅಹ್ಮದ್(ಅ) ರವರು ಬ್ರಿಟಿಷ್ ಪ್ರೇಮಿಯೇ ? ಅಥವಾ ಕ್ರೈಸ್ತರ ಕೃತಕ ದೇವರು ಇಂದಿಗೂ ಜೀವಿಸಿರುವರೆಂಬ ಸಿದ್ಧಾಂತವನ್ನು ಪ್ರಚಾರಪಡಿಸುತ್ತಾ "ಡಿಫೆಂಡರ್ ಆಫ್ ದಿ ಫೈತ್" ಎಂಬ ಬ್ರಿಟಿಷ್ ಸಿಂಹಾಸನದ ಕೀರ್ತಿಯನ್ನು ಪರೋಕ್ಷವಾಗಿ ಸಂರಕ್ಷಿಸಲು ತಲೆಬಡಿದು ಶ್ರಮಿಸುತ್ತಿರುವ ಮೌದೂದಿಗಳೇ ಬ್ರಿಟಿಷ್ ಪ್ರೇಮಿಗಳು ? ಯಾರೆಂಬುದನ್ನು ಓದುಗರೇ ತೀರ್ಮಾನಿಸಿಕೊಳ್ಳಲಿ.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"........ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"........ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore575 001.

# ಶಿರಛೇದನ ಮತ್ತು ಕರಛೇದನ

—ಎನ್.ಎ.

ಇಸ್ಲಾಂ ಧರ್ಮವನ್ನು ತ್ಯಜಿಸುವ 'ಮುರ್ತದ್ದ'ನ್ನು (ಮತತ್ಯಾಗಿಯನ್ನು) ಮತ್ತು ವ್ಯಭಿಚಾರಿಯನ್ನು ಕಲ್ಲೆಸೆದು ಕೊಲ್ಲುವುದು, ಕಳ್ಳನ ಕೈ ಕಡಿಯುವುದು, ಮದ್ಯಪಾನ ಮಾಡುವವನಿಗೆ ಛಡಿಯೇಟು ಕೊಡುವುದು ಮೊದಲಾದ ಶಿಕ್ಷಾನಿಯಮಗಳನ್ನು ಜಾರಿಗೊಳಿಸಿದರೆ ಇಸ್ಲಾಮಿಕ ಆಡಳಿತೆಯಾಯಿತೆಂದು ಮುಸ್ಲಿಮರಲ್ಲಿ ಕೆಲವರು ಭಾವಿಸಿಕೊಂಡಿರುವರು! ಈ ರೀತಿಯ ದಂಡನೆಗಳನ್ನು ಜಾರಿಗೊಳಿಸಿದರೆ ಸಮಾಜ ಪರಿಶುದ್ಧವಾಗುವುದೆಂದು ಅವರ ಭ್ರಮೆ. ಅಪರಾಧ ಗೈಯ್ಯುವ ಪರಿಸ್ಥಿತಿ ಇಲ್ಲದಂತೆ ಮಾಡುವ ಸಾಮಾಜಿಕ ಸುಧಾರಣೆಯ ಕುರಿತಾದ ಉದಾತ್ತ ಚಿಂತನಗಳಾಗಲಿ ಮನುಷ್ಯ ಸ್ನೇಹ ಪ್ರೇರಣೆಯ ಕುರಿತಾದ ಸರಿಯಾದ ಪ್ರಜ್ಞೆಯಾಗಲಿ ಇವರಿಗಿಲ್ಲ. ಇಸ್ಲಾಮಿಕ ಆಡಳಿತ ಬೇಕೆಂದು ಅಗತ್ಯಪಡಿಸುವುದು ಕೆಲವರ "ಮಂಡೆ ಹೊಡೆದು ಹಾಕಿ" ಕೊಲ್ಲಲಿಕ್ಕೂ ಇನ್ನು ಕೆಲವರ ಕೈ ಕತ್ತರಿಸಲಿಕ್ಕೂ ಬೇಕಾಗಿಯೆಂದು ತೋರಬಹುದು ಇವರ ಉತ್ಸಾಹವನ್ನು ನೋಡಿದಾಗ!

"ಇಸ್ಲಾಮಿಕ ಶಿಕ್ಷಾನಿಯಮ ಪ್ರಕಾರ ಮುರ್ತದ್ದನ್ನು —ಮತತ್ಯಾಗಿಯನ್ನು— ಕೊಲ್ಲಲಾಗುವುದೆ"ಂದು 'ಜಮಾಅತೆ ಇಸ್ಲಾಮಿ' ಎಂಬ ಮೌದೂದಿ ಸಂಘಟನೆಯ ಮಲೆಯಾಳಿ ಪತ್ರಿಕೆ 'ಪ್ರಬೋಧನಂ' ಹೇಳುತ್ತದೆ.* (22-10–77). "ತಲೆ ಹೊಡೆದು ಹಾಕಿ" ಕೊಲ್ಲುವ ಪೈಶಾಚಿಕವೂ ಹೀನವೂ ಬೀಭತ್ಸವೂ ಖುರ್‌ಆನಿಗೆ ವಿರುದ್ಧವೂ ಆದ ಶಿಕ್ಷಾ ಕ್ರಮದಲ್ಲಿ ಇವರಿಗೆ ಬಹಳ ಪ್ರೀತಿ! ಇಂತಹ ಶಿಕ್ಷೆ ಜಾರಿಗೊಳಿಸಿದರೆ ಯಾರೂ ಇಸ್ಲಾಂ ಮತವನ್ನು ತ್ಯಜಿಸುವರೆ ಧೈರ್ಯಪಡಲಾರರಷ್ಟೆ! ಹಾಗೆಯೇ ವ್ಯಭಿಚಾರಿಯನ್ನು ಕಲ್ಲೆಸೆದು ಅಥವಾ ಇನ್ನಾವ ರೀತಿಯಲ್ಲಿ ವಧಿಸಿದರೆ ವ್ಯಭಿಚಾರ ನಿರ್ನಾಮವಾಗುವುದಷ್ಟೆ! ಮತತ್ಯಾಗಿಗೆ ವಧೆ ಶಿಕ್ಷೆಯ ಮಾತಂತಿರಲಿ, ಯಾವುದೇ ಭೌತಿಕ ಶಿಕ್ಷೆ ಇಸ್ಲಾಂ ಧರ್ಮದಲ್ಲಿ ನಿರ್ದೇಶಿಸಲಾಗಿಲ್ಲ. ಮತ್ತಲ್ಲವೇ ಕಲ್ಲೆಸೆದು ಕೊಲ್ಲುವುದು!

ಏಟಿನ ಶಿಕ್ಷೆಯ ಕುರಿತು ಮತ್ತು ಕೈಗಳನ್ನು ಕತ್ತರಿಸುವ ಕುರಿತು ಖುರ್‌ಆನಿನಲ್ಲಿ ಹೇಳಲಾಗಿದೆ. ಯಾವ ಸಂದರ್ಭಗಳಲ್ಲಿ ಈ ಶಿಕ್ಷೆಗಳಿಗೆ ರಿಯಾಯತಿ ತೋರಬಹುದೆಂದು ಖುರ್‌ಆನಿನ ತತ್ವವನ್ನನುಸರಿಸಿಯೇ ತೀರ್ಮಾನಿಸಬಹುದು. ಕ್ರೂರವೂ ಮನುಷ್ಯತ್ವರಹಿತವೂ ಹೀನವೂ ಆದ ಶಿಕ್ಷೆಗೆ ಒಬ್ಬನನ್ನು ಗುರಿಪಡಿಸಬಾರದೆಂದು ವಿಶ್ವಸಂಸ್ಥೆಯ ಮಾನವೀಯ ಹಕ್ಕುಗಳ ಚಾರ್ಟರಿನ ಐದನೆಯ ನಿಬಂಧನೆಯಲ್ಲಿ ಹೇಳಲಾಗಿದೆ. ಮನುಷ್ಯನ ಸ್ಥಾನವನ್ನು ಗೌರವಿಸುವ ಇಸ್ಲಾಮಿಗೆ ಕ್ರೂರವಾದ ಶಿಕ್ಷಾಕ್ರಮಗಳನ್ನು ನ್ಯಾಯೀಕರಿಸಲು ಸಾಧ್ಯವಿಲ್ಲ. ಈ ಶಿಕ್ಷೆಗಳನ್ನು ಜಾರಿಗೊಳಿಸುವ ರೀತಿಗಳಲ್ಲಿ ಕಾಲೋಚಿತ ಬದಲಾವಣೆ ಮಾಡುವುದನ್ನು ಖುರ್‌ಆನ್ ವಿರೋಧಿಸಿಲ್ಲ. ಶಿಕ್ಷೆಗಳನ್ನು ವಿಧಿಸುವಾಗ ಮತ್ತು ಜಾರಿಗೊಳಿಸುವಾಗ ಅಪರಾಧಿಗಳ ದುಃಖನಿವಾರಣೆಗೆ ಸಕಲ ಉಪಾಯಗಳನ್ನು ಕಂಡು ಹಿಡಿಯುವುದನ್ನು ಖಲೀಫಾ ಉಮರ್ (ರ) ಒಂದು ತತ್ವವೆಂಬಂತೆ ಕೈಗೊಂಡಿದ್ದರು.

ಇಂಡಿಯನ್ ಪೀನಲ್ ಕೋಡಿನಲ್ಲಿ ಮರಣ ದಂಡನೆ, ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆ ಮಾತ್ರ ನಿರ್ದೇಶಿಸಲಾಗಿದೆ. ಏಟಿನ ಶಿಕ್ಷೆ ನೀಡಬೇಕಾದ ಅಪರಾಧಗಳಿಗೆ ಸೆರೆಮನೆವಾಸ ಅಥವಾ ಜುಲ್ಮಾನೆಯ ಶಿಕ್ಷೆ ನೀಡಿದರೆ ಅಪರಾಧ ಪುನರಾವರ್ತಿಸದಂತಹ ದಂಡನೆಯಾಗುವುದೇ? ಹಠಸಂಭೋಗ ಕೇಸಿನಲ್ಲಿ ಅಪರಾಧಿಗೆ ಛಡಿಯೇಟು ನೀಡುವುದು ಅತ್ಯಂತ ಫಲಕಾರಿಯಾಗುವುದೆಂದು ಬೊಂಬಾಯಿಯಲ್ಲಿ ಓರ್ವ ನ್ಯಾಯಾಧೀಶ ಒಂದು ತೀರ್ಪಿನಲ್ಲಿ ಎತ್ತಿ ತೋರಿಸಿದರು. ಚಾಟಿಯಿಂದ ಹೊಡೆಯುವ ವ್ಯವಸ್ಥೆಯನ್ನು ಶಿಕ್ಷಾನಿಯಮದಿಂದ ತೆಗೆದು ಹಾಕಿದುದಕ್ಕೆ ಬೊಂಬಾಯಿಯಲ್ಲೇ ಇಬ್ಬರು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಷಾದ ವ್ಯಕ್ತಪಡಿಸಿರುವರು. ಅಪಹರಿಸಿಕೊಂಡು ಹೋದ ಹುಡುಗಿಯೊಬ್ಬಳೊಡನೆ ಕ್ರೂರವಾಗಿ ವರ್ತಿಸಿದ ಒಂದು ಕೇಸಿನಲ್ಲಿ ಮತ್ತು

---

*ಇಂತಹ 'ಒನ್‌ವೇ ಟ್ರಾಫಿಕ್' ನೀತಿಯನ್ನು ಹೊಂದಿರುವಂತಹ ಜಮಾತೆ ಇಸ್ಲಾಮಿ ಪಾರ್ಟಿಯವರು ಶ್ರೀ ಓ. ಪಿ. ತ್ಯಾಗಿಯ ಮತಸ್ವಾತಂತ್ರ್ಯ ಮಸೂದೆಯನ್ನು ವಿರೋಧಿಸುತ್ತಾರೆ. ಏನು ವಿಪರ್ಯಾಸ? ಇವರ ನೈತಿಕ ಪ್ರಜ್ಞೆ ಮತ್ತು ಮನಸ್ಸಾಕ್ಷಿಗೆ ಏನು ಸಂಭವಿಸಿದೆ? —ಸಂ.

ಕಳ್ಳಸರಾಬು ಸಾಗಾಟ ಮಾಡಿದ ಇನ್ನೊಂದು ಕೇಸಿನಲ್ಲಿ ಈ ಇಬ್ಬರು ಮ್ಯಾಜಿಸ್ಟ್ರೇಟರು ಬೇರೆ ಬೇರೆ ತೀರ್ಪುಗಳಲ್ಲಿ ಹೀಗೆ ಪ್ರಸ್ತಾವಿಸಿದ್ದರು. (ಮಾತೃಭೂಮಿ 26-9-1962)

"ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ; ದಿಟವಾಗಿಯೂ ಅದು ನಿಕೃಷ್ಟ ಕೃತ್ಯವೂ ದುರ್ಮಾರ್ಗವೂ ಆಗಿದೆ" (17:33) ಎಂದು ಖುರ್‌ಆನಿನ ಅನುಶಾಸನವಾಗಿದೆ. "ಗುಪ್ತವಾಗಿಯೋ ವ್ಯಕ್ತವಾಗಿಯೋ ಯಾವ ದುಷ್ಕರ್ಮವನ್ನೂ ಸಮೀಪಿಸಬೇಡಿರಿ" (6:152) ಎಂದು ಖುರ್‌ಆನ್ ಆದೇಶಿಸುತ್ತದೆ. ವ್ಯಭಿಚಾರ ಮಾಡಿದ ಅಪರಾಧಕ್ಕೆ ಕಲ್ಲೆಸೆದು ಕೊಲ್ಲುವ ಅಥವಾ ವಧಿಸುವ ಶಿಕ್ಷೆಯನ್ನು ಖುರ್‌ಆನ್ ವಿಧಿಸುವುದಿಲ್ಲ. ವಿವಾಹಿತ ಅಥವಾ ಅವಿವಾಹಿತ ಸ್ತ್ರೀ-ಪುರುಷರು ವ್ಯಭಿಚಾರ ಗೈಯ್ದ ತಪ್ಪಿಗೆ ಖುರ್‌ಆನ್ ಏಟಿನ ಶಿಕ್ಷೆಯನ್ನು ನಿರ್ದೇಶಿಸಿದೆ (24:3). ದಂಡನೆಗೊಳಪಡಿಸಬೇಕಾದರೆ ಅಪರಾಧಗೈಯ್ದುದಕ್ಕೆ ನಾಲ್ವರು ಸಾಕ್ಷ್ಯ ಹೇಳಬೇಕಾಗಿದೆ. ಅಪರಾಧಕ್ಕೆ ಸ್ಪಷ್ಟ ರುಜುವಾತು ಬೇಕೆಂದು ಇದರ ಅರ್ಥವಾಗಿದೆ. ನಾಲ್ವರು ಸಾಕ್ಷ್ಯ ನುಡಿಯಬೇಕಾದರೆ ಇದು ಬಹಿರಂಗ ವೇಶ್ಯಾವಾಟಿಕೆ ಅಥವಾ ಬಲಾತ್ಕಾರಸಂಗದಂತಹ ಸಂದರ್ಭಗಳಲ್ಲಿ ಪ್ರಾಯೋಗಿಕವೆಂದಾಗುತ್ತದೆ.

ಕಳ್ಳತನ ಮಾಡಿದುದಕ್ಕೆ ಕೈಗಳನ್ನು ಕತ್ತರಿಸುವ ಶಿಕ್ಷೆ ಖುರ್‌ಆನ್ ನಿರ್ದೇಶಿಸಿದೆ (5:39). ಪದೇ ಪದೇ ಅಪರಾಧಗೈಯ್ಯುವ (**Habitual offenders**) ಕುಪ್ರಸಿದ್ಧರಾದ ಕೊಳ್ಳೆ-ದರೋಡೆಗಾರರ ಕುರಿತು ಈ ಶಿಕ್ಷೆ ಅಕ್ಷರಾರ್ಥದಲ್ಲೇ ನೀಡುವುದರಲ್ಲಿ ತಪ್ಪಿಲ್ಲ. ವಾಸ್ತವದಲ್ಲಿ ಅಂತಹ ಅಪರಾಧಿಗಳಿಗೆ ಅಪರಾಧ ಪುನರಾವರ್ತಿಸದಂತಹ ಶಿಕ್ಷೆ (**Deterrent**)ಯಾಗಿಯೇ ಖುರ್‌ಆನಿನಲ್ಲಿ ಇದನ್ನು ನಿರ್ದೇಶಿಸಲಾಗಿದೆ. ಅನಂತರದ ವಾಕ್ಯದಲ್ಲೇ "ಪಾಪಕೃತ್ಯದ ಬಳಿಕ ಪಶ್ಚಾತ್ತಾಪಪಟ್ಟು ಸ್ವಯಂ ಒಳ್ಳೆಯವನಾಗುವ ವ್ಯಕ್ತಿಯ ಮೇಲೆ ಅಲ್ಲಾಹು ದಯೆದೋರುವನು. ಅಲ್ಲಾಹು ಅತ್ಯಂತ ಕ್ಷಮೆದೋರುವವನೂ ಕರುಣಾನಿಧಿಯೂ ಆಗಿದ್ದಾನೆ" ಎಂದು ಖುರ್‌ಆನ್ ಹೇಳುತ್ತದೆ. (5:40). ಹಾಗಿರುವಾಗ, ಪಶ್ಚಾತ್ತಾಪಪಡದ, ಸ್ವಯಂ ಸುಧಾರಣೆಗೊಳ್ಳದ ಕುಪ್ರಸಿದ್ಧ ಅಪರಾಧಿಗಳಿಗೆ, ಅಂತಹ ಅಪರಾಧಿಗಳ ಕುರಿತು ಸಮಾಜಕ್ಕೆ ತಿಳಿದಿರಲಿಕ್ಕಾಗಿ, ಪ್ರಸ್ತುತ ಶಿಕ್ಷೆಯಾಗಿದೆ. ಅದು ನೀತಿಯುತವೂ ಮನುಷ್ಯತ್ವಪರವೂ ಆಗಿದೆ. ಕಳವು ಮಾಡಿದುದಕ್ಕೆ ಕೈ ಕಡಿಯುವುದು ನಿರ್ಬಂಧವೆಂದಾದರೆ "ಪಾಪಕೃತ್ಯದ ನಂತರ ಪಶ್ಚಾತ್ತಾಪಪಡುವ ಮತ್ತು ಸ್ವಯಂ ಸುಧಾರಣೆಗೊಳ್ಳುವ" ಅವಕಾಶವೆಲ್ಲಿದೆ?


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

# ಈಸಾನಬಿ(ಅ.) ಸಹ ಜೀವಂತರಲ್ಲ

7-9-79ರ 'ಸನ್ಮಾರ್ಗ' ಸಂಚಿಕೆಯ ಹದೀಸ್‌ದರ್ಶನ ಎಂಬ ಶೀರ್ಷಿಕೆಯಲ್ಲಿ ಉಲ್ಲೇಖಿಸಲಾದ ಒಂದು ಹದೀಸಿನ ಕೊನೆಯ ಭಾಗ ಈ ರೀತಿಯಾಗಿದೆ:

"ಮೂಸಾರು ಬದುಕಿರುತ್ತಿದ್ದು ನನ್ನ ಪ್ರವಾದಿತ್ವ ಕಾಲವನ್ನು ಪಡೆಯುತ್ತಿದ್ದರೆ, ಅವರು ನನ್ನನ್ನೇ ಅನುಸರಿಸುತ್ತಿದ್ದರು"

ಈ ಹದೀಸಿನ ಕುರಿತು ಬರೆದ ಟಿಪ್ಪಣಿಯಲ್ಲಿ 'ತೌರಾತ್' ಅವತೀರ್ಣಗೊಂಡಿದ್ದ ಮೂಸಾ ಪ್ರವಾದಿ (ಅ) ಯವರಿರುತ್ತಿದ್ದರೆ ಅವರೂ ಮುಹಮ್ಮದ್ ಪೈಗಂಬರರ (ಸ.) ಶರೀಅತ್ತನ್ನು (ಧರ್ಮಸಂಹಿತೆಯನ್ನು) ಅನುಸರಿಸಲು ನಿರ್ಬಂಧಿತರಾಗುತ್ತಿದ್ದರೆಂದೂ ಆದರೆ ಹಝ್ರತ್ ಮೂಸಾ (ಅ.) ಇಂದು ಜೀವಂತರಿಲ್ಲವೆಂದೂ ಬರೆಯಲಾಗಿದೆ. ಅನಂತರ, "ಹಝ್ರತ್ ಈಸಾ (ಅ) ಜೀವಂತರಿದ್ದಾರೆ. ಕೊನೆಗಾಲದಲ್ಲಿ ಅವರು ಬಂದಿಳಿದಾಗ ಅವರು ಮುಹಮ್ಮದ್(ಸ.)ರವರನ್ನೇ ಅನುಸರಿಸುವರು ಎಂದು ಟಿಪ್ಪಣಿಗಾರ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಮೇಲೆ ಉದ್ಧರಿಸಲಾದ ಹದೀಸಿನಿಂದ ಮೂಸಾನಬಿ (ಅ) ಜೀವಂತರಲ್ಲವೆಂದು ಟಿಪ್ಪಣಿಗಾರರ ವಿಶ್ವಾಸವೆಂದಾದರೆ, ತದ್ರೂಪದ ಬೇರೊಂದು ಹದೀಸನ್ನು 'ಸನ್ಮಾರ್ಗ'ದ ಗಮನಕ್ಕೆ ತರಲು ನಾವು ಇಚ್ಛಿಸುತ್ತೇವೆ. ಅದು ಈ ರೀತಿಯಾಗಿದೆ:

"ಲೌ ಕಾನ ಮೂಸಾ ವ ಈಸಾ ಹಯ್ಯೈಯ್‌ನಿಲವಾ ವಸಿಅಹುಮಾ ಇಲ್ಲತ್ತಿಬಾಈ" (ಸರ್‌ಖಾನಿ ಶರಹ್ ಮವಾಹಿಬುಲ್ಲದುನ್ನಿಯ, ತಫ್‌ಸೀರ್ ಇಬ್ನು ಕಸೀರ್. ತಬ್ರಾನೀ ಕಬೀರ್, ಅಲ್ ಯವಾಖೀತು ವಲ್ ಜವಾಹಿರ್).

ಅರ್ಥ: "ಮೂಸಾ(ಅ)ರವರೂ ಈಸಾ(ಅ)ರವರೂ ಜೀವಿಸಿರುತ್ತಿದ್ದರೆ ಅವರು ನನ್ನನ್ನು ಅನುಸರಿಸದೆ ಇರುತ್ತಿರಲಿಲ್ಲ."

'ಸನ್ಮಾರ್ಗ' ಉದ್ಧರಿಸಿದ ಹದೀಸಿನಿಂದ ಮೂಸಾನಬಿ(ಅ)ಯವರು ಪೈಗಂಬರರ ಕಾಲದಲ್ಲಿ ಬದುಕಿರಲಿಲ್ಲವೆಂದು ಸ್ಪಷ್ಟವಾಗುವಂತೆಯೇ ಈ ಹದೀಸಿನಿಂದ ಈಸಾನಬಿ(ಅ)ಯವರೂ ಸಹ ಪೈಗಂಬರರ ಕಾಲದಲ್ಲಿ ಬದುಕಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಈಸಾನಬಿ(ಅ) ಎಷ್ಟು ವರ್ಷ ಬದುಕಿದ್ದರೆಂದು ಇನ್ನೊಂದು ಹದೀಸು ವ್ಯಕ್ತಗೊಳಿಸುತ್ತದೆ. ಮುಹಮ್ಮದ್ ಪೈಗಂಬರ(ಸ.)ರು ಹೀಗೆ ಹೇಳಿರುತ್ತಾರೆ:

"ಇನ್ನ ಈಸಬ್ನ ಮರ್‌ಯಮ ಆಷ ಇಶ್ರೀನ ವ ಮಿಅತ ಸನತಿನ್" (ತಬ್ರಾನಿ). ಅರ್ಥ: "ಈಸಬ್ನು ಮರ್‌ಯಂ ನೂರಇಪ್ಪತ್ತು ವರ್ಷ ಕಾಲ ಬದುಕಿದ್ದರು".

ಎಷ್ಟು ಸ್ಪಷ್ಟವಾದ ರೀತಿಯಲ್ಲಿ ಈ ಹದೀಸ್ ಈಸಾನಬಿಯ ಮರಣವನ್ನು ಘೋಷಿಸುತ್ತದೆ!

—ಅ. ಝ. ಅ.

READ

MINARET

ENGLISH QUARTERLY JOURNAL

Single Copy: Rs. 1-25 Annual Subscription: Rs. 5/-

Apply to: The Manager, Minaret Quarterly,
Ahmadiyya Building, West Silk Street, CALICUT-673001.

# * ಸಂಪಾದಕರಿಗೆ ಪತ್ರ *

ಪ್ರಿಯರೇ,

ತಮ್ಮ ಜೂನ್ 1979ರ 'ಯುಗರಶ್ಮಿ' ಸಿಕ್ಕಿತು. ಅದರಲ್ಲಿರುವ 'ಇಸ್ಲಾಂ ಮತ ತತ್ತ್ವಜ್ಞಾನ' ಎಂಬ ಲೇಖನವನ್ನು ನಾನು ಬಹಳವಾಗಿ ಮೆಚ್ಚಿದ್ದೇನೆ. ಇಸ್ಲಾಂ ಮತದ ತತ್ವಗಳನ್ನು ಸರಳವಾಗಿ ವಿವರಿಸುವ ಲೇಖನಗಳು ತಮ್ಮ ಪತ್ರಿಕೆಯಲ್ಲಿ ಬಹಳಷ್ಟು ಬಂದು, ಅದನ್ನು ಸರ್ವರೂ ತಿಳಿಯುವಂತಾಗಲಿ ಎಂದು ಹಾರೈಸುತ್ತೇನೆ.

ಸಿದ್ಧಕಟ್ಟೆ. ಟಿ. ಚಂದ್ರರಾಜ ಶೆಟ್ಟಿ.

❁❁

ಪ್ರಿಯ ಸಂಪಾದಕರಿಗೆ,

ತ್ರೈಮಾಸಿಕ ಪತ್ರಿಕೆ "ಯುಗರಶ್ಮಿ"ಯಲ್ಲಿ ಸರ್ ಮುಹಮ್ಮದ್ ಝಫರುಲ್ಲಾ ಖಾನರವರ "Wisdom of the Holy Prophet Muhammad" ಎಂಬ ಪುಸ್ತಕದಿಂದ ಆಯ್ದುಕೊಂಡ "ಮುಹಮ್ಮದ್ ಪೈಗಂಬರರ ನುಡಿಮುತ್ತುಗಳ"ನ್ನು ಓದಿ ಬಹಳ ಸಂತೋಷವಾಯಿತು. ನೈತಿಕ ಮೌಲ್ಯಗಳನ್ನು ಓದಿ ಅದರಂತೆ ನಾವು ಸಹ ಜೀವನದಲ್ಲಿ ನಡೆದುಕೊಂಡು ಹೋದರೆ ಒಂದು ಒಳ್ಳೆಯ ದಡವನ್ನು ಸೇರಿದಂತೆಯಾಗುತ್ತದೆ ಎಂದು ಊಹಿಸಿಕೊಳ್ಳುತ್ತೇನೆ.

ನೆವುಂದಿ. ಡಿ. ಜಿ. ಕಡಕೋಲ್.

## ರೂ. 100ರಿಂದ 500ರ ವರೆಗೆ "ಯುಗರಶ್ಮಿ"ಗೆ ಕೊಡುಗೆಯಿತ್ತ ಉದಾರಮತಿಗಳು

| | | | |
|---|---|---|---|
| 1. | ಜನಾಬ್ ಎಂ. ಎ. ರಶೀದ್ ಸಾಹೇಬ್, ಮಂಜೇಶ್ವರ | — | 150–00 |
| 2. | ,, ಸಿದ್ದೀಖ್ ಅಮೀರಲಿ ,, ಮೊಗ್ರಾಲ್ | — | 100–00 |
| 3. | ,, ಪಿ. ಕೆ. ಉಮರ್ ,, ಮಡಿಕೇರಿ | — | 100–00 |
| 4. | M/s. ಮದಾರ್ ಔಷಧಾಲಯ, ಪಯಂಗಾಡಿ | — | 100–00 |
| 5. | ಜನಾಬ್ ಎಂ. ಅಬ್ದುಲ್ ಮಾಲಿಕ್ ಸಾಹೇಬ್, ಪಯಂಗಾಡಿ | — | 100–00 |
| 6. | ,, ಬಿ. ಅಬ್ದುರ್ರಹೀಂ ,, ,, | — | 100–00 |
| 7. | ,, ಕೆ. ಪಿ. ಮಸ್‌ಊದ್ ಅಹ್ಮದ್ ,, ,, | — | 100–00 |
| 8. | M/s. ಭಾರತ್ ಗನ್ನಿ ಸ್ಟೋರ್ಸ್, ಕಲ್ಲಿಕೋಟೆ | — | 100–00 |
| 9. | ,, ಜನತಾ ಸ್ಟೋರ್ಸ್, ,, | — | 125–00 |
| 10. | ಜನಾಬ್ ಕೆ. ಪಿ. ಅಸ್ಸೂ ಸಾಹೇಬ್ ,, | — | 100–00 |
| 11. | ,, ಎಂ. ಅಬ್ದುಲ್ ಕರೀಂ ,, ಪಯಂಗಾಡಿ | — | 100–00 |
| 12. | ,, ತಯ್ಯಿಬ್ ಅಹ್ಮದ್ ರಶೀದ್ ಸಾಹೇಬ್, ಮಂಜೇಶ್ವರ | — | 500–00 |
| 13. | ,, ಎಂ. ಎ. ಮುಹಮ್ಮದ್ ಸಾಹೇಬ್, ಕಲ್ಲಿಕೋಟೆ | — | 100–00 |

# ಅಹ್ಮದಿಯಾ ವಾರ್ತೆಗಳು

## ಸ್ಪೈನಿನಲ್ಲಿ ಹೊಸ ಪ್ರಚಾರ ಕೇಂದ್ರ

ಅಹ್ಮದಿಯಾ ಸಂಘಟನೆಯ ದ್ವಿತೀಯ ಖಲೀಫರ ಕಾಲದಲ್ಲಿ ಸ್ಪೈನಿನಲ್ಲಿ ಪ್ರಥಮವಾಗಿ ಅಹ್ಮದಿಯಾ ಮಿಶನ್ ಸ್ಥಾಪಿತವಾಯಿತು. ಎರಡನೆಯ ಪ್ರಚಾರ ಕೇಂದ್ರವನ್ನು ಜಪಾನಿನ ಕರ್ತಬಾ ಎಂಬಲ್ಲಿ ತೆರೆಯಲು ಈಗಿನ ಖಲೀಫರು ತೀರ್ಮಾನಿಸಿದ್ದಾರೆ. ಮೌಲವಿ ಅಬ್ದುಸತ್ತಾರ್ ಖಾನ್‌ರವರು ಅಲ್ಲಿ ಮಿಶನರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕರ್ತಬಾದ ಇತಿಹಾಸ ಪ್ರಸಿದ್ಧ ಜುಮಾ ಮಸೀದಿಯ ನಿರ್ಮಾಣದ ಅಡಿಗಲ್ಲು ಕ್ರಿ. ಶ. 785ರಲ್ಲಿ ಅಬ್ದುರ್ರಹ್ಮಾನ್ ಅವ್ವಲ್ ಎಂಬ ಮಹಾನ್ ವ್ಯಕ್ತಿಯ ಹಸ್ತದಿಂದ ಹಾಕಲ್ಪಟ್ಟಿತ್ತು. ಆ ಮಸೀದಿಯ ಮನೋಹರತೆಯು ಪ್ರಸಿದ್ಧಿಯನ್ನು ಪಡೆದಿದೆ. ಅದರ 'ಮೆಹ್ರಾಬ್'ನಲ್ಲಿ ನಿಂತು ಮೌಲಾನಾ ಕರಂ ಇಲಾಹಿ ಝಫರ್ ಅವರು 'ಅಝಾನ್' ಕರೆಕೊಟ್ಟರು. ನಂತರ ಅದರ ಇಂಗ್ಲಿಷ್ ಮತ್ತು ಸ್ಪೇನಿಶ್ ಭಾಷಾಂತರವನ್ನು ಹೇಳಿದರು. ಅಲ್ಲಿ ನೆರೆದಿದ್ದ ನೂರಾರು ಪ್ರವಾಸಿಗರು ಅದನ್ನು ಬಹಳ ಶ್ರದ್ಧೆಯಿಟ್ಟು ಶ್ರವಿಸಿದರು. ಆ ಮಸೀದಿಯ ಮಿನಾರದ ಮೇಲೆ ಇಂದು ಇಗರ್ಜಿಯ ಗಂಟೆ ನೇತಾಡುತ್ತಿದೆ. ಮೌಲವಿ ಅಬ್ದುಸತ್ತಾರ್‌ಖಾನರು ಮಿನಾರದ ಮೇಲೇರಿ ಬಹುದೂರ ಕೇಳಿಸುವಂತೆ 'ಅಝಾನ್' ಕರೆ ನೀಡಿದರು.

## ಶ್ರೀಲಂಕಾದಲ್ಲಿ ಹೊಸ ಮಸೀದಿ

ಕೊಲಂಬೊದಿಂದ 150 ಮೈಲು ದೂರ ಪಶ್ಚಿಮದಲ್ಲಿರುವ ಪೊಲಾನಾವಾರ್ ಎಂಬಲ್ಲಿ ಸ್ಥಳೀಯ ಅಹ್ಮದಿಯರ ವತಿಯಿಂದ ನಿರ್ಮಿಸಲ್ಪಟ್ಟ ಮಸೀದಿಯನ್ನು ಜುಲಾಯಿ6 ರಂದು ಶ್ರೀಲಂಕಾ ಅಹ್ಮದಿಯಾ ಮಿಶನರಿಯಾದ ಮೌಲವಿ ಮುಹಮ್ಮದ್ ಉಮರ್ ಸಾಹೇಬರು ಉದ್ಘಾಟಿಸಿದರು.

## ಲಂಡನಿನಲ್ಲಿ ಸಮ್ಮೇಳನ

ಯು.ಕೆ. ಅಹ್ಮದಿಯಾ ಸಂಘಟನೆಯ·14ನೇ ವಾರ್ಷಿಕ ಸಮ್ಮೇಳನ ಮೇ 19ರಂದು ಲಂಡನಿನಲ್ಲಿ ಮಹ್ಮೂದ್ ಹಾಲ್‌ನಲ್ಲಿ ವಿಜೃಂಭಣೆಯಿಂದ ಜರಗಿತು. ಸಮ್ಮೇಳನವನ್ನು ಮಿರ್ಝಾ ಮುಬಾರಕ್ ಅಹ್ಮದ್ ಉದ್ಘಾಟಿಸಿದರು.

ಸ್ಕಾಟ್‌ಲ್ಯಾಂಡಿನ ಅಹ್ಮದಿಯಾ ಮಿಶನರಿ ಜ। ಬಶೀರ್ ಅಹ್ಮದ್ ಓರ್ಚಾರ್ಡ್, ಜ। ಹಾಶಿಂ ಸಯೀದ್, ಜ। ಎಂ. ಎ. ಸಾಖಿ ಮತ್ತು ಯೋರ್ಕ್‌ಶೈರ್‌ನ ಮಿಶನರಿ ಜ। ಅನಿಸುರ್ರಹ್ಮಾನ್ ಪ್ರಥಮ ದಿನ ಭಾಷಣವಿತ್ತರು.

ದ್ವಿತೀಯ ದಿನ ಪುರುಷರ ಸಭೆ ವಿಂಬ್ಲಡನ್ ಟೌನ್ ಹಾಲಿನಲ್ಲಿ ಮತ್ತು ಸ್ತ್ರೀಯರ ಸಭೆ ಮಹ್ಮೂದ್ ಹಾಲ್‌ನಲ್ಲಿ ಜರಗಿದವು. ಮಹಿಳಾ ಸಂಘದ ಸದಸ್ಯರಲ್ಲದೆ ಮೌಲಾನಾ ಶೈಕ್ ಮುಬಾರಕ್ ಅಹ್ಮದ್ (ಲಂಡನ್ ಮಸೀದಿಯ ಇಮಾಂ ಮತ್ತು ಮಿಶನರಿ) ಮತ್ತು ಸರ್ ಮುಹಮ್ಮದ್ ಝಫರುಲ್ಲಾ ಖಾನರು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದರು.

ಪುರುಷರ ಸಭೆಯಲ್ಲಿ ಜ। ನಾಸಿರ್ ಅಹ್ಮದ್ ಸ್ಕ್ರಿಪಿನೆರ್ (ಅಧ್ಯಕ್ಷ), ಸ್ವೀಡನಿನ ಮಿಶನರಿ ಜ। ಕಮಾಲ್ ಯೂಸುಫ್, ಜರ್ಮನಿಯ ಮಿಶನರಿ ಜ। ಎಂ. ಎ. ಖಾನ್, ನೈಜೀರಿಯಾದ ಝಾಈಂ ಅನ್ಸಾರುಲ್ಲಾ ಅಲ್‌ಹಾಜ್ ಕುಕುಯಿ. ಮೌಲವಿ ಅಬ್ದುಲ್ ಕರೀಂ ಶರ್ಮಾ, ಜ। ಬಶೀರ್ ಅಹ್ಮದ್ ರಫೀಕ್ (ಲಂಡನ್ ಮಸೀದಿಯ ಮಾಜಿ ಇಮಾಂ ಮತ್ತು ಮಿಶನರಿ), ಜ। ಮುನಿರುದ್ದೀನ್ ಶಮ್ಸ್ ಮೊದಲಾದವರು ಮಾತನಾಡಿದರು.

ಕೊನೆಯ ಅಧಿವೇಶನ ಸರ್ ಮುಹಮ್ಮದ್ ಝಫರುಲ್ಲಾ ಖಾನರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಅಂದಿನ ಮುಖ್ಯ ಭಾಷಣಗಾರ ಮೌಲಾನಾ ಶೈಕ್ ಮುಬಾರಕ್ ಅಹ್ಮದ್ ಸಾಹೇಬರಾಗಿದ್ದರು.

## ಅಹ್ಮದಿಯಾ ಸಂಘಟನೆಯ ಕುರಿತು ಮಹಾಪ್ರಬಂಧ

ಪಿ. ಎಚ್. ಡಿ. ಗಾಗಿ ಅಹ್ಮದಿಯಾ ಸಂಘಟನೆಯ ಬಗ್ಗೆ ಮಹಾ ಪ್ರಬಂಧವನ್ನು ಬರೆಯುತ್ತಿರುವ ಪಾರಸ್ತ್ಯ ಭಾಷಾ ತಜ್ಞರೋರ್ವರು ಇತ್ತೀಚಿಗೆ ಲಂಡನಿನಲ್ಲಿರುವ ಅಹ್ಮದಿಯಾ ಮಸೀದಿಗೆ ಭೇಟಿಯಿತ್ತರು. ಹೀಬ್ರೂ ಮತ್ತು ಅರಬಿ ಬಾಷೆಗಳಲ್ಲಿ ಅಪಾರ ಜ್ಞಾನಗಳಿಸಿರುವ ಆ ವಿದ್ವಾಂಸ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಬರೆದ ಗ್ರಂಥಗಳನ್ನು ಓದುವ ಉದ್ದೇಶಕ್ಕಾಗಿಯೇ ಉರ್ದು ಭಾಷೆಯನ್ನು ಕಲಿತಿರುವರು.

## ಜಪಾನಿನಲ್ಲಿ ಇಸ್ಲಾಮಿನ ಪ್ರಚಾರ

ಜಪಾನಿನಲ್ಲಿ ವಿವಿಧ ಮಾಧ್ಯಮಗಳ ಮೂಲಕ ಇಸ್ಲಾಮಿನ ನೈಜರೂಪ ಜಪಾನಿನ ಪ್ರಜೆಗಳಿಗೆ ಸಾದರ ಪಡಿಸಲಾಗುತ್ತದೆಯೆಂದು ಅಲ್ಲಿನ ಅಹ್ಮದಿಯಾ ಮಿಶನರಿ ತಿಳಿಸಿದ್ದಾರೆ. ಮನುಷ್ಯನ ಮರಣಾನಂತರ ಜೀವನದ ಕುರಿತು ಇಸ್ಲಾಮಿನ ದೃಷ್ಟಿಕೋನವೇನೆಂದು ಸವಿಸ್ತಾರವಾಗಿ ಪ್ರತಿಪಾದಿಸುವ ಒಂದು ಲೇಖನ ಇತ್ತೀಚೆಗೆ ಬೌದ್ಧ ಮತದ ವತಿಯಿಂದ ಪ್ರಕಟಗೊಳ್ಳುತ್ತಿರುವ "ಧರ್ಮ ವರ್ಲ್ಡ್"ನಲ್ಲಿ ಪ್ರಕಾಶಿತವಾಗಿದೆ. ಅದಲ್ಲದೆ ಇತರ ವಾರ್ತಾ ಮಾಧ್ಯಮಗಳ ಮೂಲಕವೂ ಇಸ್ಲಾಮಿನ ವಿಶೇಷತೆಗಳ ಕುರಿತು ಪ್ರಚಾರಗೊಳಿಸಲ್ಪಡಲಾಗುತ್ತಿದೆ. ಇಸ್ಲಾಮಿನ ಕುರಿತಾದ ತಪ್ಪಭಿಪ್ರಾಯಗಳನ್ನು ದೂರೀಕರಿಸಲಾಗುತ್ತಿದೆ.

ಕಳೆದ ಮೇ 6ರಂದು ಟೆಲಿವಿಷನಿನ ಒಂದು ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ, ಮುಹಮ್ಮದ್ ಪೈಗಂಬರರ ವಚನಗಳನ್ನು ಕ್ರೋಡೀಕರಿಸಲಾದ ಇಸ್ಲಾಮಿನ ಪವಿತ್ರ ಗ್ರಂಥದ ಹೆಸರೇನೆಂದು ಕೇಳಲಾದ ಪ್ರಶ್ನೆಗೆ "ಖುರ್‌ಆನ್" ಎಂಬ ತಪ್ಪು ಉತ್ತರವನ್ನು ಬಿತ್ತರಿಸಲಾಗಿತ್ತು. ತಕ್ಷಣ ಅಹ್ಮದಿಯಾ ಪ್ರತಿನಿಧಿಗಳು ಟೆಲಿವಿಷನ್ ಪ್ರಸಾರ ಕೇಂದ್ರವನ್ನು ಸಂಪರ್ಕಿಸಿ ಅವರು ಬಿತ್ತರಿಸಿದ ತಪ್ಪು ಮಾಹಿತಿಯ ಬಗ್ಗೆ ಅರುಹಿದರು. ಟಿ. ವಿ. ಡೈರೆಕ್ಟರ್ ತಪ್ಪನ್ನು ತಿದ್ದಲು ಸಮ್ಮತಿಸಿದರು. "ಖುರ್‌ಆನ್" ಸಂಪೂರ್ಣ ದೇವರ ವಾಕ್ಯಗಳೆಂದೂ ಅದರಲ್ಲಿ ಪೈಗಂಬರರ ವಚನ ಸೇರಿಲ್ಲವೆಂದೂ ಸರಿಪಡಿಸಿ ಪ್ರಸಾರಗೊಳಿಸಲಾಯಿತು.

## ಅಬಾದಾನ್‌ನಲ್ಲಿ ಹೊಸ ಮಸೀದಿ

ನೈಜೀರಿಯಾದ ಅಬಾದಾನ್‌ನಲ್ಲಿ ಅಹ್ಮದಿಯಾ ವತಿಯಿಂದ ನಿರ್ಮಿಸಲ್ಪಟ್ಟ ಒಂದು ಸುಂದರವಾದ ಮಸೀದಿಯು ಎಪ್ರಿಲ್ ತಿಂಗಳಲ್ಲಿ ಉದ್ಘಾಟಿಸಲ್ಪಟ್ಟಿತು. ಇದರ ಶಂಕುಸ್ಥಾಪನೆಯನ್ನು ಅಬಾದಾನಿನ ಚೇರ್‌ಮನ್ ಅಲ್ ಹಾಜ್ ಆರ್. ಎ. ಬಸಾರಿ ಮಾಡಿದ್ದರು. ಅನ್ಸಾರುದ್ದೀನ್ ಸೊಸೈಟಿಯ ಪದಾಧಿಕಾರಿಯಾದ ಅಲ್‌ಹಾಜ್ ಜೆ. ಓ. ಔಸಿನಿಯಾ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ಸಮಾರಂಭ ಜರಗಿತು. ಈ ಮಸೀದಿ ಏಕದೈವಾರಾಧನೆಗೆ ತೆರೆದಿರಿಸಲಾಗಿದೆಯೆಂದು ಅವರು ಹೇಳಿದರು. ಅಹ್ಮದಿಯರ ಪರಿಶ್ರಮವನ್ನು ಅವರು ಶ್ಲಾಘಿಸಿ, ಇತರ ಮುಸ್ಲಿಮರು ಸಹ ಅವರಿಗೆ ನೆರವೀಯಬೇಕೆಂದು ಒತ್ತಾಯಿಸಿದರು.

ಈ ಸಮಾರಂಭದ ಸಂದರ್ಭದಲ್ಲಿ ಹತ್ತು ಮಂದಿ 'ಬೈಅತ್' ಪ್ರತಿಜ್ಞೆಮಾಡಿ ಅಹ್ಮದಿಯರಾದರು.

("ಟ್ರೂತ್" ಇಂಗ್ಲಿಷ್ ವಾರಪತ್ರಿಕೆ, 8—6—1979 ನೈಜೀರಿಯಾ)

## ನೈಜೀರಿಯಾದಲ್ಲಿ 'ವಾಯ್ಸ್ ಓಫ್ ಇಸ್ಲಾಂ' ಬಿತ್ತರಣೆ

ಅಹ್ಮದಿಯಾ ಮಿಶನಿನ ವತಿಯಿಂದ ನೈಜೀರಿಯಾದ ಔಗನ್ ರೇಡಿಯೋ ನಿಲಯದಿಂದ ಎಲ್ಲಾ ಶುಕ್ರವಾರ ರಾತ್ರೆ ಎಂಟೂವರೆ ಗಂಟೆಯಿಂದ ಒಂಭತ್ತು ಗಂಟೆಯ ವರೆಗೆ 'ವಾಯ್ಸ್ ಓಫ್ ಇಸ್ಲಾಂ' (ಇಸ್ಲಾಮಿನ ಧ್ವನಿ) ಎಂಬ ಹೆಸರಿನಲ್ಲಿ ಒಂದು ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಈ ಕಾರ್ಯಕ್ರಮವು ಮುಸ್ಲಿಮರಿಂದಲೂ ಮುಸ್ಲಿಮೇತರಿಂದಲೂ ಬಹಳ ಶ್ಲಾಘನೆಯನ್ನು ಗಳಿಸಿದೆ. ("ಟ್ರೂತ್" ನೈಜೀರಿಯಾ. 8—6—79).

## ಸಿರಾಲಿಯೋನಿನಲ್ಲಿ ಸೆಕೆಂಡರಿ ಸ್ಕೂಲ್ ಅಹ್ಮದಿಯಾ ಮಿಶನಿನ ಮೇಲ್ನೋಟಕ್ಕೆ

ಪಶ್ಚಿಮ ಆಫ್ರಿಕದ ಸಿರಾಲಿಯೋನಿನ ಫಲಾಬಾ **(Falaba)** ಪಟ್ಟಣದ ಪೆರಮೌಂಟ್ ಚೀಫ್ ಹಾಗೂ ಪಾರ್ಲಿಮೆಂಟ್ ಸದಸ್ಯರಾದ ಪಿ. ಸಿ. ಮಾಂಗಾಸಲೀಪೋ ಸಮೂರಾ II ಎಂಬವರು ಹೊಸದಾಗಿ ನಿರ್ಮಿಸಲಾದ ಒಂದು ಸೆಕೆಂಡರಿ ಸ್ಕೂಲ್ ಕಟ್ಟಡವನ್ನು ಸಿರಾಲಿಯೋನಿನ

ಅಹ್ಮದಿಯಾ ಮಿಶನಿನ ವಶಕ್ಕೆ ಒಪ್ಪಿಸಿದ್ದಾರೆ. ಈ ಶಾಲೆ ಇದೇ ಸಪ್ಟೆಂಬರ್ ತಿಂಗಳಲ್ಲಿ ಪ್ರಾರಂಭವಾಗಲಿದೆ.

ಈ ಶಾಲೆ ತಮಗೆ ಸಿಗಬೇಕೆಂದು ಸ್ಥಳೀಯ ಆರ್. ಸಿ. ಮಿಶನಿನ ಪಾದರಿಗಳು ಬಹಳ ಪ್ರಯತ್ನಪಟ್ಟಿದ್ದರು. ಆದರೆ ಸನ್ಮಾನ್ಯ ಪೆರಮೌಂಟ್ ಚೀಫ್‌ರವರು ಅದಕ್ಕೊಪ್ಪಲಿಲ್ಲ.

## ತಾಂಜಾನಿಯಾದಲ್ಲಿ

ಪೂರ್ವ ಆಫ್ರಿಕದ ತಾಂಜಾನಿಯಾದಲ್ಲಿ ಇತ್ತೀಚೆಗೆ 120 ಮಂದಿ ಅಹ್ಮದಿಯತ್ತನ್ನು ಸ್ವೀಕರಿಸಿದ್ದಾರೆ. ಅವರ ಪೈಕಿ ಅಧ್ಯಾಪಕರೂ, ಮಸೀದಿ ಇಮಾಮರೂ ಉನ್ನತ ಉದ್ಯೋಗಸ್ಥರೂ ಇದ್ದಾರೆ.

ಮ್‌ಟಾಮಾ (Mtama), ನ್ಯಂಗಾವ್ (Nyangao), ಲೊಲಿಂಡಿ (Lolindi) ಮತ್ತು ಕಿಸ್ಮಾನಿ (Kismani), ಎಂಬಲ್ಲಿ ಹೊಸ ನಾಲ್ಕು ಮಸೀದಿಗಳು ನಿರ್ಮಿಸಲ್ಪಟ್ಟಿವೆ. ನೇವಾಲ (Newala) ಮತ್ತು ಮಹೋಟಾ (Mahota) ಎಂಬಲ್ಲಿ ಎರಡು ಮಸೀದಿಗಳು ನಿರ್ಮಾಣ ಹಂತದಲ್ಲಿವೆ. ಡಿನೆಂಬೊ (Dinembo), ಮ್‌ಪ್ವಾಹಿಯ (Mpwahia), ಮ್‌ಪೊಂಬೆ (Mpombe) ಮತ್ತು ನಚಿಂಗ್‌ವಿಯ (Nachingwea) ಎಂಬಲ್ಲಿ ನಾಲ್ಕು ಹೊಸ ಅಹ್ಮದಿಯಾ ಶಾಖೆಗಳು ರೂಪುಗೊಂಡಿವೆ.

## ಇಂಡೋನೇಷ್ಯಾದಲ್ಲಿ

ಇಂಡೋನೇಷ್ಯಾದ ಆರು ಕಡೆಗಳಲ್ಲಿ ಇತ್ತೀಚೆಗೆ 43 ಮಂದಿ ಅಹ್ಮದಿಯತ್ ಸ್ವೀಕರಿಸಿದ್ದಾರೆಂದು ತಿಳಿದು ಬಂದಿದೆ.

ಚೀಸಾಲ್ದಾ ಎಂಬಲ್ಲಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಜುಮಾ ಮಸೀದಿ ಹಾಗೂ ಬಾಲಿ ದ್ವೀಪದಲ್ಲಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಮಸೀದಿ ಮತ್ತು ಒಂದು ಮಿಶನ್ ಹೌಸ್ ನಿರ್ಮಾಣ ಹಂತದಲ್ಲಿವೆ.

## ಉಗಾಂಡದಲ್ಲಿ ನಿಷೇಧವನ್ನು ರದ್ದುಗೊಳಿಸಲಾಯಿತು

1974ರಲ್ಲಿ ಅಕ್ರಮಿಯಾದ ಇದಿ ಅಮೀನ್ ಸ್ವೇಚ್ಛಾಧಿಕಾರದ ಆಡಳಿತ ಕಾಲದಲ್ಲಿ ಅಹ್ಮದಿ ಮುಸ್ಲಿಮರ ಪ್ರಚಾರವನ್ನು ನಿಷೇಧಿಸಿ, ಅವರ ಮಸೀದಿಗಳನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿ ಅಹ್ಮದಿಯೇತರ ಮುಸ್ಲಿಮರಿಗೆ ಕೈವರ್ತಿಸಿ, ಅಹ್ಮದಿ ಮಿಶನರಿಯನ್ನು ಹೊರದೂಡಲಾಗಿತ್ತು. ಆದರೆ ಕಳೆದ ಎಪ್ರಿಲ್ ತಿಂಗಳಲ್ಲಿ ಅಲ್ಲಿ ನಡೆದ ವಿಪ್ಲವದ ಪರಿಣಾಮವಾಗಿ ಇದಿ ಅಮೀನ್ ಹೊರದೂಡಲ್ಪಟ್ಟು ಆಡಳಿತೆಯಲ್ಲಿ ಮಾರ್ಪಾಟುಗಳಾಗಿವೆ. ಈಗ ಅಲ್ಲಿನ ಹೊಸ ಸರಕಾರ ಎಲ್ಲಾ ಮತಸ್ಥರಿಗೂ ಪ್ರಚಾರ ಸ್ವಾತಂತ್ರ್ಯವನ್ನು ನೀಡಿದೆ. ಆ ಕಾರಣದಿಂದ ಅಹ್ಮದಿಯಾ ಸಂಘಟನೆಗೆ ವಿರುದ್ಧವಾಗಿ ಅಮೀನ್ ಹೇರಿದ ನಿಷೇಧ ರದ್ದುಗೊಳಿಸಿ ಅವರಿಗೆ ಪ್ರಚಾರ ಸ್ವಾತಂತ್ರ್ಯವನ್ನು ನೀಡಲಾಯಿತು. ಅಮೀನ್ ವಶಪಡಿಸಿದ ಮಸೀದಿಗಳನ್ನು ಅಹ್ಮದಿಯರಿಗೆ ಬಿಟ್ಟುಕೊಡಲಾಯಿತು. ಅಲ್ಲಾಹುವಿಗೆ ಸ್ತುತಿ. ಸದ್ಯೋಭವಿಷ್ಯದಲ್ಲೇ ಅಹ್ಮದಿಯಾ ಕೇಂದ್ರದಿಂದ ಉಗಾಂಡಕ್ಕೆ ಮಿಶನರಿಗಳನ್ನು ಕಳುಹಿಸಲಾಗುವುದೆಂದು ಪ್ರತೀಕ್ಷಿಸಲಾಗಿದೆ.

READ

**SATHYADOOTHAN**

MALAYALAM MONTHLY

Single Copy: 0-50 Annual Subscription: Rs 6/-

Write to: The Manger,
Sathyadoothan Monthly, Cannanore-1. (Kerala State)

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ವಜ್ಞಾನ

## (5)

ಲೇಖಕ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

### ಧೈರ್ಯ

'ಶಜಾಅತ್' ಅಥವಾ 'ಧೈರ್ಯ' ಎಂಬ ಗುಣದೊಂದಿಗೆ ಸಾದೃಶ್ಯವುಳ್ಳ ಒಂದು ಶಕ್ತಿವಿಶೇಷ ಮನುಷ್ಯ ಸ್ವಭಾವದಲ್ಲಿ ಅಂತರ್ಭೂತವಾಗಿರುತ್ತದೆ. ಈ ಅಂತಃಶಕ್ತಿಯ ಪ್ರೇರಣೆಯಿಂದಾಗಿ ಶಿಶು ಕೆಲವು ಬಾರಿ ಪ್ರಜ್ವಲಿಸುತ್ತಿರುವ ಬೆಂಕಿಯಲ್ಲಿ ಕೈ ಹಾಕಲು ಉದ್ಯುಕ್ತವಾಗುತ್ತದೆ. ಶಿಶುವಿನ ಈ ಸಹಜಾತ ಶಕ್ತಿ ಪ್ರಬಲಗೊಂಡು, ವಿವೇಚನಾ ಶಕ್ತಿಯ ಅಭಾವದಿಂದ ಅದು ಯಾವುದಕ್ಕೂ ಹೆದರುವುದಿಲ್ಲ. ಈ ಪ್ರಕೃತಿ ಸ್ಥಿತಿಯಲ್ಲಿ ಮನುಷ್ಯನು ವ್ಯಾಘ್ರಾದಿ ಕ್ರೂರ ಪ್ರಾಣಿಗಳೊಡನೆ ಸಹ ನಿರ್ಭಯದಿಂದ ಹೋರಾಡಿ ಶೌರ್ಯವನ್ನು ಪ್ರಕಟಿಸುತ್ತಾನೆ. ಅದೇ ಪ್ರಕಾರ ಅನೇಕರೊಡನೆ ಏಕಾಂಗಿಯಾಗಿ ಹೋರಾಡಲಿಕ್ಕೂ ಅವನು ಸಿದ್ಧನಾಗುತ್ತಾನೆ. ಜನರು ಅವನ ಧೀರತೆಯನ್ನು ಹೊಗಳುತ್ತಾರೆ. ಆದರೆ ಇದು ಕೇವಲ ಒಂದು ಸಹಜ ಗುಣವಾಗಿದೆ. ಕ್ರೂರ ಪ್ರಾಣಿಗಳಲ್ಲೂ ನಾಯಿಗಳಲ್ಲೂ ಸಹ ಕಾಣಲ್ಪಡುವ ಒಂದು ಸ್ವಭಾವವಾಗಿದೆ ಇದು. ಈ ಸಹಜಗುಣವನ್ನು ವಿವೇಚನೆಯ ಪ್ರಕಾಶದಿಂದ ಔಚಿತ್ಯಸಹಿತ ಪ್ರಕಟಿಸುವಾಗ ಅದು ನೈಜವಾದ ಧೈರ್ಯ ಅಥವಾ ಶಜಾಅತ್ ಆಗುತ್ತದೆ. ಹೀಗೆ ಸ್ಥಳ, ಸಂದರ್ಭಗಳ ಔಚಿತ್ಯವನ್ನು ನೋಡಿ ಪ್ರಕಟಗೊಳ್ಳುವ ಧೈರ್ಯ ಉತ್ಕೃಷ್ಟವಾದ ಸದ್ಗುಣಗಳ ಪೈಕಿ ಒಂದಾಗಿದೆ. ಇದರ ಸಂಬಂಧಿಸಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

''ವಸ್ಸಾಬಿರೀನ ಫಿಲ್ ಬಅ್‌ಸಾಇ ವಲ್ಲರ್ರಾಇ ವ ಹೀನಲ್ ಬಅ್‌ಸಿ'' (2:178)–ಕಷ್ಟಕಾಲದಲ್ಲೂ ಆಪತ್ತಿನ ಘಟ್ಟದಲ್ಲೂ ಯುದ್ಧಕಾಲದಲ್ಲೂ ಸಹನೆಯನ್ನು ಕೈಗೊಂಡು ದೃಢ ಮನಸ್ಕರಾಗಿರುವವರೇ ಸಾಕ್ಷಾತ್ ಧೀರರು.

''ವಲ್ಲದೀನ ಸಬರುಬ್ತಿಗಾಅ ವಜ್‌ಹಿ ರಬ್ಬಿಹಿಂ'' (13:23)—ಅವರು (ಆಪತ್ಕಾಲದಲ್ಲೂ ಯುದ್ಧಕಾಲದಲ್ಲೂ) ಸಹನೆ ತೋರಿಸುವುದು ದೇವರ ಸಂತೃಪ್ತಿಗಾಗಿ ಹೊರತು ಶೌರ್ಯವನ್ನು ತೋರ್ಪಡಿಸುವುದಕ್ಕಾಗಿ ಅಲ್ಲ.

''ಅಲ್ಲದೀನ ಕಾಲ ಲಹುಮುನ್ನಾಸು ಇನ್ನನ್ನಾಸ ಕದ್ ಜಮುಊ ಲಕುಂ ಫಖ್‌ಷೌಹುಂ ಫಜಾದಹುಂ ಈಮಾನನ್ ವ ಕಾಲೂ ಹಸ್‌ಬುನಲ್ಲಾಹು ವ ನಿಅ್‌ಮಲ್ ವಕೀಲ್'' (3:174)—ನಿಮಗೆ ವಿರುದ್ಧವಾಗಿ ಜನರು ಸಂಘಟಿಸಿದ್ದಾರೆ. ಆದುದರಿಂದ ನೀವು ಅವರಿಗೆ ಹೆದರಿಕೊಂಡಿರಿ ಎಂಬ ಬೆದರು ಮಾತು ಅವರನ್ನು ತೀರಾ ಭೀತಿಗೊಳಿಸುವುದಿಲ್ಲ. ತದ್ವಿರುದ್ಧವಾಗಿ ಅದು ಅವರ ವಿಶ್ವಾಸವನ್ನು ಬಲಗೊಳಿಸುತ್ತದೆ. 'ನಮಗೆ ದೇವರು ಸಾಕು; ಅವನು ಅತ್ಯುತ್ತಮನಾದ ಸಂರಕ್ಷಕನಾಗಿರುವನು' ಎಂದು ಅವರು ಹೇಳುವರು.

"ವಲಾ ತಕೂನು ಕಲ್ಲದೀನ ಖರಜೂ ಮಿನ್ ದಿಯಾರಿಹಿಂ ಬತರನ್ ವ್ವರಿಅಅನ್ನಾಸಿ" (8:48)—ತಮ್ಮ ಮನೆಗಳಿಂದ ಅಹಂಕಾರೋನ್ಮತ್ತದಿಂದಲೂ ಇತರರು ಕಾಣಬೇಕೆಂಬ ಉದ್ದೇಶದಿಂದಲೂ ಹೊರಟವರಂತೆ ನೀವು ಆಗಬಾರದು.

ಎಂದರೆ ಅವರ ಧೀರತನ ವನ್ಯಮೃಗಗಳಂತೆ ಅಥವಾ ನಾಯಿಗಳಂತೆ ವಿಕಾರ ಪ್ರೇರಿತವಾಗಿ ಒಂದು ದಿಕ್ಕಿಗೆ ಮಾತ್ರ ಪ್ರವಹಿಸುವಂತಹದ್ದಲ್ಲ. ಬದಲಾಗಿ ಅವರು ಎರಡು ಬಗೆಯಲ್ಲೂ ತಮ್ಮ ಶೌರ್ಯವನ್ನು ಪ್ರದರ್ಶಿಸುವರು. ಒಂದು ಕಡೆಯಲ್ಲಿ ಅವರು ಸ್ವತಃಸಿದ್ಧವಾದ ಮನಃಶಕ್ತಿಯಿಂದ ದೈಹಿಕೇಚ್ಛೆಗಳ ವಿರುದ್ಧ ಹೋರಾಡಿ ಅವುಗಳನ್ನು ಸೋಲಿಸಿ,

ಇನ್ನೊಂದು ಕಡೆಯಲ್ಲಿ ಶತ್ರುಗಳ ವಿರುದ್ಧ ಹೋರಾಡುವುದು ಅತ್ಯಾವಶ್ಯಕವೆಂದು ತೋರುವಾಗ, ಉದ್ವೇಗ ಪ್ರೇರಿತರಾಗದೆ, ಸತ್ಯವನ್ನೂ ನೀತಿಯನ್ನೂ ನೆಲೆನಿಲ್ಲಿಸಲಿಕ್ಕಾಗಿ ಮಾತ್ರ ಹೋರಾಡುವವರು. ಹೀಗೆ ಅವರು ಧೈರ್ಯವನ್ನು ಪ್ರದರ್ಶಿಸುವುದು ಸ್ವಶಕ್ತಿಯ ವಿಶ್ವಾಸದಿಂದಲ್ಲ, ದೇವರ ಮೇಲಿನ ಭರವಸೆಯಿಂದ ಮಾತ್ರವಾಗಿದೆ. ನೈಜ ಧೈರ್ಯಶಾಲಿಗಳು ಅನ್ಯರಿಗೆ ತೋರಿಸಲಿಕ್ಕಾಗಿ ಅಹಂಕಾರದಿಂದ ಧೈರ್ಯವನ್ನು ಪ್ರದರ್ಶಿಸಲಾರರು. ಅವರು ಉದ್ವೇಗಕ್ಕೆ ಅಧೀನರಾಗದೆ ಯಾವ ವಿಷಯದಲ್ಲೂ ಪರಮಾತ್ಮನ ಸಂತುಷ್ಟಿಯನ್ನು ಗುರಿಯಾಗಿರಿಸಿಕೊಂಡಿರುತ್ತಾರೆ.

ಮೇಲೆ ಉದ್ಧರಿಸಲಾದ ಖುರ್‌ಆನ್ ವಾಕ್ಯಗಳಿಂದ ತಿಳಿದುಬರುವುದೇನೆಂದರೆ, ಯಥಾರ್ಥವಾದ ಧೈರ್ಯದ ಮೂಲಾಧಾರ ಸಹನಶಕ್ತಿ ಮತ್ತು ಮನೋದಾರ್ಢ್ಯವಾಗಿದೆ. ಶತ್ರುವಿನಂತೆ ಆಕ್ರಮಣ ಮಾಡುವ ದೈಹಿಕೇಚ್ಛೆಗಳನ್ನೂ ವಿಪತ್ತುಗಳನ್ನೂ ಎದುರಿಸುತ್ತಲೂ ಭೀರುತ್ವದಿಂದ ಹಿಂದಕ್ಕೆ ಸರಿಯದಿರುವುದೂ ನೈಜ ಧೀರತೆಯಾಗಿದೆ. ಒಂದು ಹಿಂಸ್ರಪ್ರಾಣಿಯ ಶೌರ್ಯಕ್ಕೂ ಮನುಷ್ಯನ ಧೈರ್ಯಕ್ಕೂ ಅಜಗಜಾಂತರವಿದೆ. ಪ್ರಾಣಿಗಳ ಶೌರ್ಯ ಒಂದು ದಿಕ್ಕನ್ನು ಮಾತ್ರ ಲಕ್ಷ್ಯವಾಗಿಟ್ಟುಕೊಂಡಿರುವ ಕ್ರೋಧಾವೇಶದ ಪ್ರಕಟನೆಯಾಗಿದೆ. ಆದರೆ ಯಥಾರ್ಥ ಧೈರ್ಯವನ್ನು ಹೊಂದಿರುವ ಮನುಷ್ಯನು, ವಿರೋಧಿಸುವುದು ಅಥವಾ ವಿರೋಧಿಸದಿರುವುದು — ಇವೆರಡರಲ್ಲಿ ಗುಣಕರ ಯಾವುದೆಂದು ವಿವೇಚಿಸಿ ಯಥೋಚಿತವಾಗಿ ವರ್ತಿಸುತ್ತಾನೆ.

## ಸತ್ಯಸಂಧತೆ

ಮನುಷ್ಯನ ಸಹಜಗುಣಗಳಲ್ಲಿ ಒಂದು, ಸತ್ಯಸಂಧತೆಯಾಗಿದೆ. ಅವನು ಸ್ವಾರ್ಥಪರವಾದ ಯಾವುದಾದರೂ ಪ್ರೇರಣೆಯಿಲ್ಲದಿದ್ದರೆ ಸುಳ್ಳು ಹೇಳಲು ಇಚ್ಛಿಸುವುದಿಲ್ಲ. ಸುಳ್ಳು ಹೇಳುವುದನ್ನು ಅವನು ಸ್ವಾಭಾವಿಕವಾಗಿ ವಿರೋಧಿಸುತ್ತಾನೆ. ಆದ್ದರಿಂದಲೇ ಸುಳ್ಳು ಹೇಳುವವನನ್ನು ಅವನು ತಿರಸ್ಕಾರಭಾವದಿಂದ ನೋಡುತ್ತಾನೆ. ಆದರೆ ಈ ಸಹಜ ಸ್ವಭಾವದ ರೂಪವನ್ನು ಒಂದು ಸದ್ಗುಣವೆಂದು ಪರಿಗಣಿಸಲಾಗದು. ಏಕೆಂದರೆ ಈ ಸ್ಥಿತಿಯನ್ನು ಶಿಶುಗಳಲ್ಲಿಯೂ ಹುಚ್ಚರಲ್ಲಿಯೂ ಕಾಣಬಹುದಾಗಿದೆ. ಸತ್ಯನಿಷ್ಠೆಗೆ ಭಂಗವನ್ನುಂಟುಮಾಡುವ ಸ್ವಾರ್ಥಪರವಾದ ಉದ್ದೇಶಗಳಿಂದ ಬೇರ್ಪಟ್ಟಿರದ ಕಾಲದ ವರೆಗೆ ಮನುಷ್ಯನಿಗೆ ಯಥಾರ್ಥದಲ್ಲಿ ಸತ್ಯಸಂಧನಾಗಿರಲಿಕ್ಕೆ ಸಾಧ್ಯವಿಲ್ಲ. ಅವನು ತನಗೆ ಹಾನಿಯಿಲ್ಲದ ಸಂಗತಿಗಳ ಸಂಬಂಧಿಸಿ ಸತ್ಯ ನುಡಿದು, ತನ್ನ ಅಭಿಮಾನಕ್ಕೋ ಸಂಪತ್ತಿಗೋ ಜೀವಕ್ಕೋ ಹಾನಿಯುಂಟಾಗುವುದೆಂದು ತೋರುವ ಸಂದರ್ಭದಲ್ಲಿ ಸುಳ್ಳು ಹೇಳುವುದಾದರೆ ಅಥವಾ ಸತ್ಯ ನುಡಿಯದೆ ಮೌನವನ್ನವಲಂಬಿಸುವುದಾದರೆ, ಅವನಿಗೆ ಒಂದು ಶಿಶುವಿಗಿಂತ, ಒಬ್ಬ ಹುಚ್ಚನಿಗಿಂತ ಯಾವುದೇ ಶ್ರೇಷ್ಠತೆ ಇಲ್ಲ. ಹತಬುದ್ಧಿಯ ಹುಚ್ಚನೂ ವಿವೇಕಬುದ್ಧಿ ಪಕ್ವವಾಗದ ಶಿಶುವೂ ಈ ರೀತಿಯಲ್ಲಿ ಸತ್ಯವನ್ನು ಹೇಳುತ್ತಾರಷ್ಟೆ. ಬಾಹ್ಯವಾದ ಯಾವ ಪ್ರೇರಣೆಯೂ ಇಲ್ಲದೆ ಸುಮ್ಮಗೆ ಸುಳ್ಳು ಹೇಳುವ ಯಾರನ್ನೂ ಕಾಣಲು ಸಾಧ್ಯವಿಲ್ಲ. ಆಪತ್ತು ಉಂಟಾದೀತು ಎಂದು ತೋರುವ ಘಟ್ಟದಲ್ಲಿ ಸತ್ಯನಿಷ್ಠೆಯನ್ನು ತ್ಯಜಿಸುವುದು ಯಥಾರ್ಥ ಸದ್ಗುಣಕ್ಕೆ ವಿರುದ್ಧವಾಗಿದೆ. ತನ್ನ ಜೀವ, ಸಂಪತ್ತು ಅಥವಾ ಅಭಿಮಾನ ಸಂಧಿಗ್ಧಘಟ್ಟದಲ್ಲಿರುವಾಗ ಸತ್ಯನಿಷ್ಠೆ ತೋರುವ ಅತ್ಯಂತ ಘನವತ್ತಾದ ಸಂದರ್ಭವಾಗಿದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ನೀಡುವ ಪಾಠ ಇದಾಗಿದೆ:

“ಫಜ್ತನಿಬುರ್ರಿಜ್ಸ ಮಿನಲ್‌ಔಸಾನಿ ವಜ್ತನಿಬೂ ಕೌಲಜ್ಜೂರಿ” (22:31) — ವಿಗ್ರಹಾರಾಧನೆಯನ್ನೂ ಮಿಥ್ಯಾನುಡಿಗಳನ್ನೂ ವರ್ಜಿಸಿರಿ. ಎಂದರೆ, ಅಸತ್ಯ ನುಡಿ ಒಂದು ರೀತಿಯ ವಿಗ್ರಹವಾಗಿದೆ. ಅದನ್ನು ಆಶ್ರಯಿಸಿಕೊಂಡಿರುವವರು ಪರಮಾತ್ಮನ ಆಶ್ರಯವನ್ನು ಕೈಬಿಡಬೇಕಾಗುತ್ತದೆ. ಅದೇ ಪ್ರಕಾರ ಅಸತ್ಯ ವಚನದ ಹೇತುವಾಗಿ ಅವರನ್ನು ಪರಮಾತ್ಮನು ಕೈಬಿಡುತ್ತಾನೆ.

“ವಲಾ ತಅ್‌ಬ ಶ್ಯುಹದಾವು ಇದಾ ಮಾ ದುಊ” ........ “ವಲಾ ತಕ್ತುಮು ಶ್ಯಹಾದತ ವಮನ್‌ಯ್ಯಕ್ತುಂಹಾ ಫಇನ್ನಹೂ ಇಸ್ಮುನ್ ಕಲ್ಬುಹೂ” (2: 283, 284) — ಸಾಕ್ಷಿದಾರರು ಸಾಕ್ಷ್ಯನುಡಿಯಲು ಕರೆಯಲ್ಪಟ್ಟಾಗ ವಿಸಮ್ಮತಿಸಬಾರದು... ಸತ್ಯವಾದ ಸಾಕ್ಷ್ಯವನ್ನು ಗುಪ್ತವಾಗಿರಿಸಬೇಡಿರಿ; ಅದನ್ನು ಯಾವನು ಗೋಪ್ಯವಾಗಿರಿಸುವನೋ, ಅವನ ಹೃದಯ ಪಾಪದಿಂದ ಕೂಡಿರುತ್ತದೆ.

“ವ ಇದಾ ಕುಲ್ತುಂ ಫಅ್‌ದಿಲೂ ವಲೌಕಾನ ಜಾಕುರ್ಬಾ” (6:153)— ಮಾತನಾಡುವಾಗ ನೀವು ಸತ್ಯ ಹಾಗೂ ನ್ಯಾಯದಿಂದ ಮಾತನಾಡಿರಿ. ನಿಮ್ಮ ಬಂಧುಗಳಿಗೆ ವಿರುದ್ಧವಾಗಿ ಹೇಳಬೇಕಾದರೂ ಸರಿ.

"ಕೂನೂ ಕವ್ವಾಮೀನ ಬಿಲ್‌ಕಿಸ್ತಿ ಶುಹದಾಅ ಲಿಲ್ಲಾಹಿ ವಲೌ ಅನ್‌ಫುಸಿಕುಂ ಅವಿಲ್ ವಾಲಿದೈನಿ ವಲ್ ಅಕ್ರಬೀನ" (4:136)— ನೀವು ಸತ್ಯ ಮತ್ತು ನ್ಯಾಯ ವನ್ನು ಬಿಗಿಯಾಗಿ ಹಿಡಿಯಿರಿ; ನಿಮ್ಮ ಸಾಕ್ಷ್ಯ ದೇವರಿಗಾಗಿರಲಿ. ಸತ್ಯ ಹೇಳುವ ಮೂಲಕ ನಿಮಗೆ ಜೀವಹಾನಿ ಉಂಟಾಗುವುದಾದರೂ ಅಥವಾ ನಿಮ್ಮ ಮಾತಾಪಿತರಿಗೆ ಕೇಡು ಉಂಟಾಗುವುದಾದರೂ ಅಥವಾ ಮಕ್ಕಳು ಮುಂತಾದ ನಿಕಟ ಬಂಧುಗಳಿಗೆ ನಷ್ಟ ಉಂಟಾಗುವುದಾದರೂ ಸುಳ್ಳು ನುಡಿಯಬಾರದು.

"ವಲಾ ಯಜ್ರಿಮನ್ನಕುಂ ಷನಆನು ಕೌಮಿನ್ ಅಲಾ ಅಲ್ಲಾ ತಅ್‌ದಿಲೂ" (5:9)— ಯಾವುದಾದರೂ ಜನತೆಯ ವಿರೋಧವು ನಿಮ್ಮನ್ನು ಸತ್ಯವಿರುದ್ಧವಾಗಿ ವರ್ತಿಸುವರೆ ಪ್ರೇರೇಪಿಸದಿರಲಿ.

"ವಸ್ಸಾದಿಕೀನ ವಸ್ಸಾದಿಕಾತಿ..." (35:36) — ಸತ್ಯವಂತರಿಗೂ ಸತ್ಯವತಿಯರಿಗೂ ಮಹತ್ತಾದ ಪ್ರತಿಫಲ ಲಭಿಸುವುದು.

"ವತವಾಸೌ ಬಿಲ್‌ಹಕ್ಕಿ ವತವಾಸೌ ಬಿಸ್ಸಬ್ರಿ" (103:4)—ಅವರು ಸತ್ಯ ಹಾಗೂ ಸಹನೆಯ ಕುರಿತು ಅನ್ಯರಿಗೆ ಉಪದೇಶಿಸುತ್ತಾರೆ.

"ಲಾ ಯಷ್‌ಹದೂನಜ್ಜೂರ" (25:73) — ಅವರು ಅಸತ್ಯವಂತರ ಮಧ್ಯದಲ್ಲಿ ಕುಳಿತುಕೊಳ್ಳುವುದಿಲ್ಲ.

### ಸಹನೆ

ಮನುಷ್ಯನ ಸಹಜಗುಣಗಳ ಪೈಕಿ ಇನ್ನೊಂದು ಗುಣವು 'ಸಬರ್' ಅಥವಾ ಸಹನೆಯಾಗಿದೆ. ಪ್ರತಿಯೊಬ್ಬನು ತನ್ನ ಜೀವನಯಾತ್ರೆಯಲ್ಲಿ ಎದುರಾಗುವ ಆಪತ್ತುಗಳನ್ನೂ ರೋಗಪೀಡನೆಗಳನ್ನೂ ದುಃಖಗಳನ್ನೂ ಸಹಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಅವನು ಬೇಸರಗೊಳ್ಳುತ್ತಲೂ ಖಿನ್ನನಾಗಿಯೂ ಕೊನೆಗೆ ಸಹನೆಯನ್ನು ಕೈಗೊಂಡು ಶಾಂತಮನಸ್ಕನಾಗುತ್ತಾನೆ. ಆದರೆ ಈ ತರದ ಸಹನೆಯನ್ನು ಪವಿತ್ರ ಗ್ರಂಥವಾದ ಖುರ್‌ಆನ್ ಉತ್ಕೃಷ್ಟ ಸ್ವಭಾವವೆಂದು ಪರಿಗಣಿಸುವುದಿಲ್ಲ. ಬದಲಾಗಿ, ಅದು ದಣಿದ ಫಲವಾಗಿ ತನ್ನಷ್ಟಕ್ಕೆ ಉಂಟಾಗುವ ಒಂದು ಅವಸ್ಥೆಯೆಂದು ಅದು ತಿಳಿಸಿಕೊಡುತ್ತದೆ. ಆಪತ್ತು ಬಂದೊದಗಿದಾಗ ಮನನೊಂದು ಅಳುವುದು, ತಲೆಹೊಡೆದುಕೊಳ್ಳುವುದು, ಆ ದುಃಖಾತಿರೇಖ ಉಚ್ಛಮಟ್ಟಕ್ಕೆ ತಲಪಿದ ನಂತರ ತನ್ನಷ್ಟಕ್ಕೆ ಕೆಳಗಿಳಿದು ಶಾಂತಗೊಳ್ಳುವುದು ಮನುಷ್ಯ ಪ್ರಕೃತಿಯಾಗಿದೆ. ಈ ಎರಡು ಸ್ಥಿತಿಗಳು ವಿಕಾರಪ್ರೇರಿತ ಶಾರೀರಿಕಾವಸ್ಥೆಗಳಾದುದರಿಂದ ಅವುಗಳಿಗೆ ಸದ್ಗುಣದೊಂದಿಗೆ ಯಾವುದೇ ಬಂಧವಿಲ್ಲ. ಆದರೆ, ಒಬ್ಬನು ತನ್ನ ಯಾವುದಾದರೂ ವಸ್ತು ನಷ್ಟಪಡುವುದಾದರೆ, ಅದು ಪರಮಾತ್ಮನು ತನಗೆ ನೀಡಿದ ವಿಶ್ವಸ್ತ ವಸ್ತುವೆಂದು ಭಾವಿಸಿ ಆಲಾಪಿಸದೆ, ಪರಮಾತ್ಮನು ಅದನ್ನು ಹಿಂದಕ್ಕೆ ಪಡೆದುದರಿಂದ ಅವನ ಅಭೀಷ್ಟೆಗೆ ತಾನು ಶಿರಬಾಗುವೆನೆಂದು ಹೇಳಿ ಸಮಾಧಾನಪಟ್ಟುಗೊಳ್ಳುವುದು ನೈತಿಕಗುಣಗಳಲ್ಲಿ ಒಳಪಡುವ ಸಹನೆಯಾಗಿದೆ. ಈ ಸದ್ಗುಣದ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಉಪದೇಶ ಇದಾಗಿದೆ:

"ವ ಲನಬ್ಲುವನ್ನಕುಂ ಬಿಷೈಇನ್‌ಮ್ಮಿನಲ್ ಖೌಫಿ ವಲ್‌ಜೂಇ ವ ನಕ್ಸಿನ್ ಮ್ಮಿನಲ್ ಅಮ್ವಾಲಿ ವಲ್ ಅನ್‌ಫುಸಿ ವಸ್ಸಮರಾತಿ ವ ಬಶ್ಶಿರಿಸ್ಸಾಬಿರೀನಲ್ಲದೀನ ಇದಾ ಅಸಾಬತ್‌ಹುಂ ಮುಸೀಬತುನ್ ಕಾಲೂ ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್. ಉಲಾಇಕ ಅಲೈಹಿಂ ಸಲವಾತುನ್ ಮ್ಮಿನ್‌ರ್ರಬ್ಬಿಹಿಂ ವ ರಹ್ಮತುನ್ ವ ಉಲಾಇಕ ಹುಮುಲ್ ಮುಹ್ತದೂನ್" (2:156–158) — ಸತ್ಯವಿಶ್ವಾಸಿಗಳೇ, ನಾವು ನಿಮ್ಮನ್ನು ಭಯಂಕರ ಅನುಭವಗಳಿಂದಲೂ ಹಸಿವು ಮತ್ತು ದಾರಿದ್ರ್ಯದ ಮೂಲಕವಾಗಿಯೂ ಧನನಾಶದಿಂದಲೂ ಜೀವಾಪಾಯದಿಂದಲೂ ಪರಿಶ್ರಮದ ವಿಫಲತೆಯಿಂದಲೂ ಉದ್ದಿಷ್ಟಕಾರ್ಯಗಳು ಸಿದ್ಧಿಸಲಾರದೆಯೂ ಸಂತಾನ ನಷ್ಟದಿಂದಲೂ ಪರೀಕ್ಷಣೆಗೊಳಪಡಿಸುವೆವು. ಆಪತ್ತು ಬಂದೊದಗಿದ ಸಂದರ್ಭಗಳಲ್ಲಿ, 'ನಾವು ದೇವರ ಅಧೀನರಾಗಿದ್ದೇವೆ; ಅವನ ಬಳಿಗೆ ಹಿಂತೆರಳುವವರಾಗಿದ್ದೇವೆ' ಎಂದು ಹೇಳುವ ಸಹನಾಶೀಲರಿಗೆ ಶುಭವಾರ್ತೆಯನ್ನು ಅರುಹು. ಇವರೊಡನೆ ಅಲ್ಲಾಹುವಿನ ಅನುಗ್ರಹ ಮತ್ತು ಕಾರುಣ್ಯವಿದೆ; ದೇವರ ಮಾರ್ಗವನ್ನು ಪಡೆದವರು ಇವರೇ ಆಗಿದ್ದಾರೆ.

ಸಂಕ್ಷಿಪ್ತವಾಗಿ ಈ ರೀತಿಯ ಸ್ವಭಾವಕ್ಕೆ ಸಹನೆಶೀಲತೆಯೆಂದು ಹೇಳುತ್ತಾರೆ. ಇದನ್ನೇ ದೈವೇಚ್ಛೆಗೆ ವಿಧೇಯನಾಗುವುದೆಂದು ಹೇಳುವುದು. ಇನ್ನೊಂದು ರೀತಿಯಲ್ಲಿ ಈ ಸದ್ಗುಣವನ್ನು ನೀತಿ ಧರ್ಮ ಎಂದು ಸಹ ಹೇಳಬಹುದು. ಮನುಷ್ಯನ ಜೀವಿತಕಾಲವೆಲ್ಲಾ ಹಿತಕಾರ್ಯವನ್ನು ಮಾಡಿಕೊಟ್ಟು ಅವನ ಇಷ್ಟಪ್ರಕಾರ ಸಹಸ್ರಾರು ಕಾರ್ಯಗಳನ್ನು ಪ್ರಕಟಪಡಿಸಿ ಅವನಿಗೆ ಲೆಕ್ಕ ಮಾಡಲು ಅಸಾಧ್ಯವಾದಷ್ಟು ಅನುಗ್ರಹಗಳನ್ನು ನೀಡಿ

ರುವ ಸರ್ವಾಧಿನಾಥನಾದ ಪರಮಾತ್ಮನು ತನ್ನ ಇಷ್ಟವನ್ನು ಅನುಸರಿಸುವಂತೆ ಮಾಡಲು ಇಚ್ಛಿಸುವಾಗ ಮನುಷ್ಯನು ವಿಮುಖನಾಗಿ ದೈವೇಚ್ಛೆಗೆ ವಿಧೇಯನಾಗದೆ ಗೊಣಗುಟ್ಟುತ್ತಾ ವಿಸಮ್ಮತಿಯನ್ನು ತೋರಿಸಿ ಮಾರ್ಗಭ್ರಂಶನಾಗಲು ತೊಡಗುವುದು ನೀತಿಗೆ ವಿರುದ್ಧವಾಗಿದೆ.

### ಸಹಾನುಭೂತಿ

ಮನುಷ್ಯ ಸ್ವಭಾವದಲ್ಲಿ ಅವಿಭಾಜ್ಯವೆಂಬಂತೆ ಅಂತರ್ಲೀನವಾಗಿರುವ ಮತ್ತೊಂದು ಗುಣ ಸಮಸೃಷ್ಟಿಗಳೊಡನೆ ಸಹತಾಪ ಅಥವಾ ಸಹಾನುಭೂತಿಯಾಗಿದೆ. ಸ್ವಜಾತಿ ಸ್ನೇಹವೆಂಬ ಮನೋಭಾವನೆ ಸಹಜವಾಗಿಯೇ ಸರ್ವ ಜಾತಿಮತಸ್ಥರಲ್ಲೂ ಕಾಣಬಹುದು. ಸಹಜಪ್ರೇರಣೆಗೊಳಗಾಗಿ, ಅಧಿಕಾಂಶ ಜನರು ತಮ್ಮ ಜಾತಿಗೆ ಅಥವಾ ಜನಾಂಗಕ್ಕೆ ಸಹಾಯಮಾಡಲಿಕ್ಕಾಗಿ ಇತರ ಜಾತಿಯವರೊಡನೆ, ಅವರನ್ನು ಮನುಷ್ಯಜಾತಿಯೆಂದು ಸಹ ಭಾವಿಸದೆ, ಅನ್ಯಾಯ ಮತ್ತು ಅನೀತಿಯಿಂದ ವರ್ತಿಸುತ್ತಾರೆ. ಈ ಸ್ವಭಾವವನ್ನು ಒಂದು ಸದ್ಗುಣವೆಂದು ಪರಿಗಣಿಸಲಾಗದು. ಬದಲಾಗಿ, ಅದು ಕೇವಲ ಒಂದು ಪ್ರಕೃತಿಸಿದ್ಧ ಸ್ವಭಾವವಾಗಿದೆ. ಈ ಸ್ವಭಾವವನ್ನು ಕಾಗೆ ಮೊದಲಾದ ಪಕ್ಷಿಗಳಲ್ಲಿಯೂ ಕಾಣಬಹುದಾಗಿದೆ. ಒಂದು ಕಾಗೆ ಸತ್ತರೆ ಸಾವಿರಾರು ಕಾಗೆಗಳು ಬಂದುಸೇರುತ್ತವೆ. ಮನುಷ್ಯನು ತನ್ನ ಈ ಸ್ವಭಾವವನ್ನು ನೀತಿ ಮತ್ತು ನ್ಯಾಯಕ್ಕೆ ಅನುಗುಣವಾಗಿ, ಸಂದರ್ಭೋಚಿತವಾಗಿ ಪ್ರದರ್ಶಿಸುವಾಗ ಮಾತ್ರ ಅದು ಸದ್ಗುಣವೆಂದು ಪರಿಗಣಿಸಲ್ಪಡುತ್ತದೆ. ಈ ಮಹತ್ತಾದ ಸಹಾನುಭೂತಿ ಎಂಬ ಸದ್ಗುಣವನ್ನು ಅರಬಿ ಭಾಷೆಯಲ್ಲಿ 'ಮುವಾಸಾತ್' ಎಂದೂ ಫಾರ್ಸಿಭಾಷೆಯಲ್ಲಿ 'ಹಮ್‌ದರ್ದಿ' ಎಂದೂ ಹೇಳುತ್ತಾರೆ. ಈ ವಿಷಯದಲ್ಲಿ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ತಆವನೂ ಅಲಲ್‌ಬಿರ್ರಿ ವತ್ತಕ್ವಾ ವಲಾ ತಆವನೂ ಅಲಲ್ ಇಸ್ಮಿ ವಲ್ ಉದ್‌ವಾನ್" (5:3)— ನೀವು ನಿಮ್ಮ ಜನತೆಗೆ ತೋರಿಸುವ ಸಹತಾಪ ಮತ್ತು ನೀಡುವ ಸಹಾಯ ನ್ಯಾಯಯುತವೂ ನೀತಿಯುತವೂ ಆಗಿರಲಿ; ದುಷ್ಕರ್ಮ ಮತ್ತು ಅಕ್ರಮಗಳಲ್ಲಿ ನೀವು ಅವರಿಗೆ ನೆರವಾಗದಿರಿ.

"ವಲಾ ತಹಿನೂ ಫಿಬ್ತಿಗಾಇಲ್ ಕೌಮ್... ವಲಾ ತಕುನ್ ಲಿಲ್‌ಖಾಇನೀನ ಖಸೀಮಾ... ವಲಾ ತುಜಾದಿಲ್ ಅನಿಲ್ಲದೀನ ಯಖ್‌ತಾನೂನ ಅನ್‌ಫುಸಹುಂ ಇನ್ನಲ್ಲಾಹ ಲಾ ಯುಹಿಬ್ಬು ಮನ್ ಕಾನ ಖವ್ವಾನನ್ ಅಸೀಮಾ" (4:105, 106, 108)— ನಿಮ್ಮ ಸಮುದಾಯದೊಡನೆ ಸಹತಾಪ ತೋರಿಸುವುದರಲ್ಲಿ ಉದಾಸೀನರಾಗದಿರಿ...... ಮೋಸಗಾರರ ಪಕ್ಷವನ್ನು ವಹಿಸಿ ತರ್ಕಿಸಬೇಡಿರಿ... ಅನ್ಯೋನ್ಯ ವಿಶ್ವಾಸವಂಚನೆ ಮಾಡುವವರ ಪರವಾಗಿ ವಾದಿಸಬೇಡಿರಿ; ಖಂಡಿತವಾಗಿಯೂ ದೇವರು ವಂಚಕರನ್ನೂ ಪಾಪಿಗಳನ್ನೂ ಪ್ರೀತಿಸುವುದಿಲ್ಲ.

### ದೇವರ ಅಸ್ತಿತ್ವದ ಅನ್ವೇಷಣೆ

ಮನುಷ್ಯಪ್ರಕೃತಿಯಲ್ಲಿ ಲೀನವಾಗಿರುವ ಮತ್ತೊಂದು ಗುಣ ಸರ್ವಶಕ್ತವಾದ ಒಂದು ಸತ್ತೆಯ ಕುರಿತಾದ ಅನ್ವೇಷಣೆಯಾಗಿದೆ. ಆ ಪರಮಾರ್ಥ ಶಕ್ತಿಯ ಕಡೆಗೆ ಮನುಷ್ಯನನ್ನು ಪ್ರೇರೇಪಿಸುವ ಒಂದು ಆಕರ್ಷಣಶಕ್ತಿ ಹೃದಯಾಂತರಾಳದಲ್ಲಿ ನಿಕ್ಷಿಪ್ತವಾಗಿರುತ್ತದೆ. ಈ ಆಕರ್ಷಣೆ ಅಥವಾ ಅನ್ವೇಷಣ ಬುದ್ಧಿಯ ಕುರುಹು ಶಿಶುವಿನಲ್ಲಿ ಅದರ ಜನನದೊಂದಿಗೆಯೇ ತೋರಿಬರುತ್ತದೆ. ಜನಿಸಿದ ಕೂಡಲೇ ಮಗು ಅದರ ಜನ್ಮಸಿದ್ಧ ಗುಣದಿಂದ ಪ್ರೇರಿತವಾಗಿ ತಾಯಿಯ ಕಡೆಗೆ ತಿರುಗುತ್ತದೆ. ನೈಸರ್ಗಿಕವಾಗಿ ಅದಕ್ಕೆ ತಾಯಿಯೊಡನೆ ವಿಶಿಷ್ಟ ರೀತಿಯ ಪ್ರೀತಿಯಿರುವುದಾಗಿ ಕಾಣಬಹುದು. ಅದರ ಜ್ಞಾನೇಂದ್ರಿಯಗಳು ವಿಕಾಸಗೊಂಡಂತೆಯೇ ಈ ಸಹಜಗುಣವು ಪೂರ್ವಾಧಿಕ ಪ್ರಕಾಶಗೊಳ್ಳುತ್ತದೆ. ಕೊನೆಗೆ, ಅಂತರ್ಲೀನವಾಗಿರುವ ಈ ಸ್ನೇಹಶಕ್ತಿ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತದೆ. ಆಗ ತನ್ನ ತಾಯಿಯ ಮಡಿಲಲ್ಲಿ ಹೊರತು ಬೇರೆಲ್ಲೂ ಶಿಶು ಸ್ವಸ್ಥವಾಗಿರುವುದಿಲ್ಲ. ಮಾತೆಯ ಸ್ನೇಹಭರಿತ ಲಾಲನೆ ಪಾಲನೆಯಲ್ಲಿ ಅದು ಪೂರ್ಣವಾದ ಸುಖವನ್ನು ಪಡೆಯುತ್ತದೆ. ತಾಯಿಯಿಂದ ಬೇರ್ಪಡಿಸುವುದಾದರೆ ಅದರ ಸುಖ ಸಂತೋಷಗಳೆಲ್ಲಾ ಸಂತಾಪಗಳಾಗಿ ಮಾರ್ಪಡುತ್ತವೆ. ಯಾವ ರೀತಿಯಲ್ಲಿ ಸಾಂತ್ವನಪಡಿಸಿದರೂ ಮಗುವಿನ ಈ ದುಃಖ ನಿವಾರಿಸಲ್ಪಡುವುದಿಲ್ಲ. ತಾಯಿಯ ಮಡಿಲಿನ ವಿನಹ ಅದಕ್ಕೆ ನಿಜವಾದ ನೆಮ್ಮದಿ ಸಿಗುವುದಿಲ್ಲ. ಈ ರೀತಿಯಲ್ಲಿ ಶಿಶುವನ್ನು ತಾಯಿಯ ಸಮೀಪಕ್ಕೆ ಎಳೆದು ಕೊಂಡು ಹೋಗುವ ಆಕರ್ಷಣ ಶಕ್ತಿ ಏನಾಗಿರಬಹುದು? ಅದು ಯಥಾರ್ಥ ಭಕ್ತಿ ಮತ್ತು ಆರಾಧನೆಗೆ ಅರ್ಹನಾದ ಸೃಷ್ಟಿಕರ್ತನ ಕಡೆಗೆ ಮನುಷ್ಯನನ್ನು ತಿರುಗಿಸಲಿಕ್ಕಾಗಿ ಶಿಶುಪ್ರಕೃತಿಯಲ್ಲಿ ನಿಕ್ಷಿಪ್ತವಾಗಿರುವ ಸ್ನೇಹಶಕ್ತಿಯಲ್ಲದೆ ಬೇರೇನೂ ಅಲ್ಲ.

ಮನುಷ್ಯನು ಬಾಹ್ಯವಸ್ತುಗಳಲ್ಲಿ ಸ್ನೇಹಬಂಧವನ್ನು ತೋರ್ಪಡಿಸುವಾಗಲೆಲ್ಲಾ ಈ ಆಕರ್ಷಣ ಶಕ್ತಿಯೇ ಅವನಲ್ಲಿ ಪ್ರವರ್ತಿಸುತ್ತದೆ. ಅವನು ಯಾವುದೇ ವಸ್ತುವಿನ ಮೇಲೆ ಪ್ರೀತಿಯನ್ನು ತೋರಿಸುವುದಾದರೂ ಈ ಆಕರ್ಷಣ ಶಕ್ತಿಯೇ ಪ್ರತಿಫಲಿಸುತ್ತದೆ. ಹೀಗೆ ಅವನು ಬಾಹ್ಯವಸ್ತುಗಳಲ್ಲಿ ಪ್ರೀತಿ ತೋರಿಸುವುದು ಪರಮಾರ್ಥವಾದ ಲಕ್ಷ್ಯ ವಸ್ತುವನ್ನು ಹುಡುಕುವ ಆ ಸ್ವಾಭಾವಿಕ ಪ್ರಜ್ಞೆಯಿಂದ ಪ್ರೇರಿತವಾಗಿಯೆಂದು ಹೇಳಬಹುದು. ಕಳೆದು ಹೋದ ಹಾಗೂ ಹೆಸರು ಕೂಡ ಮರೆತು ಹೋದ ಒಂದು ವಸ್ತುವನ್ನು ಓರ್ವನು ತನ್ನ ದೃಷ್ಟಿಗೆ ಬೀಳುವ ಪ್ರತಿಯೊಂದು ವಸ್ತುವಿನಲ್ಲೂ ಹುಡುಕುವಂತೆ ಮನುಷ್ಯನು ಬಾಹ್ಯವಸ್ತುಗಳಲ್ಲೆಲ್ಲಾ ತನ್ನ ಲಕ್ಷ್ಯವಸ್ತುವನ್ನು ಹುಡುಕಾಡುತ್ತಾನೆ. ಅವನಿಗೆ ಧನ, ಸಂತಾನ ಮತ್ತು ಪತ್ನಿಯ ಮೇಲಿನ ಸ್ನೇಹವೂ ಮಧುರ ಗಾನದ ಮೇಲಿರುವ ಅಭಿರುಚಿಯೂ ಎಲ್ಲಾ ಅಜ್ಞಾತವಾದ ಆ ಪ್ರೇಮಲಕ್ಷ್ಯಕ್ಕೆ ಸಂಬಂಧಿಸಿದ ಅನ್ವೇಷಣೆಯನ್ನು ಸೂಚಿಸುತ್ತದೆ. ಸರ್ವವಸ್ತುಗಳಲ್ಲೂ, ಶಾಖದಂತೆ, ಪರೋಕ್ಷವಾಗಿ ಅಸ್ತಿತ್ವದಲ್ಲಿರುವ ಅತ್ಯಂತ ಸೂಕ್ಷ್ಮ ಹಾಗೂ ನಿಗೂಢವಾಗಿರುವ ಆ ಸರ್ವಾತ್ಮಕ ಶಕ್ತಿಯನ್ನು ಮನುಷ್ಯನ ಬಾಹ್ಯ ದೃಷ್ಟಿಗೆ ಕಾಣಲಿಕ್ಕೋ ಅಪೂರ್ಣವಾದ ಬುದ್ಧಿಶಕ್ತಿಗೆ ಅರಿಯಲಿಕ್ಕೋ ಸಾಧ್ಯವಿಲ್ಲ. ಆದುದರಿಂದ ಆ ಅವ್ಯಕ್ತ ಶಕ್ತಿಯನ್ನು ಗುರುತಿಸುವ ವಿಷಯದಲ್ಲಿ ಮನುಷ್ಯನಿಂದ ಅನೇಕ ಮಹಾ ತಪ್ಪುಗಳುಂಟಾಗಿವೆ. ಈ ಅಬದ್ಧತೆಗಳಿಂದ, ನಿರಾಕಾರನಾದ ಸೃಷ್ಟಿಕರ್ತನಿಗೆ ಮಾತ್ರ ಸಲ್ಲಬೇಕಾದ ಭಕ್ತಿಭಾವಗಳು ಅವನ ಸೃಷ್ಟಿಗಳಿಗೆ ಅರ್ಪಿಸಲ್ಪಟ್ಟವು. ಈ ಪ್ರಮಾದವನ್ನು ಪವಿತ್ರ ಖುರ್‌ಆನ್ ದೃಷ್ಟಾಂತ ರೂಪದಲ್ಲಿ ಚಲೋದಾಗಿ ವಿವರಿಸಿದೆ. ಅದು ಈ ಪ್ರಪಂಚವನ್ನು ಕೆಳಭಾಗದಲ್ಲಿ ಶುದ್ಧವಾದ ಕನ್ನಡಿಯನ್ನು ಹಾಸಿದ ಹಾಗೂ ಅದರ ಅಡಿಭಾಗದಲ್ಲಿ ತೀವ್ರವಾಗಿ ಪ್ರವಹಿಸುತ್ತಿರುವ ಒಂದು ಗಾಜಿನ ಭವನಕ್ಕೆ ಹೋಲಿಸಿದೆ. ಹಾಸಿದ ಪಾರದರ್ಶಕ ಕನ್ನಡಿಯ ಮೇಲೆ ಬಿದ್ದ ದೃಷ್ಟಿ ಅದನ್ನೇ ನೀರೆಂದು ಭ್ರಮಿಸಿ, ಮನುಷ್ಯನು ನೀರಿನಲ್ಲಿ ನಡೆಯಲು ಹೆದರುವಂತೆ ಈ ಕನ್ನಡಿಯ ಮೇಲೆ ನಡೆಯಲು ಹೆದರುತ್ತಾನೆ. ವಸ್ತುತಃ ಅದು ಕೆಳಭಾಗದಲ್ಲಿರುವ ಜಲವನ್ನು ತೋರಿಸುವ ಸ್ವಚ್ಛ ಪಾರದರ್ಶಕ ಕನ್ನಡಿ ಮಾತ್ರವಾಗಿದೆ. ಇದೇ ಪ್ರಕಾರ, ಆಕಾಶದಲ್ಲಿ ನಾವು ಕಾಣುವ ಸೂರ್ಯ, ಚಂದ್ರಾದಿಗಳು ಅವುಗಳ ಹಿಂದೆ ಪ್ರವರ್ತಿಸುತ್ತಿರುವ ಆ ಸರ್ವೋತ್ಕೃಷ್ಟ ಶಕ್ತಿಯ ಇರುವಿಕೆಯನ್ನು ಸ್ಪಷ್ಟಪಡಿಸುತ್ತವೆ. ಸ್ವಚ್ಛ ಪಾರದರ್ಶಕ ಕನ್ನಡಿಯನ್ನು ನೋಡಿ ನೀರೆಂದು ಭ್ರಮಿಸಿದಂತೆ ಮನುಷ್ಯನ ದೋಷಯುತ ವಿವೇಚನಾ ಶಕ್ತಿ ನಭಶ್ಚರ ಗೋಳಗಳ ಮುಂದೆ ಭಕ್ತಿಯಿಂದ ಶಿರಬಾಗುತ್ತದೆ. ಈ ಸಂಗತಿಯನ್ನು ಖುರ್‌ಆನ್ ವಚನ ಹೀಗೆ ವಿವರಿಸುತ್ತದೆ:

"ಇನ್ನಹು ಸರ್‌ಹುನ್ ಮ್ಮುಮರ್ರದುನ್ ಮ್ಮಿನ್ ಕವಾರೀರ" (27: 45)–ಇದು (ನೀನು ಭ್ರಮಿಸಿದಂತೆ) ನೀರಲ್ಲ) ಶುದ್ಧ ಪಾರದರ್ಶಕ ಕನ್ನಡಿ ಹಾಸಲಾದ ಅರಮನೆಯಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವರು ಸ್ವಯಂ ಪ್ರಕಾಶಪೂರ್ಣನಾಗಿದ್ದರೂ ಅತ್ಯಂತ ನಿಗೂಢ ಹಾಗೂ ಅವ್ಯಕ್ತನಾಗಿದ್ದಾನೆ. ಆ ಸರ್ವಾಧಿನಾಥನ ಸಂಬಂಧಿಸಿ ಸರಿಯಾದ ಜ್ಞಾನ ಪಡೆಯಲು ಈ ಸ್ಥೂಲ ಪ್ರಪಂಚದಲ್ಲಿ ಗೋಚರಿಸುವ ವ್ಯವಸ್ಥೆ ಮಾತ್ರವೇ ಪರ್ಯಾಪ್ತವಲ್ಲ. ಆದ್ದರಿಂದಲೇ ಈ ಬಾಹ್ಯ ಪ್ರಪಂಚದ ವ್ಯವಸ್ಥೆಯನ್ನು ಅವಲಂಬಿಸಿ ಚಿಂತನ ಮಾಡಿದವರಿಗೆ ಎಲ್ಲೆಡೆಯಲ್ಲೂ ಸುವ್ಯವಸ್ಥೆಯನ್ನೂ ಕ್ರಮಬದ್ಧತೆಯನ್ನೂ ಪ್ರಕೃತಿಯ ಅನೇಕ ಅದ್ಭುತಗಳನ್ನೂ ಕಂಡು ಆನಂದಿಸಲಿಕ್ಕೂ ಆಕಾಶದಲ್ಲೂ ಭೂಮಿಯಲ್ಲೂ ಸೂಕ್ಷ್ಮಾವಲೋಕನಮಾಡಿ ಪ್ರಕೃತಿಶಾಸ್ತ್ರ, ಖಗೋಳಶಾಸ್ತ್ರ, ತತ್ವಜ್ಞಾನ ಎಂಬಿತ್ಯಾದಿಗಳಲ್ಲಿ ನಿಪುಣತೆಯನ್ನು ಪಡೆಯಲಿಕ್ಕೂ ಸಾಧ್ಯವಾಗಿದೆ ಹೊರತು ಚರಾಚರಗಳಡಕವಾಗಿರುವ ಈ ಬ್ರಹ್ಮಾಂಡಕ್ಕೆ ಸೃಷ್ಟಿಕರ್ತನೂ ರಕ್ಷಕನೂ ಆಗಿರುವ ಒಬ್ಬ ದೇವನಿದ್ದಾನೆಂಬ ದೃಢವಾದ ಜ್ಞಾನ ಪಡೆಯಲು ಸಾಧ್ಯವಾಗಲಿಲ್ಲ. ಅವರಿಗೆ ದೇವರ ಅಸ್ತಿತ್ವಕ್ಕೆ ಸಂಬಂಧಿಸಿದ ಅಂಧಕಾರಮಯ ಸಂದೇಹಗಳಿಂದ ಮುಕ್ತರಾಗಲಿಕ್ಕೆ ಸಾಧ್ಯವಾಗಲಿಲ್ಲ. ಅವರ ಪೈಕಿ ಹೆಚ್ಚಿನವರು ಹಲವು ತಪ್ಪು ಕಲ್ಪನೆಗಳಿಗೆ ಗುರಿಯಾಗಿ ನಿರರ್ಥಕವಾದ ಊಹಾಪೋಹಗಳಲ್ಲಿ ಸಿಲುಕಿಕೊಂಡರು. ಸೃಷ್ಟಿಕರ್ತನಿಗೆ ಸಂಬಂಧಿಸಿದ ಅನ್ವೇಷಣೆಯಲ್ಲಿ ಅವರ ವಿಜ್ಞಾನ ಅವರಿಗೆ ಯಾವ ವಿಧದಲ್ಲಾದರೂ ಸಹಾಯಕವಾಗಿದ್ದರೆ, ಈ ಪರಿಪೂರ್ಣವೂ ಅನ್ಯೂನವೂ ಆದ ಪ್ರಕೃತಿ ವ್ಯವಸ್ಥೆಯನ್ನು ವೀಕ್ಷಿಸಿದಾಗ ಈ ಸುವ್ಯವಸ್ಥಿತವಾದ ಬ್ರಹ್ಮಾಂಡ ಕ್ರಮಕ್ಕೆ ಖಂಡಿತವಾಗಿಯೂ ಒಬ್ಬ ಸೃಷ್ಟಿಕರ್ತನೂ ನಿಯಾಮಕನೂ ಇರಬೇಕೆಂಬ ಒಂದು ಅನುಮಾನಕ್ಕೆ ಅವರು ತಲುಪುವಷ್ಟರಮಟ್ಟಿಗೆ ಮಾತ್ರವಾಗಿದೆ. ವಾಸ್ತವದಲ್ಲಿ ಈ ಅರಿವು ದೇವರ ಅಸ್ತಿ

ತ್ವದ ಬಗ್ಗೆ ಅಪೂರ್ಣವೂ ಅಪಕ್ವವೂ ಆದ ಜ್ಞಾನವಾಗಿದೆ. ಏಕೆಂದರೆ ವಿಸ್ಮಯಕರವಾದ ವ್ಯವಸ್ಥೆಯಿಂದ ಕೂಡಿದ ಈ ಪ್ರಪಂಚಕ್ಕೆ ಒಬ್ಬ ಕರ್ತನಿರಬೇಕೆಂಬ ಅನುಮಾನಕ್ಕೂ ಯಥಾರ್ಥದಲ್ಲಿ ಅವನಿದ್ದಾನೆಂಬ ದೃಢಜ್ಞಾನಕ್ಕೂ ತಮ್ಮೊಳಗೆ ಬಹಳ ಅಂತರವಿದೆ. ಸಂಕಲ್ಪಜ್ಞಾನವಾದರೋ ಮನಸ್ಸಿಗೆ ಸರಿಯಾದ ಸಮಾಧಾನ ಮತ್ತು ಸಂತೃಪ್ತಿಯನ್ನು ನೀಡಲಿಕ್ಕೋ, ಸಂದೇಹಗಳನ್ನು ಸಂಪೂರ್ಣ ದೂರೀಕರಿಸಲಿಕ್ಕೋ ಪರ್ಯಾಪ್ತವಲ್ಲ. ದೇವರ ಸಂಬಂಧಿಸಿ ಪರಿಪೂರ್ಣವೂ ಪರಮಾರ್ಥವೂ ಆದ ಜ್ಞಾನಲಬ್ಧಿಗಾಗಿ ಮನುಷ್ಯನ ಸ್ವಾಭಾವಿಕವಾಗಿರುವ ದಾಹವನ್ನು ಶಮನಗೊಳಿಸಲಿಕ್ಕೋ ತದ್ವಿಷಯದಲ್ಲಿ ಅವನಲ್ಲುಂಟಾಗುವ ಸಂಶಯಗಳನ್ನು ನೀಗಿಸಲಿಕ್ಕೋ ಪರ್ಯಾಪ್ತವಾದ ಪಾನೀಯವಲ್ಲ ಅದು. ಪ್ರಕೃತಿಯ ಅಧ್ಯಯನದಿಂದುಂಟಾಗುವ ಆ ಅಪಕ್ವಜ್ಞಾನ ನ್ಯೂನತೆಯನ್ನು ಹೊಂದಿದ್ದೂ ಅಪಾಯಕಾರಿಯೂ ಆಗಿದೆ. ಏಕೆಂದರೆ ಅದರಲ್ಲಿ ಸಾರಯುಕ್ತ ತಥ್ಯಕ್ಕಿಂತ ವಿತರ್ಕಗಳೇ ಹೆಚ್ಚು.

### ಪರಮಾತ್ಮನ ವಚನಾಮೃತ

ಪ್ರಕೃತಿಯಲ್ಲಿ ಗೋಚರಿಸಲ್ಪಡುವ ಕಾರ್ಯ ವಿಧಾನದಿಂದ ಸರ್ವಶಕ್ತನಾದ ಪರಮಾತ್ಮನ ಅಸ್ತಿತ್ವ ಸ್ಪಷ್ಟಗೊಳ್ಳುವ ರೀತಿಯಲ್ಲೇ ಅವನು ವಚನಗಳ ಮೂಲಕವೂ ತನ್ನ ಇರುವಿಕೆಯನ್ನು ದಾಸರಿಗೆ ಅಭಿವ್ಯಕ್ತಿಗೊಳಿಸದಿದ್ದರೆ, ಕೇವಲ ಅವನ ಕರ್ಮಕುಶಲತೆಯನ್ನು ಕಂಡು ವಿಚಾರವಂತ ಆಸ್ತಿಕ ಭಾವನೆಯನ್ನು ಹೊಂದುವುದು ತೃಪ್ತಿಕರವಲ್ಲ. ಉದಾಹರಣೆಗಾಗಿ, ಒಂದು ಕೋಣೆಯ ಬಾಗಿಲುಗಳೆಲ್ಲಾ ಒಳಗಿನಿಂದ ಮುಚ್ಚಲ್ಪಟ್ಟು ಕಾಣುವ ಪಕ್ಷದಲ್ಲಿ ಅವುಗಳನ್ನು ಒಳಗಿನಿಂದ ಮುಚ್ಚಿದ ಒಬ್ಬ ಅಲ್ಲಿರಬೇಕೆಂದು ನಾವು ಭಾವಿಸುತ್ತೇವೆ. ಕಾರಣವೇನೆಂದರೆ ಒಳಗಿನ ಚಿಲಕ ಹೊರಗಿನಿಂದ ಹಾಕಲು ಸಾಧ್ಯವಿಲ್ಲವಷ್ಟೆ. ಆದರೆ ವರ್ಷಗಳು ಕಳೆದರೂ ಆ ಕೋಣೆಯಿಂದ ಯಾವ ಶಬ್ದವನ್ನೂ ಕೇಳದಿದ್ದರೆ ಹೊರಗಿನಿಂದ ಆವರ್ತಿಸಾವರ್ತಿಸಿ ಕರೆದರೂ ಯಾವ ಉತ್ತರವೂ ಲಭಿಸದಿದ್ದರೆ, ಅದರೊಳಗೆ ಯಾರೋ ಇದ್ದಾರೆಂಬ ವಿಚಾರವನ್ನು ನಾವು ಬದಲಾಯಿಸಬೇಕಾಗುತ್ತದೆ. ಮಾತ್ರವಲ್ಲ, ಅದರೊಳಗೆ ಯಾರೂ ಇಲ್ಲವೆಂದೂ ಅಜ್ಞಾತವಾದ ಯಾವುದೋ ಕಾರಣವಶಾತ್ ಒಳಗಿನ ಚಿಲಕ ಬಿದ್ದಿರಬೇಕೆಂದೂ ನಾವು ಅಭಿಪ್ರಾಯಪಡುತ್ತೇವೆ. ಈ ಪ್ರಪಂಚದ ಕರ್ತನಾದ ಪರಮಾತ್ಮನ ಅಸ್ತಿತ್ವದ ಕುರಿತಾಗಿ ಮೀಮಾಂಸಕರ ಅನ್ವೇಷಣೆ ಕೇವಲ ಪ್ರಕೃತಿಯ ಕರ್ಮಕೌಶಲ್ಯವೆಂಬ ಒಂದೇ ವಿಷಯವನ್ನು ಅವಲಂಬಿಸಿರುವುದರಿಂದ ಅವರಿಗುಂಟಾದ ಅನುಭವ ಸಹ ಇದೇ ಆಗಿದೆ. ಮಹಾಮಹಿಮನೂ ಜೀವಂತನೂ ಆಗಿರುವ ಪರಮಾತ್ಮನನ್ನು, ಅಗೆದು ನೋಡಿದಾಗ ಮಣ್ಣಿನಡಿಯಲ್ಲಿ ಮಾತ್ರ ಕಾಣಬಹುದಾದ ಶವಶರೀರದಂತೆ ತಿಳಿದುಕೊಳ್ಳುವುದು ಮಹಾದೊಡ್ಡ ಪ್ರಮಾದವಾಗಿದೆ. ಪರಮಾತ್ಮನ ಅಸ್ತಿತ್ವ ಲೋಕಕ್ಕೆ ಬಹಿರಂಗವಾಗಬೇಕಾದರೆ ಮನುಷ್ಯನ ಸಹಾಯ ಮತ್ತು ಪ್ರಯತ್ನ ಅಗತ್ಯವೆಂದಾದರೆ ನಾವು ಅವನ ಮೇಲಿಟ್ಟಿರುವ ಪ್ರತ್ಯಾಶೆಗಳೆಲ್ಲಾ ವ್ಯರ್ಥ. ಆದರೆ ಅನಾದ್ಯಂತನಾದ ಪರಮಾತ್ಮನು ಆದಿಕಾಲದಿಂದಲೇ ತನ್ನ ಸ್ಪಷ್ಟ ಹಾಗೂ ಅನುಗ್ರಹದಾಯಕ ವಚನಗಳ ಮೂಲಕ ತನ್ನ ಸಾನಿಧ್ಯವನ್ನು ಬಹಿರಂಗಪಡಿಸಿ, ಜನರನ್ನು ತನ್ನೆಡೆಗೆ ಕರೆಯುತ್ತಿದ್ದಾನೆ. ಮನುಷ್ಯನ ಪ್ರಯತ್ನ ಇಲ್ಲದಿರುತ್ತಿದ್ದರೆ ನಿತ್ಯನೂ ಸನಾತನೂ ಆಗಿರುವ ಜಗದೀಶನ ಬಗ್ಗೆ ಅವನ ಸೃಷ್ಟಿಗಳಿಗೆ ತೀರಾ ತಿಳಿಯುತ್ತಿರಲಿಲ್ಲವೆಂದೋ, ಈ ವಿಷಯದಲ್ಲಿ ಪರಮಾತ್ಮನು ಮನುಷ್ಯನಿಗೆ ಋಣಿಯಾಗಿರುವನೆಂದೋ, ತತ್ವಜ್ಞಾನಿಗಳು ಇಲ್ಲದಿರುತ್ತಿದ್ದರೆ ಪ್ರಪಂಚದ ಸೃಷ್ಟಿಕರ್ತ ಅಜ್ಞಾತನಾಗಿಯೇ ಇರುತ್ತಿದ್ದನೆಂದೋ ಭಾವಿಸುವುದಾದರೆ ಅದು ಮಹಾ ದುರಭಿಮಾನವೆಂದೇ ಹೇಳಬೇಕಾಗುತ್ತದೆ. ಪರಮಾತ್ಮನ ಅಸ್ತಿತ್ವದ ಕುರಿತು ಅವನ ಶಬ್ದಶ್ರವಣದ ಮೂಲಕ ಲಭ್ಯವಾಗುವ ಸ್ಪಷ್ಟವಾದ ಸಾಕ್ಷ್ಯವನ್ನು, ಅವನು ಹೇಗೆ ಮಾತನಾಡುತ್ತಾನೆ? ಅವನಿಗೆ ಮಾತನಾಡಲಿಕ್ಕೆ ನಾಲಗೆ ಇದೆಯೇ? ಎಂದು ಅಪಲಪಿಸುವುದು ಸಹ ಧಾರ್ಷ್ಟ್ಯವಾಗಿದೆ. ಪರಮಾತ್ಮನು ಆಕಾಶಗೋಳಗಳನ್ನೂ ಭೂಮಿಯನ್ನೂ ಭೌತಿಕ ಕರಗಳಿಲ್ಲದೆಯೇ ಸೃಷ್ಟಿಸಲಿಲ್ಲವೇ? ಭೌತಿಕ ಕಣ್ಣುಗಳಿಲ್ಲದೆಯೇ ಅವನು ಈ ಪ್ರಪಂಚ ಸಕಲವನ್ನೂ ಕಾಣುವುದಿಲ್ಲವೇ? ಭೌತಿಕ ಕಿವಿಗಳಿಲ್ಲದೆಯೇ ಅವನು ಭಕ್ತರ ಶಬ್ದಗಳನ್ನು ಆಲಿಸುವುದಿಲ್ಲವೇ? ಹಾಗಿರುವಾಗ ಅವನು ಭೌತಿಕ ನಾಲಗೆ ಇಲ್ಲದೆಯೇ ಮಾತನಾಡಬೇಕಲ್ಲವೇ? ಪೂರ್ವಕಾಲಗಳಲ್ಲಿ ಪರಮಾತ್ಮನು ಮನುಷ್ಯರೊಡನೆ ಮಾತನಾಡುತ್ತಲೂ ತನ್ನ ಕುರಿತು ಅವರಿಗೆ ಅರಿವು ನೀಡುತ್ತಲೂ ಇದ್ದರೂ ಈಗ ಅವನು ಮಾತನಾಡುವುದಿಲ್ಲ ಎಂದು ಹೇಳುವುದು ಆಧಾರರಹಿತವಾಗಿದೆ. ಅವನ ಸಂಭಾಷಣೆ, ಸಂಬೋಧನೆ ಇತ್ಯಾದಿಗಳು ಯಾವುದಾದರೂ ಒಂದು ಪ್ರತ್ಯೇಕ ಕಾಲಕ್ಕೆ

ಸೀಮಿತಗೊಂಡಿರುವುದು ಸಾಧ್ಯವಿಲ್ಲ. ಹಿಂದಿನ ಕಾಲಗಳಲ್ಲಿ ಮಾತನಾಡುತ್ತಿದ್ದ ಪರಮಾತ್ಮನು ಈಗಲೂ ಮಾತನಾಡುತ್ತಲೂ ಅವನನ್ನು ಅನ್ವೇಷಿಸುತ್ತಿರುವ ಭಕ್ತದಾಸರಿಗೆ ತನ್ನ ವಚನಗಳಿಂದ ಅನುಗ್ರಹಿಸುತ್ತಲೂ ಇದ್ದಾನೆ. ಅವನ ವರಪ್ರಸಾದಗಳ ಕವಾಟಗಳು ಪೂರ್ವಕಾಲಗಳಂತೆಯೇ ಈಗಲೂ ತೆರೆದಿರಿಸಲ್ಪಟ್ಟಿವೆ. ಸನ್ಮಾರ್ಗದರ್ಶನಕ್ಕಾಗಿ ಅತ್ಯಾವಶ್ಯಕಗಳಾದ ನಿಯಮಸಂಹಿತೆಗಳನ್ನೂ ನೀತಿ ತತ್ವಗಳನ್ನೂ ಕ್ರೋಢೀಕರಿಸಲಾದ ಇಸ್ಲಾಮಿಕ ಧರ್ಮಶಾಸ್ತ್ರವು ಪರಮಾತ್ಮನಿಂದ ಹೊಸ ಒಂದು ನಿಯಮಶಾಸ್ತ್ರದ ಆವಶ್ಯಕತೆಯನ್ನು ಇಲ್ಲದಂತೆ ಮಾಡಿದೆಯೆಂಬುದೂ. ಪ್ರವಾದಿತ್ವವೂ ದೌತ್ಯವೂ ನಮ್ಮ ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಪೈಗಂಬರರಲ್ಲಿ (ದೇವರ ಇಷ್ಟಾಶೀರ್ವಾದಗಳೂ ಅನುಗ್ರಹಗಳೂ ಅವರ ಮೇಲೆ ಸುರಿಯಲಿ) ಪೂರ್ಣತೆಯನ್ನು ಪಡೆದಿದೆಯೆಂಬುದೂ ಅವಿತರ್ಕಿತವಾಗಿದ್ದರೂ ಪರಮಾತ್ಮನ ವಚನಾಮೃತ ಕೊನೆಗೊಂಡಿಲ್ಲ.

ಈ ಕೊನೆಯ ದೈವಿಕ ಪ್ರಕಾಶ ಅರಬ್ ರಾಜ್ಯದಿಂದ ಪ್ರಕಟಗೊಳ್ಳಬೇಕೆಂಬುದು ದೈವಕಲ್ಪಿತವಾಗಿತ್ತು. ಪರಮಾತ್ಮನ ಈ ಸಂಕಲ್ಪಕ್ಕೆ ಒಂದು ಉದ್ದೇಶವಿತ್ತೆಂದು ನಮಗೆ ಕಾಣಲು ಸಾಧ್ಯವಿದೆ. ಅರಬರು ಇಸ್ರಾಯೀಲ್ ವಂಶಜರ ಸಕಲ ವಿಧ ಸಂಬಂಧಗಳಿಂದ ಬೇರ್ಪಟ್ಟು ಫಾರಾನ್ ಎಂಬ ನಿರ್ಜನ ಪ್ರದೇಶದಲ್ಲಿ ದೇವರ ಅಧೀನದಲ್ಲಿ ಉಪೇಕ್ಷಿಸಲ್ಪಟ್ಟ ಇಸ್ಮಾಯೀಲ್ ವಂಶಜರಾಗಿದ್ದರು. ಫಾರಾನ್ ಎಂಬ ಅರಬಿ ಪದದ ಅರ್ಥ 'ಓಡಿಹೋದ ಈರ್ವರು' ಎಂದಾಗಿದೆ. ಇಸ್ಮಾಯೀಲ್ ಇಸ್‌ಹಾಕ್‌ನೊಂದಿಗೆ ಸಹಭಾಗಿಯಾಗಿರಲಿಕ್ಕಿಲ್ಲವೆಂದು ಹೇಳಲ್ಪಟ್ಟಿರುವ ಪ್ರಕಾರವೇ ಹಝ್‌ರತ್ ಇಬ್ರಾಹಿಂ ಪ್ರವಾದಿಯವರಿಂದ ಬೇರ್ಪಡಿಸಲ್ಪಟ್ಟ ಇಸ್ಮಾಯೀಲ್ ವಂಶಜರಿಗೆ ಇಸ್ರಾಯೀಲ್ ನಿಯಮದಲ್ಲಿ ಯಾವ ಸಹಭಾಗಿತ್ವವೂ ಇರಲಿಲ್ಲ. ಹೀಗೆ ಅವರು ಬಂಧುಜನರಿಂದ ಪರಿತ್ಯಜಿಸಲ್ಪಟ್ಟವರಾಗಿದ್ದರು. ಬೇರಾವ ಜನಾಂಗದವರೊಡನೆ ಅವರಿಗೆ ಬಾಂಧವ್ಯವಿರಲಿಲ್ಲ. ಇತರ ರಾಜ್ಯಗಳಲ್ಲೆಲ್ಲಾ ಪರಮಾತ್ಮನ ಪ್ರವಾದಿಯರ ಪ್ರಬೋಧನೆಗಳು ಒಂದೊಮ್ಮೆ ವ್ಯಾಪಿಸಿತ್ತೆಂದು ಅನುಮಾನಿಸಬಹುದಾದ ನಿಯಮ ತತ್ವಗಳ ಮತ್ತು ಆರಾಧನಾ ಪದ್ಧತಿಗಳ ಕೆಲವು ಚಿಹ್ನೆಗಳು ಗೋಚರಿಸುತ್ತವೆ. ಆದರೆ ಅರಬ್ ರಾಜ್ಯ ಈ ರೀತಿಯ ಪ್ರಬೋಧನೆಗಳ ಕುರಿತು ತೀರಾ ಅಜ್ಞತೆಯಿಂದ ವರ್ತಿಸಿತ್ತು. ಮಾತ್ರವಲ್ಲ, ಈ ವಿಷಯದಲ್ಲಿ ಅದು ಇತರ ಯಾವ ರಾಜ್ಯಕ್ಕಿಂತಲೂ ಅತ್ಯಂತ ಹಿಂದೆಬಿದ್ದಿತ್ತು. ಒಟ್ಟಾರೆ, ನಿಯಮದಾನಪರವಾದ ಪ್ರವಾದಿತ್ವದ ಅಂತ್ಯಸ್ಥಾನ ಅರಬ್ ರಾಜ್ಯವಾಗಿರಬೇಕೆಂದೂ ಅಲ್ಲಿಯ ಪ್ರವಾದಿಯ ದೌತ್ಯ ಸಾರ್ವಲೌಕಿಕವಾಗಿರಬೇಕೆಂದೂ ದೈವಕಲ್ಪಿತವಾಗಿತ್ತು. ಆ ಪ್ರವಾದಿಶ್ರೇಷ್ಠರು ಸರ್ವಜನರನ್ನು ಅನುಗ್ರಹಿಸಲಿಕ್ಕೂ ಅವರಲ್ಲಿ ಕೂಡಿಕೊಂಡಿರುವ ನ್ಯೂನತೆಗಳನ್ನು ಪರಿಹರಿಸಲಿಕ್ಕೂ ಬೇಕಾಗಿ ಆಗಮಿಸಿದರು. ಅವರು ತಂದ ಧರ್ಮಶಾಸ್ತ್ರ ಇನ್ನು ಯಾವುದೇ ನೀತಿಶಾಸ್ತ್ರದ ಆವಶ್ಯಕತೆಯಿಲ್ಲದ ರೀತಿಯಲ್ಲಿ ಪರಿಪೂರ್ಣವಾಗಿದೆ. ಆ ನಿಯಮಗ್ರಂಥದ ಸಂಸ್ಕರಣ ಪದ್ಧತಿಗಳು ಪೂರ್ವಮತಗ್ರಂಥಗಳಂತೆ ಯಾವುದಾದರೂ ಪ್ರತ್ಯೇಕ ಜನಾಂಗಕ್ಕೆ ಮಾತ್ರವುಳ್ಳದ್ದಲ್ಲ. ಅದು ಸರ್ವಮಾನವ ಕುಲದ ಸುಧಾರಣೆಯನ್ನು ಇಚ್ಛಿಸುತ್ತದೆ. ಮನುಷ್ಯನ ನೈತಿಕ ಶಿಕ್ಷಣಕ್ಕೆ ಅತ್ಯಾವಶ್ಯಕವಾದ ಸಕಲ ಪದ್ಧತಿಗಳನ್ನು ಅದು ವಿವರಿಸಿದೆ. ಅಪರಿಷ್ಕೃತರಿಗೆ ಮಾನವತೆಯ ಸಿದ್ಧಾಂತ ಹಾಗೂ ಶಿಷ್ಟಾಚಾರಗಳನ್ನು ಅದು ಕಲಿಸಿತು. ಅನಂತರ ಉತ್ಕೃಷ್ಟ ಅಧ್ಯಾಪನೆಗಳನ್ನು ನೀಡಿ ಅವರನ್ನು ನೀತಿವಂತರನ್ನಾಗಿ ಮಾಡಿತು.


ಈ ನೀತಿಶಾಸ್ತ್ರ ಗ್ರಂಥವಾದ ಪವಿತ್ರ ಖುರ್‌ಆನ್ ಸಹಜ ಸ್ವಭಾವಗಳನ್ನೂ ಉತ್ಕೃಷ್ಟ ನೈತಿಕ ಗುಣಗಳನ್ನೂ ಬೇರ್ಪಡಿಸಿ ಅವುಗಳ ಭಿನ್ನತೆಯನ್ನು ಸ್ಪಷ್ಟಪಡಿಸಿತು. ಅದು ಮನುಷ್ಯನನ್ನು ಸಹಜಗುಣದ ಸ್ಥಿತಿಯಿಂದ ನೈತಿಕ ಸ್ಥಿತಿಯಾದ ಉತ್ಕೃಷ್ಟ ಸ್ಥಾನಕ್ಕೇರಿಸುವುದರಲ್ಲಿ ಮಾತ್ರ ತೃಪ್ತಿಪಡದೆ ಅದರಾಚೆಗಿರುವ ಆಧ್ಯಾತ್ಮಿಕ ಸ್ಥಿತಿಗೆ ಅವನನ್ನು ತಲುಪಿಸುವರೆ ಪರ್ಯಾಪ್ತವಾದ ಪವಿತ್ರ ಜ್ಞಾನದ ಕವಾಟಗಳನ್ನು ತೆರೆದೂ ಸಹ ಇಟ್ಟಿರುತ್ತದೆ. ಅಷ್ಟು ಮಾತ್ರವಲ್ಲ ಅದು ಲಕ್ಷಗಟ್ಟಲೆ ಜನರನ್ನು ಪರಮಾರ್ಥ ಜ್ಞಾನದಿಂದ ಪ್ರಬುದ್ಧರನ್ನಾಗಿ ಮಾಡಿ ದೇವರ ಸನ್ನಿಧಿಗೆ ತಲುಪಿಸಿರುತ್ತದೆ. ಈ ಪ್ರಕಾರದಲ್ಲಿ ಮೊದಲು ಪ್ರಸ್ತಾಪಿಸಲಾದ ಮನುಷ್ಯನ ಮೂರು ವಿಧ ಅವಸ್ಥೆಗಳ ಸಂಬಂಧಿಸಿ ಆ ದಿವ್ಯಗ್ರಂಥ ಪರಿಪೂರ್ಣವಾದ ಸಂಸ್ಕರಣ ಮಾರ್ಗಗಳನ್ನು ನಿರ್ದೇಶಿಸಿದೆ. ಪವಿತ್ರ ಖುರ್‌ಆನ್ ನೈತಿಕ ಸುಧಾರಣೆಗೆ ಅತ್ಯಾವಶ್ಯಕವಾದ ಅತ್ಯಧಿಕ ನಿರ್ದೇಶಗಳ ಒಂದು ಸಂಹಿತೆಯಾದುದರಿಂದ ಅದರ ಪರಿಪೂರ್ಣತೆ ಹಾಗೂ ಶ್ರೇಷ್ಠತೆಯ ಬಗ್ಗೆ ಅದು ಸ್ಪಷ್ಟವಾಗಿ ವಾದಿಸಿರುವುದನ್ನು ಕಾಣಬಹುದು. ಅದು ಹೀಗೆನ್ನುತ್ತದೆ:

“ಅಲ್‌ಯೌಮ ಅಕ್ಮಲ್ತುಲಕುಂ ದೀನಕುಂ ವ ಅತ್ಮಮ್ತು ಅಲೈಕುಂ ನಿಅ್‌ಮತೀ ವ ರಲೀತು ಲಕುಮುಲ್ ಇಸ್ಲಾಮ ದೀನಾ” (5:4) — ಇಂದಿನ ದಿವಸ ನಾನು ನಿಮಗೆ ನಿಮ್ಮ ಮತವನ್ನು ಪರಿಪೂರ್ಣಗೊಳಿಸಿ ನನ್ನ ಅನುಗ್ರಹವನ್ನು ನಿಮಗೆ ಪೂರ್ತಿಗೊಳಿಸಿ ನಿಮಗೆ ಇಸ್ಲಾಮನ್ನು ನಿಮ್ಮ ಮತವನ್ನಾಗಿಸಿ ತೃಪ್ತಿಗೊಂಡಿದ್ದೇನೆ.

ಇಸ್ಲಾಮಿನಲ್ಲಿ ಮತವು ಅದರ ಪೂರ್ಣತೆಯನ್ನು ಪಡೆದಿದೆಯೆಂದು ಖುರ್‌ಆನ್ ವಾಕ್ಯ ಒತ್ತಿ ಹೇಳುತ್ತದೆ. ಎಂದರೆ ಮತದ ಪರಿಪೂರ್ಣವಾದ ಸ್ಥಿತಿ ‘ಇಸ್ಲಾಂ’ ಎಂಬ ಪದದ ಅರ್ಥದಲ್ಲಿ ಒಳಗೊಂಡಿದೆಯೆಂದಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ದೈವೇಚ್ಛೆಗಾಗಿ ಪೂರ್ಣರೀತಿಯಲ್ಲಿ ವಿಧೇಯನಾಗಿದ್ದುಕೊಂಡು ಆತ್ಮತ್ಯಾಗದ ಮೂಲಕ, ತ್ಯಾಗವು ಬರೇ ಮಾತಿನಲ್ಲಿರದೆ. ಕಾರ್ಯ ರೂಪದಲ್ಲಿ, ಬಹಿರಂಗಪಡಿಸುವ ಮೂಲಕ ಮೋಕ್ಷಮಾರ್ಗವನ್ನು ಪಡೆಯುವ ಪರಮ ಅನುಸರಣಪಥವು ಇಸ್ಲಾಂ ಎಂಬುದರ ಅರ್ಥವಾಗಿದೆ. ಈ ಸ್ಥಿತಿಯಲ್ಲಿ ಸಕಲ ಶ್ರೇಷ್ಠಗುಣಗಳು ಅಂತಿಮ ಹಂತವನ್ನು ಪಡಯುತ್ತವೆ.

ಆದರೆ ಅಪೂರ್ಣವಾದ ಬುದ್ಧಿಶಕ್ತಿಯನ್ನು ಮಾತ್ರ ಆಶ್ರಯಿಸಿ ವರ್ತಿಸಿದ ಮೀಮಾಂಸಕರಿಗೆ ಸಾಕ್ಷಾತ್ ಪರಮಾತ್ಮನನ್ನು ಕಾಣಲು ಸಾಧ್ಯವಾಗಲಿಲ್ಲ. ಪವಿತ್ರ ಖುರ್‌ಆನ್ ಆ ಸತ್ಯದೇವನನ್ನು ತಿಳಿದು ಕೊಳ್ಳಲು ಸರಿಯಾದ ಜ್ಞಾನಮಾರ್ಗವನ್ನು ಪ್ರದಾನ ಮಾಡಿದೆ. ಪ್ರಪಂಚಕರ್ತನ ಸಂಬಂಧಿಸಿ ಸರಿಯಾದ ಜ್ಞಾನವನ್ನು ನೀಡಲು ಆ ಪವಿತ್ರ ಗ್ರಂಥ ಎರಡು ಮಾರ್ಗಗಳನ್ನು ನಿರ್ದೇಶಿಸಿದೆ. ಪ್ರಥಮವಾಗಿ ವಿವೇಕ ಮಾರ್ಗ. ಮನುಷ್ಯನ ವಿವೇಕ ವೈಚಾರಿಕ ಆಧಾರಗಳನ್ನು ಸೃಜಿಸಲು ಬಹಳ ಶಕ್ತಿಶಾಲಿ ಮತ್ತು ತೀಕ್ಷ್ಣತರವಾಗಿದ್ದು ಅದು ಮನುಷ್ಯನನ್ನು ತಪ್ಪುಮಾಡದಂತೆ ತಡೆಯುತ್ತದೆ. ದ್ವಿತೀಯ ಮಾರ್ಗ ಆಧ್ಯಾತ್ಮಿಕವಾದುದು. ಇದರ ಕುರಿತು ಮೂರನೆಯ ಪ್ರಶ್ನೆಯ ಉತ್ತರದಲ್ಲಿ ವಿವರಿಸಲಾಗುವುದು.

(ಮುಂದುವರಿಯುವುದು)



ಇತ್ತೀಚೆಗೆ ಉದ್ಘಾಟಿಸಲ್ಪಟ್ಟ ಕ್ವಿಲೊನಿನ ಅಹ್ಮದಿಯಾ ಮಸೀದಿ.
ಇದರ ನಿರ್ಮಾಣದ ಎಲ್ಲಾ ವೆಚ್ಚವನ್ನು ಕರುನಾಗಪಳ್ಳಿಯ
ಜನಾಬ್ ಎಚ್. ಎ. ಖಹ್ಹಾರ್ ಸಾಹೇಬರು
ವಹಿಸಿರುವರು.


READ

# BADR

URDU WEEKLY

Single Copy: 0-30 Annual Subscription: Rs. 15/-

Apply To: The Manager,


"Badr" Urdu Weekly, P. O. QADIAN-143516. (Punjab)

Regd. with the Registrar of Newspapers for India. Regd. No. R. N. 27354/75
YUGARASHMI, Kannada Quarterly, July-September 1979/Wafa-Tabook 1358

## English Translation of The Holy Quran

with

## ARABIC TEXT AND EXTENSIVE INDEX




Price: Rs. 15-00

Postal Charges Extra

## Ahmadiyya English Literature

1. The Teachings of Islam — 6—00
   By Hazrat Mirza Ghulam Ahmad
2. Jesus in India — 2—25
   By Hazrat Mirza Ghulam Ahmad
3. Characteristics of the Quranic Teachings — 1—00
   By Hazrat Mirza Bashiruddin Mahmud Ahmad
4. The Holy Prophet Muhammad — 1—50
   By Hazrat Mirza Bashiruddin Mahmud Ahmad
5. Where Did Jesus Die? — 2—25
   By J. D. Shams, Ex-Imam, London Mosque

Write to: **NAZIR DAWAT-O-TABLIGH,** QADIAN-143516 (Punjab)

Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya
Mangalore at 23/1008 Ansari Road, Bunder, Mangalore-575001.